ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಕೋಲಾರ ಜಿಲ್ಲೆಯ ಮಾಲೂರಿನಲ್ಲಿ ಹಾಲಿ ಪದ್ಧತಿಯ ಬದಲಿಗೆ ಪೂರ್ಣ ಕಾಲಿಕ ಕಾರ್ಮಿಕ ರಾಜ್ಯ ವಿಮಾ ಚಿಕಿತ್ಸಾಲಯವನ್ನು ಪ್ರಾರಂಭಿಸಲು ಸರ್ಕಾರದ ಮಂಜೂರಾತಿ ನೀಡಿದೆ. ಹಾಗೂ ಹೊಸದಾಗಿ ಪ್ರಾರಂಭಿಸುವ ಈ ಚಿಕಿತ್ಸಾಲಯಕ್ಕೆ ಅವಶ್ಯವಿರುವ ಈ ಕೆಳಕಂಡ ಹುದ್ದೆಗಳನ್ನು ಸೃಜಿಸಿಕೊಳ್ಳಲು ಅನುಮತಿ ನೀಡಲಾಗಿದೆ.

| ಕ್ರ. ಸಂ. | ಪದನಾಮ | ಸೃಜಿಸಬಹುದಾದ ಹುದ್ದೆಗಳ ಸಂಖ್ಯೆ |
|---|---|---|
| 1. | ವಿಮಾ ವೈದ್ಯಾಧಿಕಾರಿಗಳು | 03 ಹುದ್ದೆ |
| 2. | ಪ್ರಥಮ ದರ್ಜೆ ಸಹಾಯಕರು | 01 ಹುದ್ದೆ |
| 3. | ದ್ವಿತೀಯ ದರ್ಜೆ ಸಹಾಯಕರು | 01 ಹುದ್ದೆ |
| 4. | ಶುಶ್ರೂಷಕಿ | 02 ಹುದ್ದೆ |
| 5. | ಫಾರ್ಮಸಿಸ್ಟ್ | 02 ಹುದ್ದೆ |
| 6. | ಗ್ರೂಪ್ ಡಿ | 03 ಹುದ್ದೆ |
| | ಒಟ್ಟು | 12 ಹುದ್ದೆಗಳು |

ಇದಕ್ಕೆ ತಗಲುವ ವೆಚ್ಚವನ್ನು 2008-09ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ಅನುದಾನದ ಮಿತಿಯಲ್ಲಿಯೇ ಭರಿಸುವಂತೆ ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 588 ವೆಚ್ಚ 9/2008 ದಿನಾಂಕ:11-09-2008ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಗೋವಿಂದಸ್ವಾಮಿ)
ಪೀಠಾಧಿಕಾರಿ,
ಕಾರ್ಮಿಕ ಇಲಾಖೆ.
(ಕಾರಾವಿ ಯೋ (ವೈ) ಸೇವೆಗಳು)

25/9/08

ಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ಕಾರ್ಮಿಕ ರಾಜ್ಯ ವಿಮಾ ಯೋಜನೆ (ವೈ) ಸೇವೆಗಳು, ಬೆಂಗಳೂರು.
3. ಪ್ರಾದೇಶಿಕ ನಿರ್ದೇಶಕರು, ಕಾರ್ಮಿಕ ರಾಜ್ಯ ವಿಮಾ ನಿಗಮ, ಬೆಂಗಳೂರು.
4. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವೆಚ್ಚ-9, ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ.
6. ಶಾಖಾ ರಕ್ಷಾ ಕಡತ : ಹೆಚ್ಚುವರಿ ಪ್ರತಿ.

2010-11.

(6)

ಸಂ:ಅಭಿವೃದ್ಧಿ/03/03-04

ಸರ್ಕಾರದ ಆದೇಶ ಕಾಇ 17 ಎಲ್‌ಎಸ್‌ಐ 2009, ದಿನಾಂಕ:[illegible] 2009 ರ

ಯನ್ನು ಈ ಪತ್ರದೊಂದಿಗೆ ಲಗತ್ತಿಸಲಾಗಿದ್ದು ಸದರಿ [illegible]

[illegible]ಶನಾಲಯದಲ್ಲಿ ಸೇವಾ ವರದಿ ಮಾಡಿಕೊಂಡಿರುವ ಸಿಬ್ಬಂದಿಗಳಿಗೆ ಅವರ ಹೆಸರಿನ ಮುಂದೆ

[illegible]ಸಲಾದ ಸ್ಥಳಗಳಿಗೆ ಸ್ಥಳ ನಿಯುಕ್ತಿ ಮಾಡುವ ಬಗ್ಗೆ ಮುಂದಿನ ಕ್ರಮ ಕೈಗೊಳ್ಳುವಂತೆ

[illegible]ಸಿದೆ.

(ಡಾ|| ರಹೀಮುನ್ನಿಸಾ)

ನಿರ್ದೇಶಕರು.

ಕಾ.ರಾ.ವಿ.ಯೋಜನೆ ವೈದ್ಯಕೀಯ ಸೇವೆಗಳು.

[illegible]ರ್ದೇಶನಾಲಯದ ಸಿಬ್ಬಂದಿ ಸಂಕಲನಕ್ಕೆ

ಆಡಳಿತಾಧಿಕಾರಿಗಳು, ಕಾ.ರಾ.ವಿ.ಯೋಜನೆ ವೈದ್ಯಕೀಯ ಸೇವೆಗಳು

. ಲೆಕ್ಕಾಧಿಕಾರಿಗಳು, ಕಾ.ರಾ.ವಿ.ಯೋಜನೆ ವೈದ್ಯಕೀಯ ಸೇವೆಗಳು

. ಸಹಾಯಕ ಆಡಳಿತಾಧಿಕಾರಿಗಳು, ಕಾ.ರಾ.ವಿ.ಯೋಜನೆ ವೈದ್ಯಕೀಯ ಸೇವೆಗಳು

. ವೈದ್ಯಕೀಯ ಅಧೀಕ್ಷಕರು, ಕಾ.ರಾ.ವಿ. ಆಸ್ಪತ್ರೆ, ಇಂದಿರಾನಗರ, ಬೆಂಗಳೂರು

. ವಿಮಾ ವೈದ್ಯಾಧಿಕಾರಿಗಳು, ಕಾ.ರಾ.ವಿ. ಚಿಕಿತ್ಸಾಲಯ, ಬೊಮ್ಮಸಂದ್ರ

. ನಗದು ಸಂಕಲನ.

. ಕಛೇರಿ ಪ್ರತಿ

c/c

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಕಾ.ರಾ.ವಿ.ನಿಗಮ ಮಾದರಿ ಆಸ್ಪತ್ರೆ ರಾಜಾಜಿನಗರದಲ್ಲಿ ಪ್ರತಿನಿಯೋಜನೆ ಮೇರೆಗೆ ಕಾರ್ಯ ನಿರ್ವಹಿಸುತ್ತಿದ್ದ ಕಾ.ರಾ.ವಿ.ಇಲಾಖೆಯ ನಿಯೋಜನೆಯಿಂದ ಹಿಂದಿರುಗಿಸಲಾದ ಸಿಬ್ಬಂದಿಗಳಿಗೆ ಹುದ್ದೆಗಳ ಸಮೇತ ನೇಮಕಾತಿ ಮಾಡುವ ಬಗ್ಗೆ.

ಓದಲಾಗಿದೆ:-

ನಿರ್ದೇಶಕರು, ಕಾ.ರಾ.ವಿ.ಯೋಜನೆ (ವೈ) ಸೇವೆಗಳು, ರಾಜಾಜಿನಗರ, ಬೆಂಗಳೂರು-10

ಇವರ ಪತ್ರದ ಸಂಖ್ಯೆ: ಅಭಿವೃದ್ಧಿ/03/03-04, ದಿ: 16-06-2009. ಮತ್ತು 29-06-2009.

ಪ್ರಸ್ತಾವನೆ:-

ನಿರ್ದೇಶಕರು, ಕಾ.ರಾ.ವಿ.ಯೋಜನೆ (ವೈ) ಸೇವೆಗಳು, ರಾಜಾಜಿನಗರ, ಬೆಂಗಳೂರು-10 ಇವರ ಮೇಲೆ ಓದಲಾದ ದಿನಾಂಕ 16-06-2009. ಮತ್ತು 29-06-2009ರ ಪತ್ರದಲ್ಲಿ ಕಾ.ರಾ.ವಿ.ನಿಗಮದ ಮಾದರಿ ಆಸ್ಪತ್ರೆ, ರಾಜಾಜಿನಗರ, ಬೆಂಗಳೂರು ಇಲ್ಲಿ ನಿಯೋಜನೆ ಮೇರೆಗೆ ಕಾರ್ಯ ನಿರ್ವಹಿಸುತ್ತಿದ್ದ ಅಧಿಕಾರಿ /ಸಿಬ್ಬಂದಿಗಳ ಪೈಕಿ ವಿಲೀನಾತಿಗೆ ಇಚ್ಛಿಸದೇ ಇರುವ 131 ಅಧಿಕಾರಿ/ಸಿಬ್ಬಂದಿಗಳನ್ನು ಕಾ.ರಾ.ವಿ ನಿಗಮದವರು ದಿನಾಂಕ 30-06-2009 ರಂದು ಕಾ.ರಾ.ವಿ.ನಿಗಮ ಮಾದರಿ ಆಸ್ಪತ್ರೆಯಿಂದ ಕಾ.ರಾ.ವಿ.ಯೋ (ವ್ಯ) ಸೇವೆಗಳ ಇಲಾಖೆಗೆ ಹಿಂದಿರುಗಿಸಿದ್ದಾರೆ ಎಂದು ತಿಳಿಸಿರುತ್ತಾರೆ.

ಈ ಕೆಳಕಂಡ ಗ್ರೂಪ್ ಸಿ ವೃಂದದ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ನೌಕರರು ಹಿಂದಿರುಗಿದ್ದು ಈ ಹುದ್ದೆಗಳು ಕಾ.ರಾ.ವಿ. ಇಲಾಖೆಯಲ್ಲಿ ಇಲ್ಲದೇ ಇರುವುದರಿಂದ ಈ ಕೆಳಕಂಡ 10 ಹುದ್ದೆಗಳನ್ನು ಹುದ್ದೆ ಸಮೇತ ವೃಂದದ ಎದುರಿಗೆ ತೋರಿಸಲಾದ ಕಾ.ರಾ.ವಿ.ಆಸ್ಪತ್ರೆ/ಚಿಕಿತ್ಸಾಲಯಕ್ಕೆ ಸ್ಥಳಾಂತರಿಸಲು ಪ್ರಸ್ತಾಪಿಸಿರುತ್ತಾರೆ.

| ಕ್ರ.ಸಂ. | ಹೆಸರು ಮತ್ತು ಪದನಾಮ | ನೇಮಕಾತಿ ಮಾಡಿರುವ ಸ್ಥಳ |
|---|---|---|
| 1 | ಶ್ರೀ. ಪಾಂಡುರಂಗಪ್ಪ,<br>ಕಛೇರಿ ಅಧೀಕ್ಷಕರು | ಕಾ.ರಾ.ವಿ.ಚಿ. ಬೊಮ್ಮಸಂದ್ರ,<br>ಬೆಂಗಳೂರು |
| 2 | ಶ್ರೀ. ಜಗನ್ನಾಥ್ ರಾವ್. ಸಿ.ಆರ್.<br>ಕಛೇರಿ ಅಧೀಕ್ಷಕರು | ಕಾ.ರಾ.ವಿ.ಆ. ಇಂದಿರಾನಗರ,<br>ಬೆಂಗಳೂರು |
| 3 | ಶ್ರೀ. ಶ್ರೀನಿವಾಸ.ಟಿ.ಎಂ.<br>ದ್ವಿ.ದ.ಸ. | ಕಾ.ರಾ.ವಿ.ಆ. ಇಂದಿರಾನಗರ,<br>ಬೆಂಗಳೂರು |
| 4 | ಶ್ರೀ. ಬಸವರಾಜ್ ಗಾಣಿಗೇರ,<br>ದ್ವಿ.ದ.ಸ. | ಕಾ.ರಾ.ವಿ.ಆ. ಇಂದಿರಾನಗರ,<br>ಬೆಂಗಳೂರು |
| 5 | ಶ್ರೀ. ಗಂಗಣ್ಣ<br>ದ್ವಿ.ದ.ಸ. | ಕಾ.ರಾ.ವಿ.ಆ. ಇಂದಿರಾನಗರ,<br>ಬೆಂಗಳೂರು |
| 6 | ಶ್ರೀ. ಕುಮಾರ್.ಬಿ.<br>ದ್ವಿ.ದ.ಸ. | ಕಾ.ರಾ.ವಿ ನಿರ್ದೇಶನಾಲಯ,<br>ಬೆಂಗಳೂರು |
| 7 | ಶ್ರೀ. ಕಾಮರಾಜ್. ಜಿ.ಆರ್.<br>ದ್ವಿ.ದ.ಸ | ಕಾ.ರಾ.ವಿ ನಿರ್ದೇಶನಾಲಯ,<br>ಬೆಂಗಳೂರು |
| 8 | ಶ್ರೀ. ಪುಟ್ಟರೇವಣ್ಣ ಆರ್.<br>ದ್ವಿ.ದ.ಸ | ಕಾ.ರಾ.ವಿ ನಿರ್ದೇಶನಾಲಯ,<br>ಬೆಂಗಳೂರು |

| | | |
|---|---|---|
| 9 | ಶ್ರೀಮತಿ. ನಾಗರತ್ನ.ಕೆ.<br>ಶೀಘ್ರಲಿಪಿಗಾರ್ತಿ. | ಕಾ.ರಾ.ವಿ.ಕೆ. ಇಂದಿರಾನಗರ,<br>ಬೆಂಗಳೂರು |
| 10 | ಶ್ರೀ. ಆನಂದಕುಮಾರ್,<br>ರಿಫ್ರಾಕ್ಷನಿಸ್ಟ್ | ಕಾ.ರಾ.ವಿ.ಕೆ. ಇಂದಿರಾನಗರ,<br>ಬೆಂಗಳೂರು |

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಕಾಇ 171 ಎಲ್ಎಸ್ಐ 2009

ಬೆಂಗಳೂರು ದಿನಾಂಕ: 02-07-2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕಾ.ರಾ.ವಿ. [illegible] ರಾಜಾಜಿನಗರ, ಬೆಂಗಳೂರು ಇಲ್ಲಿ ನಿಯೋಜನೆ ಮೇರೆಗೆ ಕಾರ್ಯ ನಿರ್ವಹಿಸುತ್ತಿದ್ದು, ಇವರ [illegible] ನಿಯೋಜನೆಯಿಂದ ಹಿಂದಿರುಗಿಸಿರುವ ಈ ಕೆಳಗಿನ 10 ಗ್ರೂಪ್ ಸಿ ಹುದ್ದೆಗಳನ್ನು ಕಾ.ರಾ.ವಿ. [illegible] ಸೇವೆಗಳ ಇಲಾಖೆಗೆ ಹಿಂಪಡೆಯಲು ಹಾಗೂ ಸದರಿ ಹುದ್ದೆಗಳನ್ನು ಈ ಕೆಳಗಿನಂತೆ ಸಿಬ್ಬಂದಿಗಳ ಹೆಸರಿನ ಮುಂದೆ ತೋರಿಸಿರುವ ಸ್ಥಳಗಳಿಗೆ ಸ್ಥಳಾಂತರಿಸಲು ಹಾಗೂ ಆ ಸ್ಥಳಗಳಿಗೆ ಅವರುಗಳನ್ನು ಸ್ಥಳ ನಿಯುಕ್ತಿಗೊಳಿಸಲು ಮಂಜೂರಾತಿ ನೀಡಿದೆ.

| ಕ್ರ.ಸಂ. | ಹೆಸರು ಮತ್ತು ಪದನಾಮ | ನೇಮಕಾತಿ ಮಾಡಿರುವ ಸ್ಥಳ |
|---|---|---|
| 1 | ಶ್ರೀ. ಪಾಂಡುರಂಗಪ್ಪ,<br>ಕಛೇರಿ ಅಧೀಕ್ಷಕರು | ಕಾ.ರಾ.ವಿ.ಚಿ. ಬೊಮ್ಮಸಂದ್ರ,<br>ಬೆಂಗಳೂರು |
| 2 | ಶ್ರೀ. ಜಗನ್ನಾಥ್ ರಾವ್. ಸಿ.ಆರ್.<br>ಕಛೇರಿ ಅಧೀಕ್ಷಕರು | ಕಾ.ರಾ.ವಿ.ಕೆ. ಇಂದಿರಾನಗರ,<br>ಬೆಂಗಳೂರು |
| 3 | ಶ್ರೀ. ಶ್ರೀನಿವಾಸ.ಟಿ.ಎಂ.<br>ದ್ವಿ.ದ.ಸ. | ಕಾ.ರಾ.ವಿ.ಕೆ. ಇಂದಿರಾನಗರ<br>ಬೆಂಗಳೂರು |
| 4 | ಶ್ರೀ. ಬಸವರಾಜ್ ಗಾಣಿಗೇರ,<br>ದ್ವಿ.ದ.ಸ. | ಕಾ.ರಾ.ವಿ.ಕೆ. ಇಂದಿರಾನಗರ,<br>ಬೆಂಗಳೂರು |
| 5 | ಶ್ರೀ. [illegible]<br>ದ್ವಿ.ದ.ಸ. | ಕಾ.ರಾ.ವಿ.ಕೆ. ಇಂದಿರಾನಗರ,<br>ಬೆಂಗಳೂರು |
| 6 | ಶ್ರೀ. ಕುಮಾರ್.ಬಿ.<br>ದ್ವಿ.ದ.ಸ. | ಕಾ.ರಾ.ವಿ ನಿರ್ದೇಶನಾಲಯ<br>ಬೆಂಗಳೂರು |
| 7 | ಶ್ರೀ. ಕಾಮರಾಜ್. ಜಿ.ಆರ್.<br>ದ್ವಿ.ದ.ಸ | ಕಾ.ರಾ.ವಿ ನಿರ್ದೇಶನಾಲಯ,<br>ಬೆಂಗಳೂರು |
| 8 | ಶ್ರೀ. ಪುಟ್ಟರೇವಣ್ಣ ಆರ್.<br>ದ್ವಿ.ದ.ಸ | ಕಾ.ರಾ.ವಿ ನಿರ್ದೇಶನಾಲಯ,<br>ಬೆಂಗಳೂರು |

| | | |
|---|---|---|
| 9 | ಶ್ರೀಮತಿ. ನಾಗರತ್ನ [illegible]<br>ಶೀಘ್ರಲಿಪಿಗಾರರ | ಕ.ರಾ.ಪೊ. [illegible]<br>ಬೆಂಗಳೂರು |
| 10 | ಶ್ರೀ. ಆನಂದಕುಮಾರ್<br>ರಿಫ್ರಾಕ್ಷನಿಸ್ಟ್ | ಕ.ರಾ.ಪೊ. [illegible]<br>ಬೆಂಗಳೂರು |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ

ಮತ್ತು ಅವರ ಹೆಸರಿನಲ್ಲಿ,

(ಗೋವಿಂದಸ್ವಾಮಿ)

ಅಧೀನ ಕಾರ್ಯದರ್ಶಿ-5,

[illegible] ಇಲಾಖೆ

([illegible] (ಪ್ರ) [illegible])

ಗೆ,

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2. ನಿರ್ದೇಶಕರು, [illegible] (ಪ್ರ) ಸೇವೆಗಳು, [illegible], ಬೆಂಗಳೂರು -10
3. ಸರ್ಕಾರದ [illegible]
4. ರಕ್ಷಾ ಕಡತ/[illegible]

REPATRIATION RNR

ವಿಷಯ:- ಗೋಕುಲ್ ಏರಿಯಾ ಹುಬ್ಬಳ್ಳಿ ಇಲ್ಲಿ ಪೂರ್ಣಕಾಲಿಕ ಕಾ.ರಾ.ವಿ. ಚಿಕಿತ್ಸಾಲಯ ತೆರೆಯುವ ಬಗ್ಗೆ.

ಓದಲಾಗಿದೆ:-
1) ನಿರ್ದೇಶಕರು, ಕಾರ್ಮಿಕ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ಇವರ ಪತ್ರ ಸಂಖ್ಯೆ.ಅಭಿವೃದ್ಧಿ/57/05-06, ದಿನಾಂಕ:02-12-2008, 04-03-2009 ಮತ್ತು 21-08-2009.
2) ರಾಜ್ಯ ವೈದ್ಯಕೀಯ ಆಯುಕ್ತರು, ಕಾ.ರಾ.ವಿ. ನಿಗಮ, ಬೆಂಗಳೂರು ಇವರ ಪತ್ರ ಸಂಖ್ಯೆ.DMC(SZ)V.34.11.2000, ದಿನಾಂಕ:29-04-2008.
3) ಸಹಾಯಕ ನಿರ್ದೇಶಕರು, ಕಾರಾವಿ ನಿಗಮ, ಸರ್ವೋದಯ ಸರ್ಕಲ್, ಕೇಶವಾಪುರ, ಹುಬ್ಬಳ್ಳಿ ಇವರ ಪತ್ರ ಸಂಖ್ಯೆ.58.ವಿ.34.19.5.91.ಹೆಚ್‌ಬಿಎಲ್. ದಿನಾಂಕ:25-08-2008.

ನಿರ್ದೇಶಕರು
ಕಾರ್ಮಿಕರ ರಾಜ್ಯ ವಿಮಾ ಯೋಜನೆ
1266
NOV 2009
212
(ವೈದ್ಯಕೀಯ) ಸೇವೆಗಳು
ಬೆಂಗಳೂರು-560 010.

ನಿರ್ದೇಶಕರು, ಕಾ.ರಾ.ವಿ ಯೋಜನೆ ವೈದ್ಯಕೀಯ ಸೇವೆಗಳು ಇವರು ಮೇಲೆ (1)ರ ದಿನಾಂಕ:02-12-2008ರ ತಮ್ಮ ಪತ್ರದಲ್ಲಿ ಗೋಕುಲ್ ಕೈಗಾರಿಕಾ ಪ್ರದೇಶ ಹುಬ್ಬಳ್ಳಿ ಇಲ್ಲಿ 3,000 ವಿಮಾದಾರರು ಕಾರ್ಯನಿರ್ವಹಿಸುತ್ತಿರುವ ಸಂಬಂಧ ಪೂರ್ಣಕಾಲಿಕ ಕಾ.ರಾ.ವಿ. ಚಿಕಿತ್ಸಾಲಯ, ತೆರೆಯುವ ಬಗ್ಗೆ ದಿನಾಂಕ:08-04-2008ರಲ್ಲಿ ಲೋಕಲ್ ಕಮಿಟಿ ಸಭೆಯ ನಡವಳಿಯಲ್ಲಿ ಸೂಚಿಸಿರುತ್ತಾರೆಂದು ದಿನಾಂಕ:29-04-2008ರ ಮೇಲೆ ಓದಲಾದ (2)ರಲ್ಲಿ ರಾಜ್ಯ ವೈದ್ಯಕೀಯ ಆಯುಕ್ತರವರು ಪತ್ರ ಬರೆದಿರುತ್ತಾರೆ ಎಂದು ತಿಳಿಸಿರುತ್ತಾರೆ.

ಸಹಾಯಕ ನಿರ್ದೇಶಕರು, ಕಾ.ರಾ.ವಿ. ನಿಗಮ, ಹುಬ್ಬಳ್ಳಿ ಇವರು ಮೇಲೆ ಓದಲಾದ (3)ರ. ಪತ್ರದಲ್ಲಿ ಗೋಕುಲ ಕೈಗಾರಿಕಾ ಪ್ರದೇಶದಲ್ಲಿ ಪೂರ್ಣಕಾಲಿಕ ಕಾರಾವಿ ಚಿಕಿತ್ಸಾಲಯವನ್ನು ತೆರೆಯಲು ಸೂಕ್ತ ಸ್ಥಳವಾಗಿದೆಯೆಂದು ಅಭಿಪ್ರಾಯ ನೀಡಿರುತ್ತಾರೆ.

ಪೂರ್ಣಕಾಲಿಕ ಕಾರಾವಿ ಚಿಕಿತ್ಸಾಲಯವನ್ನು ಪ್ರಾರಂಭಿಸಲು ಕಾರಾವಿ ನಿಗಮದ ನಾರ್ಮ್ಸ್ ಪ್ರಕಾರ ಸೃಜಿಸಬಹುದಾದ ಹುದ್ದೆಗಳ ವಿವರ ಈ ಕೆಳಕಂಡಂತಿದೆ.

| ಕ್ರ. ಸಂ. | ಪದನಾಮ | ಹುದ್ದೆಗಳ ಸಂಖ್ಯೆ |
|---|---|---|
| 1. | ವಿಮಾ ವೈದ್ಯಾಧಿಕಾರಿ | 02 ಹುದ್ದೆಗಳು |
| 2. | ಪ್ರಥಮ ದರ್ಜೆ ಸಹಾಯಕರು | 02 ಹುದ್ದೆಗಳು |
| 3. | ದ್ವಿತೀಯ ದರ್ಜೆ ಸಹಾಯಕರು | 01 ಹುದ್ದೆ |
| 4. | ದಾದಿ/ಶುಶ್ರೂಷಕಿ | 02 ಹುದ್ದೆಗಳು |
| 5. | ಫಾರ್ಮಸಿಸ್ಟ್ | 02 ಹುದ್ದೆಗಳು |
| 6. | ಗ್ರೂಪ್ ಡಿ | 03 ಹುದ್ದೆಗಳು |
| | ಒಟ್ಟು | 12 ಹುದ್ದೆಗಳು |

ಭೌಗೋಳಿಕ ಪ್ರದೇಶ ಗೋಕುಲ್ ಏರಿಯಾ ಹುಬ್ಬಳ್ಳಿಯಲ್ಲಿ ಕಾರಾವಿ ಚಿಕಿತ್ಸಾಲಯವನ್ನು ಪ್ರಾರಂಭಿಸಲು ಉಂಟಾಗುವ ಪೂರ್ಣ ವೆಚ್ಚವನ್ನು 03 ವರ್ಷಗಳವರೆಗೆ ಕಾ.ರಾ.ವಿ. ನಿಗಮವೇ ಭರಿಸುವುದರಿಂದ ಪ್ರಾರಂಭಿಕ 03 ವರ್ಷಗಳ ವೆಚ್ಚದಲ್ಲಿ ರಾಜ್ಯ ಸರ್ಕಾರದ ಪಾಲು ಇರುವುದಿಲ್ಲವೆಂದು ತದನಂತರ ಉಂಟಾಗುವ ವೆಚ್ಚದಲ್ಲಿ ಕಾರಾವಿ ನಿಗಮವು ವೆಚ್ಚದ 7:8ನೇ ಭಾಗವನ್ನು ರಾಜ್ಯ ಸರ್ಕಾರವು 1:8ನೇ ಭಾಗವನ್ನು ಭರಿಸಬೇಕಾಗುತ್ತದೆಂದು ತಿಳಿಸಿದ್ದಾರೆ. ಹುಬ್ಬಳ್ಳಿಯ ಗೋಕುಲ್ ಪ್ರದೇಶದಲ್ಲಿ ಇಲಾಖಾ ವತಿಯಿಂದ ಪೂರ್ಣ ಚಿಕಿತ್ಸಾಲಯವನ್ನು ಪ್ರಾರಂಭಿಸಲು ವಾರ್ಷಿಕ ವೆಚ್ಚ ರೂ.31.02ಲಕ್ಷ ಉಂಟಾಗುತ್ತದೆಂದು ಇದರಲ್ಲಿ ಕಾರಾವಿ ನಿಗಮದ ಪಾಲು ರೂ.27.14 ಲಕ್ಷ ಆಗಿದ್ದು ರಾಜ್ಯ ಸರ್ಕಾರದ ಪಾಲು ರೂ.3.88 ಲಕ್ಷ

ರೂ.31.02 ಲಕ್ಷವನ್ನು ರಾಜ್ಯ ಸರ್ಕಾರವು ಮೊದಲು ಭರಿಸಿ ನಂತರ ಕಾರಾವಿ ನಿಗಮದಿಂದ ಪುನರ್‌ಭರಣ ಪಡೆಯಬೇಕಾಗಿರುವುದರಿಂದ ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2210-01-102-0-01 (ಯೋಜನೆ) ಅಡಿಯಲ್ಲಿ ಭರಿಸಲಾಗುವುದೆಂದು ತಿಳಿಸುತ್ತಾ, ಗೋಕುಲ ಕೈಗಾರಿಕಾ ಪ್ರದೇಶದಲ್ಲಿ ಪೂರ್ಣಕಾಲಿಕ ಕಾರಾವಿ ಚಿಕಿತ್ಸಾಲಯವನ್ನು ಪ್ರಾರಂಭಿಸುವ ಬಗ್ಗೆ ಮಂಜೂರಾತಿ ಆದೇಶವನ್ನು ಹೊರಡಿಸುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ:ಕಾಇ 2 ಎಲ್‌ಎಸ್‌ಐ 2009, ಬೆಂಗಳೂರು,**
**ದಿನಾಂಕ:12-11-2009.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನಲೆಯಲ್ಲಿ ಹುಬ್ಬಳ್ಳಿ ಗೋಕುಲ ಕೈಗಾರಿಕಾ ಪ್ರದೇಶದಲ್ಲಿ ಪೂರ್ಣಕಾಲಿಕ ಕಾರ್ಮಿಕ ರಾಜ್ಯ ವಿಮಾ ಚಿಕಿತ್ಸಾಲಯವನ್ನು ಹೊಸದಾಗಿ ಪ್ರಾರಂಭಿಸಲು ಸರ್ಕಾರದ ಮಂಜೂರಾತಿ ನೀಡಿದೆ ಹಾಗೂ ಈ ಚಿಕಿತ್ಸಾಲಯಕ್ಕೆ ಅಗತ್ಯವಿರುವ ಈ ಕೆಳಕಂಡ ಹುದ್ದೆಗಳನ್ನು ಸೃಜಿಸಲು ಮಂಜೂರಾತಿ ನೀಡಲಾಗಿದೆ.

| ಕ್ರ. ಸಂ. | ಪದನಾಮ | ವೇತನ ಶ್ರೇಣಿ | ಹುದ್ದೆಗಳ ಸಂಖ್ಯೆ |
|---|---|---|---|
| 1. | ವಿಮಾ ವೈದ್ಯಾಧಿಕಾರಿ | 14050-25050 | 02 ಹುದ್ದೆಗಳು |
| 2. | ಪ್ರಥಮ ದರ್ಜೆ ಸಹಾಯಕರು | 7275-13350 | 02 ಹುದ್ದೆಗಳು |
| 3. | ದ್ವಿತೀಯ ದರ್ಜೆ ಸಹಾಯಕರು | 5800-10800 | 01 ಹುದ್ದೆ |
| 4. | ಶುಶ್ರೂಷಕಿ | 8825-16000 | 02 ಹುದ್ದೆಗಳು |
| 5. | ಫಾರ್ಮಸಿಸ್ಟ್ | 7275-13350 | 02 ಹುದ್ದೆಗಳು |
| 6. | ಗ್ರೂಪ್ ಡಿ | 4800-7275 | 03 ಹುದ್ದೆಗಳು |
| | ಒಟ್ಟು | | 12 ಹುದ್ದೆಗಳು |

ಈ ಮಂಜೂರಾತಿ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 589 ವೆಚ್ಚ-9/09, ದಿನಾಂಕ:26-10-2009ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

12/11

(ಗೋವಿಂದಸ್ವಾಮಿ)
ಪೀಠಾಧಿಕಾರಿ,
ಕಾರ್ಮಿಕ ಇಲಾಖೆ.
(ಕಾರಾವಿ ಯೋ (ವೈ) ಸೇವೆಗಳು)

12/11/09

ಗೆ,
1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ನಿರ್ದೇಶಕರು, ಕಾರ್ಮಿಕ ರಾಜ್ಯ ವಿಮಾ ಯೋಜನೆ (ವೈ) ಸೇವೆಗಳು, ರಾಜಾಜಿನಗರ, ಬೆಂಗಳೂರು.
3) ಸರ್ಕಾರದ ಕಾರ್ಯದರ್ಶಿ, (ಆ & ಸಂ)ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
4) ಸರ್ಕಾರದ ಅಧೀನ ಕಾರ್ಯದರ್ಶಿ ಆರ್ಥಿಕ ಇಲಾಖೆ (ವೆಚ್ಚ-3 & 9)
5) ಸರ್ಕಾರದ ಕಾರ್ಯದರ್ಶಿ/ಉಪ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ.
6) ಶಾಖಾ ರಕ್ಷಾ ಕಡತ : ಹೆಚ್ಚುವರಿ ಪ್ರತಿ.

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಕೊಪ್ಪಳದಲ್ಲಿ ಪೂರ್ಣಕಾಲಿಕ ಕಾ.ರಾ.ವಿ. ಚಿಕಿತ್ಸಾಲಯವನ್ನು ಪ್ರಾರಂಭಿಸುವ ಕುರಿತು.

ಓದಲಾಗಿದೆ:- 1) ನಿರ್ದೇಶಕರು, ಕಾ.ರಾ.ವಿ. ಯೋಜನೆ ವೈದ್ಯಕೀಯ ಸೇವೆಗಳು, ಇವರ ಪತ್ರ ಸಂಖ್ಯೆ.ಅಭಿವೃದ್ಧಿ/139/98-99, ದಿನಾಂಕ:18-12-2009.

2) ಉಪ ನಿರ್ದೇಶಕರು, ಕಾರಾವಿ ನಿಗಮ ಇವರ ಪತ್ರ ಸಂಖ್ಯೆ.53/N/15/12/01/97 G&B, Inspn. ದಿನಾಂಕ:15-12-2008.

ಪ್ರಸ್ತಾವನೆ:

ನಿರ್ದೇಶಕರು, ಕಾ.ರಾ.ವಿ. ಯೋಜನೆ ವೈದ್ಯಕೀಯ ಸೇವೆಗಳು ಇವರು ಮೇಲೆ ಓದಲಾದ (1)ರ ಪತ್ರದಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ಸಮೀಕ್ಷೆ ನಡೆಸಿ ಈ ಪ್ರದೇಶದಲ್ಲಿ ಪ್ರಸ್ತುತ 2119 ಕಾರ್ಮಿಕರಿದ್ದು, ಇನ್ನೂ 8-10 ಕಾರ್ಖಾನೆಗಳು ಪ್ರಾರಂಭದ ಹಂತದಲ್ಲಿದ್ದು ಈ ಕಾರ್ಖಾನೆಗಳ 1500 ಕಾರ್ಮಿಕರಿದ್ದು ಒಟ್ಟು 3619 ಕಾರ್ಮಿಕರನ್ನು ಕಾರಾವಿ ಯೋಜನೆಯ ವ್ಯಾಪ್ತಿಗೆ ಒಳಪಡಿಸಬಹುದಾಗಿದೆಯೆಂದು ಉಪ ನಿರ್ದೇಶಕರು ಕಾರಾವಿ ನಿಗಮ, ಬೆಂಗಳೂರು ಇವರು ಮೇಲೆ ಓದಲಾದ (2)ರ ಪತ್ರದಲ್ಲಿ ವರದಿ ಮಾಡಿದ್ದಾರೆಂದು ತಿಳಿಸಿರುತ್ತಾರೆ.

ಕಾರಾವಿ ನಿಗಮದ ನಾರಮ್ಸ್ ಪ್ರಕಾರ 3000ಕ್ಕಿಂತ ಹೆಚ್ಚಿನ ಕಾರ್ಮಿಕರನ್ನು ಹೊಂದಿರುವ ಸ್ಥಳಗಳಲ್ಲಿ ಚಿಕಿತ್ಸಾಲಯವನ್ನು ಪ್ರಾರಂಭಿಸಲು ಅವಕಾಶವಿರುವುದರಿಂದ ಪೂರ್ಣಕಾಲಿಕ ಕಾರಾವಿ ಚಿಕಿತ್ಸಾಲಯವನ್ನು ಪ್ರಾರಂಭಿಸಲು ಈ ಕೆಳಕಂಡಂತೆ ಹುದ್ದೆಗಳನ್ನು ಸೃಜಿಸಬಹುದಾಗಿದೆಯೆಂದು ನಿರ್ದೇಶಕರು, ಕಾರಾವಿ ಯೋಜನೆ ವೈದ್ಯಕೀಯ ಸೇವೆಗಳು ಇವರು ತಿಳಿಸಿದ್ದಾರೆ.

| ಕ್ರ. ಸಂ. | ಪದನಾಮ | ಹುದ್ದೆ |
|---|---|---|
| 1. | ವಿಮಾ ವೈದ್ಯಾಧಿಕಾರಿಗಳು | 02 |
| 2. | ಪ್ರಥಮ ದರ್ಜೆ ಸಹಾಯಕರು | 01 |
| 3. | ದ್ವಿತೀಯ ದರ್ಜೆ ಸಹಾಯಕರು | 01 |
| 4. | ಫಾರ್ಮಾಸಿಸ್ಟ್ | 02 |
| 5. | ಶುಶ್ರೂಷಕಿ | 02 |
| 6. | ಗ್ರೂಪ್ ಡಿ | 03 |
| | ಒಟ್ಟು | 11 |

ಕಾರಾವಿ ನಿಗಮದ ನಿಯಮಾನುಸಾರ ಹೊಸದಾಗಿ ಪ್ರಾರಂಭಿಸುವ ಚಿಕಿತ್ಸಾಲಯದ ಪೂರ್ಣ ವೆಚ್ಚವನ್ನು ಕಾರಾವಿ ನಿಗಮವೇ 3 ವರ್ಷದವರೆಗೆ ಭರಿಸುವುದರಿಂದ ಈ ಅವಧಿಯಲ್ಲಿ ರಾಜ್ಯ ಸರ್ಕಾರಕ್ಕೆ ಯಾವುದೇ ಆರ್ಥಿಕ ಹೊರೆ ಉಂಟಾಗುವುದಿಲ್ಲವೆಂದೂ ಮೂರು ವರ್ಷದ ನಂತರದಲ್ಲಿ ಕಾರಾವಿ ನಿಗಮವು ಶೇ.87.50ರಷ್ಟು ವೆಚ್ಚವನ್ನು ಭರಿಸುತ್ತದೆಯೆಂದೂ ರಾಜ್ಯ ಸರ್ಕಾರವು ಶೇ.12.50ರಷ್ಟು ವೆಚ್ಚವನ್ನು ಭರಿಸುತ್ತದೆಯೆಂದೂ ಇದಕ್ಕೆ ವಾರ್ಷಿಕ ವೆಚ್ಚ ರೂ.34.54ಲಕ್ಷಗಳಾಗಿದ್ದು ಕಾ.ರಾ.ವಿ. ನಿಗಮದ ಪಾಲು ರೂ.30.22 ಲಕ್ಷ ಹಾಗೂ ರಾಜ್ಯ ಸರ್ಕಾರದ ಪಾಲು ರೂ.4.32ಲಕ್ಷವಾಗಿರುತ್ತದೆಯೆಂದೂ ತಿಳಿಸುತ್ತಾ ಕೊಪ್ಪಳದಲ್ಲಿ ಪೂರ್ಣ ಕಾಲಿಕ ಕಾರ್ಮಿಕ ರಾಜ್ಯ ವಿಮಾ ಚಿಕಿತ್ಸಾಲಯವನ್ನು ಪ್ರಾರಂಭಿಸಲು ಮಂಜೂರಾತಿಯನ್ನು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ.ಕಾಇ 463 ಎಲ್‌ಎಸ್‌ಐ 2009,**
**ಬೆಂಗಳೂರು, ದಿನಾಂಕ:28-07-2010.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕೊಪ್ಪಳ ಜಿಲ್ಲೆಯ, ಕೊಪ್ಪಳ ಪ್ರದೇಶದಲ್ಲಿ ಪೂರ್ಣಕಾಲಿಕ ಕಾರ್ಮಿಕ ರಾಜ್ಯ ವಿಮಾ ಚಿಕಿತ್ಸಾಲಯವನ್ನು ಹೊಸದಾಗಿ ಪ್ರಾರಂಭಿಸಲು ಹಾಗೂ ಈ ಚಿಕಿತ್ಸಾಲಯಕ್ಕೆ ಅಗತ್ಯವಿರುವ ಈ ಕೆಳಕಂಡ ಹುದ್ದೆಗಳನ್ನು ಸೃಜಿಸಲು ಮಂಜೂರಾತಿ ನೀಡಲಾಗಿದೆ.

| ಕ್ರ. ಸಂ. | ಪದನಾಮ | ಹುದ್ದೆ | ವೇತನ ಶ್ರೇಣಿ |
|---|---|---|---|
| 1. | ವಿಮಾ ವೈದ್ಯಾಧಿಕಾರಿಗಳು | 02 | 14050-25050 |
| 2. | ಪ್ರಥಮ ದರ್ಜೆ ಸಹಾಯಕರು | 01 | 7275-13350 |
| 3. | ದ್ವಿತೀಯ ದರ್ಜೆ ಸಹಾಯಕರು | 01 | 5800-10800 |
| 4. | ಫಾರ್ಮಾಸಿಸ್ಟ್ | 02 | 7275-13350 |
| 5. | ಶುಶ್ರೂಷಕಿ | 02 | 8825-16000 |
| 6. | ಗ್ರೂಪ್ ಡಿ | 03 | 4800-7275 |
| | ಒಟ್ಟು | 11 | |

ಈ ಮಂಜೂರಾತಿ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ.ಆಇ 390 ವೆಚ್ಚ-9/10, ದಿನಾಂಕ:13-07-2010ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಗೋವಿಂದಸ್ವಾಮಿ) 28/7
ಪೀಠಾಧಿಕಾರಿ,
ಕಾರ್ಮಿಕ ಇಲಾಖೆ.
(ಕಾರಾವಿ ಯೋ (ವೈ) ಸೇವೆಗಳು)
28/07/2010

ಗೆ,

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ನಿರ್ದೇಶಕರು, ಕಾರ್ಮಿಕ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು, ರಾಜಾಜಿನಗರ, ಬೆಂಗಳೂರು.
3) ಸರ್ಕಾರದ ಅಧೀನ ಕಾರ್ಯದರ್ಶಿ (ಆ & ಸಂ) ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
4) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, (ವೆಚ್ಚ 3 & 9) ವಿಧಾನ ಸೌಧ, ಬೆಂಗಳೂರು.
5) ಸರ್ಕಾರದ ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರು, ಕಾರ್ಮಿಕ ಇಲಾಖೆ.
6) ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಕಾರ್ಮಿಕ ಇಲಾಖೆ.
8) ಶಾಖಾ ರಕ್ಷಾ ಕಡತ : ಹೆಚ್ಚುವರಿ ಪ್ರತಿ.

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ – ಲೇ ಕಾರ್ಯದರ್ಶಿ ಹುದ್ದೆಯನ್ನು ಸೃಜಿಸುವ ಕುರಿತು.

ಓದಲಾಗಿದೆ:– 1) ನಿರ್ದೇಶಕರು, ಕಾ.ರಾ.ವಿ. ಯೋಜನೆ ವೈದ್ಯಕೀಯ ಸೇವೆಗಳು, ಇವರ ಪತ್ರ ಸಂಖ್ಯೆ.ಅಭಿವೃದ್ಧಿ/78/2008–09, ದಿನಾಂಕ:23–07–2008,

2) ಉಪ ನಿರ್ದೇಶಕರು (ಆಡಳಿತ) ಕಾ.ರಾ.ವಿ. ನಿಗಮ, ರಾಜ್ಯ ವೈದ್ಯಕೀಯ ಆಯುಕ್ತರ ಕಛೇರಿ, ಇವರ ಪತ್ರ ಸಂಖ್ಯೆ.SMC.KAR.A.25. 21-05-2010, ದಿನಾಂಕ:06-07-2011.

3) ರಾಜ್ಯ ವೈದ್ಯಕೀಯ ಆಯುಕ್ತರು, ಕಾರಾವಿ ನಿಗಮ, ಬೆಂಗಳೂರು ಇವರ ಪತ್ರ ಸಂಖ್ಯೆ.SMC.KAR.25/21/5/2011, ದಿನಾಂಕ:24–08–2011, 04–10–2011.

4) ಉಪ ನಿರ್ದೇಶಕರು (ವೈದ್ಯಕೀಯ) ಕಾ.ರಾ.ವಿ. ನಿಗಮ, ನವದೆಹಲಿ ಇವರ ಪತ್ರ ಸಂಖ್ಯೆ.U-16/12/34/Misc./10/Med.III(karnt.) ದಿನಾಂಕ:29–09–2011.

15 NOV 2011
ಬೆಂಗಳೂರು-560 010

ಪ್ರಸ್ತಾವನೆ:

ನಿರ್ದೇಶಕರು, ಕಾ.ರಾ.ವಿ. ಯೋಜನೆ ವೈದ್ಯಕೀಯ ಸೇವೆಗಳು ಇವರು ಮೇಲೆ ಓದಲಾದ (1)ರ ಪತ್ರಗಳಲ್ಲಿ ಕಾರಾವಿ ಆಸ್ಪತ್ರೆ, ದಾವಣಗೆರೆ, ಬೆಳಗಾವಿ ಮತ್ತು ದಾಂಡೇಲಿ ಇಲ್ಲಿಗೆ ಮೂರು ಲೇ ಕಾರ್ಯದರ್ಶಿ ಹುದ್ದೆಯನ್ನು ಸೃಜಿಸುವ ಬಗ್ಗೆ ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೆ. ಕಾ.ರಾ.ವಿ. ನಿಗಮದ ಮಾರ್ಗಸೂಚಿ (NORMS) ಪ್ರಕಾರ 50 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆಗೆ ಒಂದು ಉಪ ನಿರ್ದೇಶಕರ (ಆರ್ಥಿಕ) ಹುದ್ದೆಯನ್ನು ಮಂಜೂರು ಮಾಡಲು ಅವಕಾಶವಿರುತ್ತದೆಯೆಂದು ಈ ಹುದ್ದೆಯ ವೇತನ ಶ್ರೇಣಿ ₹10800–20025 ಆಗಿದ್ದು ರಾಜ್ಯ ಸರ್ಕಾರದಲ್ಲಿ ಹುದ್ದೆಯ ಪದನಾಮಕ್ಕೆ ಬದಲಾಗಿ ಲೇ ಕಾರ್ಯದರ್ಶಿ ಎಂಬುದಾಗಿ ಪರಿಗಣಿಸಿ ಸೃಜಿಸಬಹುದಾಗಿರುತ್ತದೆಯೆಂದು ತಿಳಿಸಿ, ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಯ ಅನುಸಾರ ಕಛೇರಿ ಅಧೀಕ್ಷಕರಿಗೆ ಪದೋನ್ನತಿ ನೀಡುವುದರ ಮುಖಾಂತರ ಲೇ-ಕಾರ್ಯದರ್ಶಿ ಹುದ್ದೆಯನ್ನು ಭರ್ತಿ ಮಾಡುವುದರಿಂದ ಸರ್ಕಾರಕ್ಕೆ ಹೆಚ್ಚಿನ ಆರ್ಥಿಕ ಹೊರೆ ಉಂಟಾಗುವುದಿಲ್ಲವೆಂದು ಅಭಿಪ್ರಾಯಪಟ್ಟಿರುತ್ತಾರೆ. ಈ ಲೇ-ಕಾರ್ಯದರ್ಶಿ ಹುದ್ದೆಯನ್ನು ಸೃಜಿಸುವುದರಿಂದ ಉಂಟಾಗುವ ವೆಚ್ಚದಲ್ಲಿ ಕಾರಾವಿ ನಿಗಮದ ಪಾಲು ಶೇ.87.50ರಷ್ಟು ಹಾಗೂ ರಾಜ್ಯ ಸರ್ಕಾರದ ಪಾಲು ಕೇವಲ ಶೇ.12.50ರಷ್ಟು ಎಂಬುದನ್ನು ತಿಳಿಸಿದ್ದಾರೆ.

ಈ ಬಗ್ಗೆ ಉಪ ನಿರ್ದೇಶಕರು (ಆಡಳಿತ) ಕಾರಾವಿ ನಿಗಮ (ರಾಜ್ಯ ವೈದ್ಯಕೀಯ ಆಯುಕ್ತರ ಕಛೇರಿ) ಬೆಂಗಳೂರು ಇವರು ಮೇಲೆ ಓದಲಾದ (2)ರ ಪತ್ರದಲ್ಲಿ ಕಾರಾವಿ ನಿಗಮದ ಮಾರ್ಗಸೂಚಿ (NORMS) ಪ್ರಕಾರ 50 ಹಾಸಿಗೆ ಸಾಮರ್ಥ್ಯವಿರುವ ಆಸ್ಪತ್ರೆಗಳಿಗೆ ಒಂದು ಲೇ-ಕಾರ್ಯದರ್ಶಿ ಹುದ್ದೆ ಅವಶ್ಯಕವಿದೆಯೆಂದು ಕಾ.ರಾ.ವಿ. ಆಸ್ಪತ್ರೆ, ದಾವಣಗೆರೆ ಹಾಗೂ ಬೆಳಗಾವಿಯು 50 ಹಾಸಿಗೆ ಸಾಮರ್ಥ್ಯವಿರುವ ಆಸ್ಪತ್ರೆಗಳಾಗಿರುವುದರಿಂದ ರಾಜ್ಯ ವೈದ್ಯಕೀಯ ಆಯುಕ್ತರ ಒಪ್ಪಿಗೆಯ ಆಧಾರದ ಮೇಲೆ ಲೇ ಕಾರ್ಯದರ್ಶಿ ಹುದ್ದೆಗಳನ್ನು ಸೃಜಿಸಬಹುದಾಗಿದೆಯೆಂದು ತಿಳಿಸಿದ್ದಾರೆ.

ರಾಜ್ಯ ವೈದ್ಯಕೀಯ ಆಯುಕ್ತರು, ಕಾ.ರಾ.ವಿ. ನಿಗಮ, ಬೆಂಗಳೂರು ಇವರು ಮೇಲೆ ಓದಲಾದ (3)ರ ಪತ್ರದಲ್ಲಿ ಮಹಾ ನಿರ್ದೇಶಕರು, ಕಾರಾವಿ ನಿಗಮ, ನವದೆಹಲಿ ಇವರ ಸಹಮತಿಯನ್ನು ಕೋರಿದ್ದು, ಉಪ ನಿರ್ದೇಶಕರು (ವೈದ್ಯಕೀಯ), ಕಾ.ರಾ.ವಿ. ನಿಗಮ, ನವದೆಹಲಿ ಇವರ ಮೇಲೆ ಓದಲಾದ (4)ರ ಪತ್ರದಲ್ಲಿ ಕಾರಾವಿ ಆಸ್ಪತ್ರೆ ದಾವಣಗೆರೆ ಮತ್ತು ಬೆಳಗಾವಿ ಇಲ್ಲಿಗೆ ಲೇ-ಕಾರ್ಯದರ್ಶಿ ಹುದ್ದೆಯನ್ನು ಸೃಜಿಸುವ ಬಗ್ಗೆ ರಾಜ್ಯ ಸರ್ಕಾರವು ತನ್ನ ಹಂತದಲ್ಲೇ ಕ್ರಮವಹಿಸಬಹುದೆಂದು ತಿಳಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ.ಕಾಇ 398 ಎಲ್‌ಎಸ್‌ಐ 2008**
**ಬೆಂಗಳೂರು, ದಿನಾಂಕ: 10-11-2011.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕಾರ್ಮಿಕ ರಾಜ್ಯ ವಿಮಾ ಆಸ್ಪತ್ರೆ, ದಾವಣಗೆರೆ ಮತ್ತು ಬೆಳಗಾವಿ ಇಲ್ಲಿಗೆ ತಲಾ ಒಂದರಂತೆ ಎರಡು ಲೇ ಕಾರ್ಯದರ್ಶಿ ಹುದ್ದೆಗಳನ್ನು ಇಲಾಖಾ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಮುಂಬಡ್ತಿ ಮೂಲಕ ಭರ್ತಿ ಮಾಡುವ ಷರತ್ತಿಗೊಳಪಟ್ಟು ಸೃಜಿಸುವುದಕ್ಕೆ ಮಂಜೂರಾತಿ ನೀಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ.ಆಇ 559 ವೆಚ್ಚ-9/11, ದಿನಾಂಕ:04-11-2011ರ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಗೋವಿಂದಸ್ವಾಮಿ) 11/11
ಪೀಠಾಧಿಕಾರಿ,
ಕಾರ್ಮಿಕ ಇಲಾಖೆ.
(ಕಾರಾವಿ ಯೋ (ವೈ) ಸೇವೆಗಳು)

ಗೆ.

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ನಿರ್ದೇಶಕರು, ಕಾರ್ಮಿಕ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು, ರಾಜಾಜಿನಗರ, ಬೆಂಗಳೂರು.
3) ಖಜಾನೆ ಅಧಿಕಾರಿಗಳು, ದಾವಣಗೆರೆ ಮತ್ತು ಬೆಳಗಾವಿ ಇವರ ಮಾಹಿತಿಗಾಗಿ.
4) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ ವೆಚ್ಚ-3 & 9, ವಿಧಾನ ಸೌಧ, ಬೆಂಗಳೂರು.
5) ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ/ಜಂಟಿ-ಕಾರ್ಯದರ್ಶಿಯವರ ಆಪ್ತ ಶಾಖೆ, ಕಾರ್ಮಿಕ ಇಲಾಖೆ.
6) ಅಧ್ಯಕ್ಷರು, ಇಲಾಖಾ ಲಿಪಿಕ ನೌಕರರ ಸಂಘ ಮತ್ತು ಕಾರ್ಯದರ್ಶಿ, ರಾಜ್ಯ ಸರ್ಕಾರಿ ನೌಕರರ ಕೇಂದ್ರ ಸಂಘ, ಬೆಂಗಳೂರು.
7) ರಾಜ್ಯ ವೈದ್ಯಕೀಯ ಆಯುಕ್ತರು, ಕಾರಾವಿ ನಿಗಮ, ನಂ-119, ಜೆ.ಪಿ.ಆರ್ಕೇಡ್, 5ನೇ ಮುಖ್ಯರಸ್ತೆ, ಎಸ್.ಬಿ.ಐ ಮೇಲೆ, ರಾಮ ಮಂದಿರ ಬಸ್ ನಿಲ್ದಾಣದ ಎದಿರು, ಚಾಮರಾಜ ಪೇಟೆ, ಬೆಂಗಳೂರು-560 018.
8) ಶಾಖಾ ರಕ್ಷಾ ಕಡತ : ಹೆಚ್ಚುವರಿ ಪ್ರತಿ.

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ದೇವನಹಳ್ಳಿಯಲ್ಲಿ ಪೂರ್ಣಕಾಲಿಕ ಕಾರಾವಿ ಚಿಕಿತ್ಸಾಲಯವನ್ನು ಪ್ರಾರಂಭಿಸುವ ಕುರಿತು.

ಓದಲಾಗಿದೆ:- ನಿರ್ದೇಶಕರು, ಕಾ.ರಾ.ವಿ. ಯೋಜನೆ ವೈದ್ಯಕೀಯ ಸೇವೆಗಳು, ಇವರ ಪತ್ರ ಸಂಖ್ಯೆ.ಅಭಿವೃದ್ಧಿ/129/2010-11, ದಿನಾಂಕ:04-11-2010.

ಪ್ರಸ್ತಾವನೆ:

ನಿರ್ದೇಶಕರು, ಕಾ.ರಾ.ವಿ. ಯೋಜನೆ ವೈದ್ಯಕೀಯ ಸೇವೆಗಳು ಇವರು ಮೇಲೆ ಓದಲಾದ ಪತ್ರದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ಪ್ರದೇಶದಲ್ಲಿರುವ ಕಾರ್ಮಿಕರನ್ನು ಕಾರಾವಿ ಯೋಜನೆ ವ್ಯಾಪ್ತಿಗೆ ಒಳಪಡಿಸಿ ವೈದ್ಯಕೀಯ ಸೌಲಭ್ಯವನ್ನು ವಿಸ್ತರಿಸಲು, ಪೂರ್ಣಕಾಲಿಕ ಕಾರಾವಿ ಚಿಕಿತ್ಸಾಲಯವನ್ನು ಪ್ರಾರಂಭಿಸುವ ಸಲುವಾಗಿ ಮಾನ್ಯ ಕಾರ್ಮಿಕ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ:06-08-2010ರ 104ನೇ ಪ್ರಾದೇಶಿಕ ಮಂಡಳಿ ಸಭೆಯಲ್ಲಿ ಪ್ರಸ್ತಾಪಿಸಿರುತ್ತಾರೆಂದು ಅದರಂತೆ ಉಪ - ನಿರ್ದೇಶಕರು(ಇನ್‌ಸ್ಪೆಕ್ಷನ್) ಕಾ.ರಾ.ವಿ. ನಿಗಮ, ಉಪ ಪ್ರಾದೇಶಿಕ ಕಛೇರಿ, ಪೀಣ್ಯ ಇವರು ಸಮೀಕ್ಷೆ ನಡೆಸಿ, ದಿನಾಂಕ:27-09-2010ರಂದು ಜಂಟಿ ಆಯುಕ್ತರು/ಪ್ರಾದೇಶಿಕ ನಿದೇಶಕರಿಗೆ ವರದಿ ಸಲ್ಲಿಸಿರುತ್ತಾರೆಂದು, ಜಂಟಿ ನಿರ್ದೇಶಕರು, ಕಾ.ರಾ.ವಿ. ನಿಗಮ, ಬೆಂಗಳೂರು ಇವರು ದಿನಾಂಕ:30-09-2010ರ ಪತ್ರದಲ್ಲಿ ಸಮೀಕ್ಷಾ ವರದಿಯಂತೆ ದೇವನಹಳ್ಳಿಯಲ್ಲಿ ಕಾರಾವಿ ಚಿಕಿತ್ಸಾಲಯವನ್ನು ಪ್ರಾರಂಭಿಸಲು ಕಾರ್ಮಿಕರಿಗೆ ವೈದ್ಯಕೀಯ ವ್ಯವಸ್ಥೆಯನ್ನು ಪೂರ್ಣ ಪ್ರಮಾಣದಲ್ಲಿ ಜಾರಿಗೆ ತರಲು ತ್ವರಿತವಾಗಿ ಕ್ರಮ ಕೈಗೊಳ್ಳಲು ತಿಳಿಸಿರುತ್ತಾರೆಂದು ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೆ.

ಇಲಾಖೆಯು ಕಾರಾವಿ ನಿಗಮದೊಂದಿಗೆ ಮಾಡಿಕೊಂಡ ಒಪ್ಪಂದದ ಅನುಸಾರ ಇಲಾಖೆಯು ಮಾಡುವ ಒಟ್ಟು ವೆಚ್ಚದಲ್ಲಿ ಕಾರಾವಿ ನಿಗಮವು 7/8 ಭಾಗವನ್ನು ಭರಿಸುತ್ತಿದ್ದು ರಾಜ್ಯ ಸರ್ಕಾರದ ಪಾಲು ಕೇವಲ 1/8 ಭಾಗವಾಗಿರುತ್ತದೆ, ಹೊಸ ಪ್ರದೇಶಗಳಲ್ಲಿ ಪೂರ್ಣಕಾಲಿಕ ಕಾರಾವಿ ಚಿಕಿತ್ಸಾಲಯವನ್ನು ಪ್ರಾರಂಭಿಸುವ ಸಂದರ್ಭದಲ್ಲಿ ಮೊದಲ 03 ವರ್ಷಗಳ ಸಂಪೂರ್ಣ ವೆಚ್ಚವನ್ನು ಕಾ.ರಾ.ವಿ. ನಿಗಮವೇ ಭರಿಸುತ್ತದೆಂದು ತಿಳಿಸಿ ಕಾರಾವಿ ನಿಗಮದ ಕೈಪಿಡಿ ಪ್ರಕಾರ ಚಿಕಿತ್ಸಾಲಯಕ್ಕೆ ಅವಶ್ಯಕವಾಗಿರುವ ಸಿಬ್ಬಂದಿಗಳ ವಿವರವನ್ನು ಈ ಕೆಳಗಿನಂತೆ ನೀಡಿರುತ್ತಾರೆ.

| ಕ್ರ. ಸಂ. | ಮಂಜೂರು ಮಾಡಬೇಕಾದ ಹುದ್ದೆಗಳ ವಿವರ | ಅವಶ್ಯಕವಿರುವ ಹುದ್ದೆಗಳ ಪ್ರಮಾಣ |
|---|---|---|
| 1. | ವಿಮಾ ವೈದ್ಯಾಧಿಕಾರಿಗಳು | 05 |
| 2. | ಕಛೇರಿ ಅಧೀಕ್ಷಕರು | 01 |
| 3. | ಹಿರಿಯ ಫಾರ್ಮಾಸಿಸ್ಟ್ | 01 |
| 4. | ಪ್ರಥಮ ದರ್ಜೆ ಸಹಾಯಕರು | 02 |
| 5. | ಶುಶ್ರೂಷಕರು | 04 |
| 6 | ಫಾರ್ಮಾಸಿಸ್ಟ್ | 04 |

ನಿರ್ದೇಶಕರು
ಕಾರ್ಮಿಕರ ರಾಜ್ಯ ವಿಮಾ ಯೋಜನೆ
(ವೈದ್ಯಕೀಯ) ಸೇವೆಗಳು
628
30 SEP 2011
11629
ಬೆಂಗಳೂರು-560 010.

| | | |
|---|---|---|
| 7. | ದ್ವಿತೀಯ ದರ್ಜೆ ಸಹಾಯಕರು | 03 |
| 8. | ಗ್ರೂಪ್ ಡಿ | 07 |
| | ಒಟ್ಟು | 27 |

ಚಿಕಿತ್ಸಾಲಯವನ್ನು ಪ್ರಾರಂಭಿಸಲು ಉಂಟಾಗುವ ಆವರ್ತಕ ವೆಚ್ಚ ಹಾಗೂ ಅನಾವರ್ತಕ ವೆಚ್ಚಗಳಿಂದ ವಾರ್ಷಿಕ ವೆಚ್ಚ ಅಂದಾಜು ₹78,46,044-00ಗಳಾಗುತ್ತದೆಂದು ವಿವರಿಸಿದ್ದಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ.ಕಾಇ 411 ಎಲ್‌ಎಸ್‌ಐ 2010**

**ಬೆಂಗಳೂರು, ದಿನಾಂಕ:05-09-2011.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ದೇವನಹಳ್ಳಿಯಲ್ಲಿ ಕಾರ್ಮಿಕ ರಾಜ್ಯ ವಿಮಾ ಚಿಕಿತ್ಸಾಲಯವನ್ನು ಪ್ರಾರಂಭಿಸಲು ಹಾಗೂ ಈ ಕೆಳಕಂಡ ಹುದ್ದೆಗಳನ್ನು ಸೃಜಿಸಲು ಮಂಜೂರಾತಿ ನೀಡಲಾಗಿದೆ.

| ಕ್ರ. ಸಂ. | ಪದನಾಮ | ಹುದ್ದೆಗಳ ಪ್ರಮಾಣ |
|---|---|---|
| 1. | ವಿಮಾ ವೈದ್ಯಾಧಿಕಾರಿಗಳು | 03 |
| 2. | ಪ್ರಥಮ ದರ್ಜೆ ಸಹಾಯಕರು | 02 |
| 3. | ದ್ವಿತೀಯ ದರ್ಜೆ ಸಹಾಯಕ | 01 |
| 4. | ಶುಶ್ರೂಷಕರು | 02 |
| 5. | ಹಿರಿಯ ಫಾರ್ಮಾಸಿಸ್ಟ್ | 01 |
| 6. | ಫಾರ್ಮಾಸಿಸ್ಟ್ | 02 |
| 7. | ಡ್ರೆಸ್ಸರ್ | 02 |
| 8. | ರೆಕಾರ್ಡ್ ಸಾರ್ಟರ್ | 02 |
| 9. | ಗ್ರೂಪ್ ಡಿ | 05 |
| | ಒಟ್ಟು | 20 |

ಅಲ್ಲದೆ 78.64 ಲಕ್ಷಗಳ ಆವರ್ತಕ ಹಾಗೂ ಅನಾವರ್ತಕ ವೆಚ್ಚ ಭರಿಸಲು ಸಹಾ ಮಂಜೂರಾತಿ ನೀಡಿದೆ. ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 85 ವೆಚ್ಚ-9/11 ದಿನಾಂಕ:16-08-2011ರ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಗೋವಿಂದಸ್ವಾಮಿ) 3/9
ಪೀಠಾಧಿಕಾರಿ,
ಕಾರ್ಮಿಕ ಇಲಾಖೆ.
(ಕಾರಾವಿ ಯೋ (ವೈ) ಸೇವೆಗಳು)

ಗೆ,

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ನಿರ್ದೇಶಕರು, ಕಾರ್ಮಿಕ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು, ರಾಜಾಜಿನಗರ, ಬೆಂಗಳೂರು.
3) ಹೆಚ್ಚುವರಿ ಆಯುಕ್ತರು/ಪ್ರಾದೇಶಿಕ ನಿರ್ದೇಶಕರು, ಕಾ.ರಾ.ವಿ. ನಿಗಮ, ನಂ.10, ಬಿನ್ನಿ ಮೈದಾನ, ಬಿನ್ನಿಪೇಟೆ, ಬೆಂಗಳೂರು-560 023.
4) ರಾಜ್ಯ ವೈದ್ಯಕೀಯ ಆಯುಕ್ತರು, ಕಾ.ರಾ.ವಿ. ನಿಗಮ, ನಂ.119, 5ನೇ ಮುಖ್ಯ ರಸ್ತೆ ಚಾಮರಾಜಪೇಟೆ (ಎಸ್.ಬಿ.ಐ. ಮೇಲೆ ಚಾಮರಾಜಪೇಟೆ) ರಾಮಮಂದಿರದ ಬಸ್ ನಿಲ್ದಾಣದ ಎದುರು, ಬೆಂಗಳೂರು-560 018.
5) ಮಾನ್ಯ ಕಾರ್ಮಿಕ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
6) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ- 3&9) ಬೆಂಗಳೂರು.
7) ಸರ್ಕಾರದ ಕಾರ್ಯದರ್ಶಿ/ಉಪ ಕಾರ್ಯದರ್ಶಿಯವರ ಆಪ್ತ ಶಾಖೆ, ಕಾರ್ಮಿಕ ಇಲಾಖೆ.
8) ಶಾಖಾ ರಕ್ಷಕ ಕಡತ : ಹೆಚ್ಚುವರಿ ಪ್ರತಿ.

ಕರ್ನಾಟಕ ಸರ್ಕಾರದ ನಡವಳಿಗಳು

170

**ವಿಷಯ:-** ಹೊಸಕೋಟೆ ಕೈಗಾರಿಕಾ ಪ್ರದೇಶದಲ್ಲಿ ಕಾರಾವಿ ಚಿಕಿತ್ಸಾಲಯವನ್ನು ಪ್ರಾರಂಭಿಸುವ ಕುರಿತು.

**ಓದಲಾಗಿದೆ:-** 1) ನಿರ್ದೇಶಕರು, ಕಾ.ರಾ.ವಿ. ಯೋಜನೆ ವೈದ್ಯಕೀಯ ಸೇವೆಗಳು, ಇವರ ಪತ್ರ ಸಂಖ್ಯೆ.ಅಭಿವೃದ್ಧಿ/98/2008-09, ದಿನಾಂಕ:28-08-2008. 27-12-2008, 07-05-2009, 18-12-2009, 07-03-2010, 30-08-2010, 23-03-2011 ಮತ್ತು 24-06-2011.

2) ಉಪ ನಿರ್ದೇಶಕರು (ವೈದ್ಯಕೀಯ) ಕಾ.ರಾ.ವಿ. ನಿಗಮ, ನವದೆಹಲಿ ಇವರ ಪತ್ರ ಸಂಖ್ಯೆ.U-11/14/10/09-Med.I/K.K. ದಿನಾಂಕ:24-02-2011.

**ಪ್ರಸ್ತಾವನೆ:**

ನಿರ್ದೇಶಕರು, ಕಾ.ರಾ.ವಿ. ಯೋಜನೆ ವೈದ್ಯಕೀಯ ಸೇವೆಗಳು ಇವರ ಮೇಲೆ ಓದಲಾದ (1)ರ ಪತ್ರಗಳಲ್ಲಿ ಹೊಸಕೋಟೆ ಕೈಗಾರಿಕಾ ಪ್ರದೇಶದಲ್ಲಿ 3,000ಕ್ಕಿಂತ ಹೆಚ್ಚಿನ ಕಾರ್ಮಿಕ ವಿಮಾದಾರರು ಇದ್ದು ಕಾ.ರಾ.ವಿ. ನಿಗಮದ ನಾರಮ್ಸ್ ಪ್ರಕಾರ 3000-5000 ವಿಮಾದಾರರನ್ನು ಹೊಂದಿರುವ ಸ್ಥಳಗಳಲ್ಲಿ ಹೊಸದಾಗಿ ಚಿಕಿತ್ಸಾಲಯವನ್ನು ಪ್ರಾರಂಭಿಸಬಹುದಾಗಿರುತ್ತದೆಯೆಂದು ಇಂತಹ ಚಿಕಿತ್ಸಾಲಯಕ್ಕೆ ಈ ಕೆಳಗಿನಂತೆ 12 ಹುದ್ದೆಗಳನ್ನು ಸೃಜಿಸಲು ಅವಕಾಶವಿದೆಯೆಂದು ತಿಳಿಸಿದ್ದಾರೆ.

| ಕ್ರ. ಸಂ. | ಹುದ್ದೆಯ ಹೆಸರು | ಹುದ್ದೆಗಳ ಪ್ರಮಾಣ |
|---|---|---|
| 1. | ವಿಮಾ ವೈದ್ಯಾಧಿಕಾರಿಗಳು | 02 ಹುದ್ದೆಗಳು |
| 2 | ಪ್ರಥಮ ದರ್ಜೆ ಸಹಾಯಕರು | 02 ಹುದ್ದೆಗಳು |
| 3. | ದ್ವಿತೀಯ ದರ್ಜೆ ಸಹಾಯಕ | 01 ಹುದ್ದೆ |
| 4. | ಶುಶ್ರೂಷಕಿ | 02 ಹುದ್ದೆಗಳು |
| 5. | ಫಾರ್ಮಾಸಿಸ್ಟ್ | 02 ಹುದ್ದೆಗಳು |
| 6. | ಗ್ರೂಪ್ ಡಿ | 03 ಹುದ್ದೆಗಳು |
| | ಒಟ್ಟು | 12 ಹುದ್ದೆಗಳು |

ಚಿಕಿತ್ಸಾಲಯವನ್ನು ಪ್ರಾರಂಭಿಸಲು ಉಂಟಾಗುವ ಪೂರ್ಣ ವೆಚ್ಚವನ್ನು ಪ್ರಾರಂಭದ ಮೂರು ವರ್ಷದವರೆಗೆ ಕಾರಾವಿ ನಿಗಮವೇ ಭರಿಸುತ್ತದೆಯೆಂದು ತಿಳಿಸಿರುತ್ತಾರೆ. ಚಿಕಿತ್ಸಾಲಯದ ವಾರ್ಷಿಕ ಅಂದಾಜು ವೆಚ್ಚ ₹34.54ಲಕ್ಷವಾಗಿದ್ದು ಇದರಲ್ಲಿ ಕಾರಾವಿ ನಿಗಮದ ಪಾಲು ₹30.22ಲಕ್ಷ ಹಾಗೂ ರಾಜ್ಯ ಸರ್ಕಾರದ ಪಾಲು ₹4.31ಲಕ್ಷವೆಂದೂ ಇದರಿಂದ ರಾಜ್ಯ ಸರ್ಕಾರಕ್ಕೆ ಹೆಚ್ಚಿನ ಹೊರೆ ಉಂಟಾಗುವುದಿಲ್ಲವೆಂದು ತಿಳಿಸಿರುತ್ತಾರೆ.

ಉಪ ನಿರ್ದೇಶಕರು, (ವೈದ್ಯಕೀಯ) ಕಾ.ರಾ.ವಿ. ನಿಗಮ, ನವದೆಹಲಿ ಇವರ ಮೇಲೆ ಓದಲಾದ (2)ರ ಪತ್ರದಲ್ಲಿ ಹೊಸಕೋಟೆ ಕೈಗಾರಿಕಾ ಪ್ರದೇಶದಲ್ಲಿ ಇಬ್ಬರು ವೈದ್ಯ ಸಿಬ್ಬಂದಿಯನ್ನೊಳಗೊಂಡ ಚಿಕಿತ್ಸಾಲಯವನ್ನು ಪ್ರಾರಂಭಿಸಲು ತಗಲುವ ಸಂಪೂರ್ಣ ವೈದ್ಯಕೀಯ ವೆಚ್ಚವನ್ನು ಚಿಕಿತ್ಸಾಲಯವು ಪ್ರಾರಂಭಗೊಂಡ ದಿನಾಂಕದಿಂದ ಮೂರು ವರ್ಷಗಳ ತನಕ ಕಾರಾವಿ ನಿಗಮವೇ ಭರಿಸುತ್ತದೆಯೆಂದು ತಿಳಿಸಿ ಚಿಕಿತ್ಸಾಲಯವನ್ನು ಪ್ರಾರಂಭಿಸಲು ಅನುಮತಿಯನ್ನು ನೀಡಿರುತ್ತಾರೆ.

29/9/11 29/09/11

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ.ಕಾಇ 311 ಎಲ್ಎಸ್ಐ 2008**
**ಬೆಂಗಳೂರು, ದಿನಾಂಕ:24-09-2011.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಹೊಸಕೋಟೆ ಕೈಗಾರಿಕಾ ಪ್ರದೇಶದಲ್ಲಿ ಹೊಸದಾಗಿ ಕಾರ್ಮಿಕ ರಾಜ್ಯ ವಿಮಾ ಚಿಕಿತ್ಸಾಲಯವನ್ನು ತೆರೆಯಲು ಹಾಗೂ ಸದರಿ ಚಿಕಿತ್ಸಾಲಯಕ್ಕೆ ಈ ಕೆಳಕಂಡ ಹುದ್ದೆಗಳನ್ನು ಸೃಜಿಸಲು ಮಂಜೂರಾತಿ ನೀಡಲಾಗಿದೆ.

| ಕ್ರ. ಸಂ. | ಪದನಾಮ | ವೇತನ ಶ್ರೇಣಿ | ಹುದ್ದೆಗಳ ಸಂಖ್ಯೆ |
|---|---|---|---|
| 1. | ವಿಮಾ ವೈದ್ಯಾಧಿಕಾರಿಗಳು | 14050-25050 | 02 |
| 2. | ಪ್ರಥಮ ದರ್ಜೆ ಸಹಾಯಕ | 7275-13350 | 01 |
| 3. | ದ್ವಿತೀಯ ದರ್ಜೆ ಸಹಾಯಕ | 5800-10800 | 01 |
| 4. | ಶುಶ್ರೂಷಕರು | 8825-16000 | 02 |
| 5. | ಫಾರ್ಮಾಸಿಸ್ಟ್ | 7275-13350 | 02 |
| 6. | ಗ್ರೂಪ್ ಡಿ | 4800-7275 | 03 |
| | | ಒಟ್ಟು | 11 |

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ.ಆಇ 401 ವೆಚ್ಚ-9/11 ದಿನಾಂಕ:14-09-2011ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಗೋವಿಂದಸ್ವಾಮಿ) 24/9
ಪೀಠಾಧಿಕಾರಿ,
ಕಾರ್ಮಿಕ ಇಲಾಖೆ.
(ಕಾರಾವಿ ಯೋ (ವೈ) ಸೇವೆಗಳು)
24/09/2011

ಗೆ,

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ನಿರ್ದೇಶಕರು, ಕಾರ್ಮಿಕ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು, ರಾಜಾಜಿನಗರ, ಬೆಂಗಳೂರು.
3) ಖಜಾನೆ ಅಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು. (ನಿರ್ದೇಶಕರ ಮೂಲಕ)
4) ಮಾನ್ಯ ಕಾರ್ಮಿಕ ಮತ್ತು ರೇಷ್ಮೆ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
5) ಹೆಚ್ಚುವರಿ ಆಯುಕ್ತರು/ಪ್ರಾದೇಶಿಕ ನಿರ್ದೇಶಕರು, ಕಾ.ರಾ.ವಿ. ನಿಗಮ, ನಂ.10, ಬಿನ್ನಿ ಮೈದಾನ, ಬಿನ್ನಿಪೇಟೆ, ಬೆಂಗಳೂರು-560 023.
6) ರಾಜ್ಯ ವೈದ್ಯಕೀಯ ಆಯುಕ್ತರು, ಕಾ.ರಾ.ವಿ. ನಿಗಮ, ನಂ.119, 5ನೇ ಮುಖ್ಯ ರಸ್ತೆ, ಚಾಮರಾಜಪೇಟೆ (ಎಸ್.ಬಿ.ಐ. ಮೇಲೆ ಚಾಮರಾಜಪೇಟೆ) ರಾಮಮಂದಿರದ ಬಸ್ ನಿಲ್ದಾಣದ ಎದುರು, ಬೆಂಗಳೂರು-560 018.
7) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ- 9&11) ಬೆಂಗಳೂರು.
8) ಸರ್ಕಾರದ ಕಾರ್ಯದರ್ಶಿ/ಉಪ ಕಾರ್ಯದರ್ಶಿಯವರ ಆಪ್ತ ಶಾಖೆ, ಕಾರ್ಮಿಕ ಇಲಾಖೆ.
9) ಶಾಖಾ ರಕ್ಷಕ ಕಡತ : ಹೆಚ್ಚುವರಿ ಪ್ರತಿ.

ಕಾರ್ಮಿಕರ ರಾಜ್ಯ ವಿಮಾ ಯೋಜನೆ
(ವೈದ್ಯಕೀಯ) ಸೇವೆಗಳು
792 22 SEP 2011
ಬೆಂಗಳೂರು-560 010

**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ:- ಮೂವತ್ತು ಸಾವಿರಕ್ಕಿಂತ ಹೆಚ್ಚು ವಿಮಾದಾರರನ್ನು ಅನುಬಂಧಿಸಿರುವ ಕಾ.ರಾ.ವಿ. ಇಲಾಖೆಯ ಚಿಕಿತ್ಸಾಲಯಗಳನ್ನು ವಿಭಜಿಸುವ ಕುರಿತು.

ಓದಲಾಗಿದೆ:- ನಿರ್ದೇಶಕರು, ಕಾ.ರಾ.ವಿ. ಯೋಜನೆ ವೈದ್ಯಕೀಯ ಸೇವೆಗಳು, ಇವರ ಪತ್ರ ಸಂಖ್ಯೆ:ಅಭಿವೃದ್ಧಿ/121/2009-10, ದಿನಾಂಕ:15-09-2009, 02-01-2010, 09-03-2010, 25-03-2010, 30-07-2010, 21-08-2010, 11-01-2011, 24-03-2011, 13-05-2011, 08-07-2011.

ಪ್ರಸ್ತಾವನೆ:

ನಿರ್ದೇಶಕರು, ಕಾ.ರಾ.ವಿ. ಯೋಜನೆ ವೈದ್ಯಕೀಯ ಸೇವೆಗಳು ಇವರ ಮೇಲೆ ಓದಲಾದ ಪತ್ರಗಳಲ್ಲಿ ದಿನಾಂಕ:23-11-2009ರಂದು ನಡೆದಿದ್ದ ಪ್ರಾದೇಶಿಕ ಮಂಡಳಿ ಸಭೆಯಲ್ಲಿ ಮಾನ್ಯ ಕಾರ್ಮಿಕ ಸಚಿವರು 30,000ಕ್ಕಿಂತ ಹೆಚ್ಚು ವಿಮಾದಾರರನ್ನು ಅನುಬಂಧಿಸಲಾಗಿರುವ ಕಾರಾವಿ ಚಿಕಿತ್ಸಾಲಯಗಳಲ್ಲಿ ಸಮರ್ಪಕವಾಗಿ ವೈದ್ಯಕೀಯ ಸೌಲಭ್ಯಗಳನ್ನು ವಿಸ್ತರಿಸಲು ಸಾಧ್ಯವಾಗದ ಕಾರಣ, ಇವುಗಳನ್ನು ವಿಭಜಿಸುವ ಬಗ್ಗೆ ವರದಿ ಸಲ್ಲಿಸಲು ಉಪ ಸಮಿತಿಯನ್ನು ರಚಿಸಲು ತಿಳಿಸಿರುವ ಪ್ರಕಾರ, ಉಪ ಸಮಿತಿಯನ್ನು ರಚಿಸಿ ಈ ಕೆಳಗಿನ 07 ಚಿಕಿತ್ಸಾಲಯಗಳನ್ನು ವಿಭಜಿಸಲು ಈ ಕೆಳಗಿನಂತೆ ಸಮಿತಿಯು ಶಿಫಾರಸ್ಸು ಮಾಡಿರುತ್ತದೆ ಎನ್ನುವುದಾಗಿ ಇಲಾಖಾ ನಿರ್ದೇಶಕರು ತಿಳಿಸಿರುತ್ತಾರೆ.

| ಕ್ರ. ಸಂ. | ಹಾಲಿ ಕಾರ್ಯ-ನಿರ್ವಹಿಸುತ್ತಿರುವ ಚಿಕಿತ್ಸಾಲಯ | ಪ್ರಸ್ತುತ ಅನುಬಂಧಿಸಲಾದ ವಿಮಾದಾರರ ಸಂಖ್ಯೆ. | ವಿಭಜಿಸಿ ಹೊಸ ಪ್ರದೇಶಗಳಲ್ಲಿ ಪ್ರಾರಂಭಿಸಬೇಕಾದ ಚಿಕಿತ್ಸಾಲಯಗಳು |
|---|---|---|---|
| 1. | ಬೊಮ್ಮನಹಳ್ಳಿ ಬೆಂಗಳೂರು | 50269 | ಅ) ಸರ್ಜಾಪುರ ರಸ್ತೆ, ಆ) ಗೊಟ್ಟಿಗೆರೆ |
| 2. | ಪೀಣ್ಯ. ಬೆಂಗಳೂರು | 98,188 | ಅ) ಲಗ್ಗೆರೆ ಆ) ಪೀಣ್ಯ ಕೈಗಾರಿಕಾ ಪ್ರದೇಶ |
| 3. | ಯಶವಂತಪುರ, ಬೆಂಗಳೂರು | 42,120 | ಮತ್ತಿಕೆರೆ |
| 4. | ಬೊಮ್ಮಸಂದ್ರ, ಬೆಂಗಳೂರು | 68,517 | ಕೋಣಪ್ಪನ ಅಗ್ರಹಾರ |
| 5. | ದಾಸರಹಳ್ಳಿ. ಬೆಂಗಳೂರು | 64,581 | ಮಾದನಾಯಕನಹಳ್ಳಿ |
| 6. | ದೊಡ್ಡಬಳ್ಳಾಪುರ ಬೆಂಗಳೂರು | 46,802 | ಬಾಶೆಟ್ಟಹಳ್ಳಿ |
| 7. | ವಿಲ್ಸನ್‌ಗಾರ್ಡನ್ | 31,080 | ಕೋರಮಂಗಲ |

ಈ ರೀತಿ ವಿಭಜನೆ ಮಾಡಿದಲ್ಲಿ, ಹೊಸದಾಗಿ ಪ್ರಾರಂಭಿಸಲಾಗುವ ಚಿಕಿತ್ಸಾಲಯಗಳಿಗೆ ಈ ಕೆಳಗಿನಂತೆ ಸಿಬ್ಬಂದಿಯನ್ನು ಸೃಜಿಸಬೇಕಾಗುತ್ತದೆ ಎನ್ನುವುದಾಗಿ ನಿರ್ದೇಶಕರು ತಿಳಿಸಿರುತ್ತಾರೆ.

| ಕ್ರ. ಸಂ. | ಪದನಾಮ | ಒಟ್ಟು ಹುದ್ದೆಗಳ ಸಂಖ್ಯೆ |
|---|---|---|
| 1. | ವಿಮಾ ವೈದ್ಯಾಧಿಕಾರಿಗಳು | 35 |
| 2. | ಕಛೇರಿ ಅಧೀಕ್ಷಕರು | 09 |
| 3. | ಪ್ರಥಮ ದರ್ಜೆ ಸಹಾಯಕರು | 18 |
| 4. | ದ್ವಿತೀಯ ದರ್ಜೆ ಸಹಾಯಕರು | 27 |
| 5. | ಶುಶ್ರೂಷಕರು- | 36 |
| 6. | ಫಾರ್ಮಾಸಿಸ್ಟ್ | 45 |
| 7. | ಗ್ರೂಪ್ ಡಿ | 63 |
| | ಒಟ್ಟು | 233 |

ಈ ರೀತಿ ಚಿಕಿತ್ಸಾಲಯಗಳನ್ನು ವಿಭಜಿಸಿದಲ್ಲಿ ವಾರ್ಷಿಕ ಅಂದಾಜು ₹677.18ಲಕ್ಷಗಳ ವೆಚ್ಚ ಬರಲಿದ್ದು, ಇದರಲ್ಲಿ ಕಾರಾವಿ ನಿಗಮದ ಪಾಲು ₹593.53ಲಕ್ಷ, ರಾಜ್ಯ ಸರ್ಕಾರದ ಪಾಲು ₹85.65ಲಕ್ಷ ಮಾತ್ರ ಆಗುತ್ತದೆ ಎನ್ನುವುದಾಗಿ ನಿರ್ದೇಶಕರು ತಿಳಿಸಿರುತ್ತಾರೆ. ಕಾರಾವಿ ನಿಗಮದ ಸೀಲಿಂಗ್ ಪ್ರಕಾರ, ₹186.60ಕೋಟಿ ವೆಚ್ಚ ಮಾಡಲು ಅವಕಾಶ ಇರುವ ಕಾರಣ, ಈ ವೆಚ್ಚವು ನಿಗಮದ ಸೀಲಿಂಗ್‌ಗಿಂತ ಹೆಚ್ಚಾಗಿರುವುದಿಲ್ಲವೆಂದು ತಿಳಿಸುತ್ತಾ, ಈ ಪ್ರಸ್ತಾವನೆಗೆ ಅನುಮೋದನೆಯನ್ನು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ.ಕಾಇ 50 ಎಲ್ಎಸ್ಐ 2010</u>**
**<u>ಬೆಂಗಳೂರು, ದಿನಾಂಕ:21-09-2011.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕಾರ್ಮಿಕ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ಇಲಾಖೆಗೆ ಈ ಕೆಳಕಂಡಂತೆ ಐದು ಚಿಕಿತ್ಸಾಲಯಗಳನ್ನು ಹೊಸದಾಗಿ ಪ್ರಾರಂಭಿಸಲು ಹಾಗೂ ಹೊಸದಾಗಿ ಪ್ರಾರಂಭಿಸುವ ಚಿಕಿತ್ಸಾಲಯಗಳಿಗೆ ಅಗತ್ಯವಿರುವ ಈ ಕೆಳಕಂಡ ಹುದ್ದೆಗಳ ಸೃಜನೆಗೆ ಮಂಜೂರಾತಿ ನೀಡಲಾಗಿದೆ.

| ಕ್ರ. ಸಂ. | ಹಾಲಿ ಕಾರ್ಯನಿರ್ವಹಿಸುತ್ತಿರುವ ಚಿಕಿತ್ಸಾಲಯಗಳು | ವಿಭಜನೆಯ ನಂತರ ಹೊಸದಾಗಿ ಪ್ರಾರಂಭಿಸಿರುವ ಚಿಕಿತ್ಸಾಲಯಗಳು |
|---|---|---|
| 1. | ಬೊಮ್ಮನಹಳ್ಳಿ, ಬೆಂಗಳೂರು | 01 |
| 2. | ಪೀಣ್ಯ, ಬೆಂಗಳೂರು | 02 |
| 3. | ಬೊಮ್ಮಸಂದ್ರ, ಬೆಂಗಳೂರು | 01 |
| 4. | ದಾಸರಹಳ್ಳಿ, ಬೆಂಗಳೂರು | 01 |
| | ಒಟ್ಟು | 05 |

| ಕ್ರ. ಸಂ. | ಹುದ್ದೆಗಳ ಪದನಾಮ | ಪ್ರತಿ ಚಿಕಿತ್ಸಾಲಯಕ್ಕೆ ಮಂಜೂರಾತಿ ನೀಡಿರುವ ಹುದ್ದೆಗಳು | ಮಂಜೂರಾತಿ ನೀಡಿರುವ ಒಟ್ಟು ಹುದ್ದೆಗಳು |
|---|---|---|---|
| 1. | ವಿಮಾ ವೈದ್ಯಾಧಿಕಾರಿಗಳು | 03 | 15 |
| 2. | ಕಛೇರಿ ಅಧೀಕ್ಷಕರು | 01 | 05 |
| 3. | ಪ್ರಥಮ ದರ್ಜೆ ಸಹಾಯಕರು | 02 | 10 |
| 4. | ದ್ವಿತೀಯ ದರ್ಜೆ ಸಹಾಯಕರು | 03 | 15 |
| 5. | ಶುಶ್ರೂಷಕರು | 04 | 20 |
| 6. | ಫಾರ್ಮಾಸಿಸ್ಟ್ | 05 | 25 |
| 7. | ಗ್ರೂಪ್ ಡಿ | 07 | 35 |
| | ಒಟ್ಟು ಹುದ್ದೆಗಳು | 25 | 125 |

ಈ ಆದೇಶವನ್ನು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ:ಆಇ 229 ವೆಚ್ಚ-9/11 ದಿನಾಂಕ:08-09-2011ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಗೋವಿಂದಸ್ವಾಮಿ)
ಪೀಠಾಧಿಕಾರಿ,
ಕಾರ್ಮಿಕ ಇಲಾಖೆ.
(ಕಾರಾವಿ ಯೋ (ವೈ) ಸೇವೆಗಳು)

ಗೆ,

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ನಿರ್ದೇಶಕರು, ಕಾರ್ಮಿಕ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು, ಬೆಂಗಳೂರು.
3) ಖಜಾನೆ ಅಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
4) ಮಾನ್ಯ ಕಾರ್ಮಿಕ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
5) ಹೆಚ್ಚುವರಿ ಆಯುಕ್ತರು/ಪ್ರಾದೇಶಿಕ ನಿರ್ದೇಶಕರು, ಕಾರ್ಮಿಕ ರಾಜ್ಯ ವಿಮಾ ನಿಗಮ, ನಂ.10, ಬಿನ್ನಿ ಮೈದಾನ, ಬಿನ್ನಿಪೇಟೆ, ಬೆಂಗಳೂರು560 023.
6) ರಾಜ್ಯ ವೈದ್ಯಕೀಯ ಆಯುಕ್ತರು, ಕಾರ್ಮಿಕ ರಾಜ್ಯ ವಿಮಾ ನಿಗಮ, ನಂ.119, ಜೆ.ಪಿ.ಆರ್ಕೇಡ್, 5ನೇ ಮುಖ್ಯ ರಸ್ತೆ, ರಾಮಮಂದಿರದ ಬಸ್ ನಿಲ್ದಾಣದ ಎದುರು (ಎಸ್‌ಬಿಐ ಮೇಲೆ) ಚಾಮರಾಜಪೇಟೆ, ಬೆಂಗಳೂರು-560 018.
7) ಸರ್ಕಾರದ ಕಾರ್ಯದರ್ಶಿ/ಉಪ ಕಾರ್ಯದರ್ಶಿಯವರ ಆಪ್ತ ಶಾಖೆ, ಕಾರ್ಮಿಕ ಇಲಾಖೆ.
8) ಶಾಖಾ ರಕ್ಷಕ ಕಡತ : ಹೆಚ್ಚುವರಿ ಪ್ರತಿ.

ಕಾರ್ಮಿಕರ ರಾಜ್ಯ ವಿಮಾ ಯೋಜನೆ (ವೈದ್ಯಕೀಯ) ಸೇವೆಗಳು
1313 24 JAN 2012
ಬೆಂಗಳೂರು-560 010

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ಇಲಾಖೆಗೆ 45 ವಾಹನ ಚಾಲಕರು, 01 ಕ್ಲೀನರ್ ಹುದ್ದೆ ಮತ್ತು 96 ಸ್ಟ್ರೆಚರ್ ಬೇರರ್ ಹುದ್ದೆಗಳನ್ನು ಸೃಜಿಸುವ ಕುರಿತು

**ಓದಲಾಗಿದೆ:-** ನಿರ್ದೇಶಕರು, ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ಇವರ ಪತ್ರ ಸಂಖ್ಯೆ: ಅಬಿವೃದ್ಧಿ/130/2007-08 ದಿನಾಂಕ: 18-08-2007, 18-03-2008, 28-08-2009, 07-12-2010 ಮತ್ತು 08-04-2011.

ಪ್ರಸ್ತಾವನೆ:

ನಿರ್ದೇಶಕರು ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು, ಇವರ ಮೇಲೆ ಓದಲಾದ ಪತ್ರಗಳಲ್ಲಿ, ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ಇಲಾಖೆಯಲ್ಲಿ ಹಾಲಿ ಇರುವ ಆಂಬುಲೆನ್ಸ್, ವಾಹನಗಳು, ಕಾರುಗಳು, ಔಷಧಿ ಸಾಗಾಣಿಕೆ ಟ್ರಕ್ಕಿಗೆ ಪ್ರಸ್ತುತ ಇರುವ ವಾಹನ ಚಾಲಕರು ಸಾಕಾಗುತ್ತಿಲ್ಲವೆಂದು, ಕೆಲವೊಂದು ಕಡೆ ವಾಹನ ಚಾಲಕರಿಲ್ಲದೆ ಆಂಬುಲೆನ್ಸ್ ವಾಹನಗಳು ಚಲಿಸದೆ ನಿಂತಿರುತ್ತವೆಯೆಂದು, ಇದರಿಂದ ವಿಮಾದಾರರಿಗೆ ತೊಂದರೆ ಉಂಟಾಗುತ್ತಿರುವ ದೃಷ್ಟಿಯಿಂದ ವಾಹನ ಚಾಲಕರ ಸ್ಟ್ರೆಚರ್ ಬೇರರ್ ಹಾಗೂ ಕ್ಲೀನರ್ ಹುದ್ದೆಗಳು ಅವಶ್ಯವಾಗಿ ಬೇಕಾಗಿದ್ದು ಈ ಕೆಳಕಂಡಂತೆ ಪ್ರಸ್ತಾವನೆಯನ್ನು ಸೂಕ್ತ ಸಮರ್ಥನೆಯೊಂದಿಗೆ ಸಲ್ಲಿಸಿರುತ್ತಾರೆ.

| ಕ್ರ. ಸಂ. | ಕಾರಾವಿ ಆಸ್ಪತ್ರೆ/ಚಿಕಿತ್ಸಾಲಯಗಳ ಹೆಸರು ಮತ್ತು ಹಾಸಿಗೆ ಸಾಮರ್ಥ್ಯ | ಇ.ಎಸ್.ಐ. ನಾರಮ್ಸ್ ಪ್ರಕಾರ ನಿಗದಿಪಡಿಸಿರುವ ಆಂಬುಲೆನ್ಸ್ ಹಾಗೂ ಸಿಬ್ಬಂದಿ ವರ್ಗ | | | ಇಲಾಖೆಯಲ್ಲಿ ಹಾಲಿ ಕಾರ್ಯ ನಿರ್ವಹಿಸುತ್ತಿರುವ ಆಂಬುಲೆನ್ಸ್ ಹಾಗೂ ಸಿಬ್ಬಂದಿ ವರ್ಗ | | | ಖರೀದಿಸಬೇಕಾಗಿರುವ ಆಂಬುಲೆನ್ಸ್‌ಗಳು/ ಸೃಜಿಸಬೇಕಾಗಿರುವ ಸಿಬ್ಬಂದಿ ವರ್ಗ | | |
|---|---|---|---|---|---|---|---|---|---|---|
| | | ಆಂಬುಲೆನ್ಸ್‌ಗಳು | ವಾಹನ ಚಾಲಕರು | ಸ್ಟ್ರೆಚರ್ ಬೇರರ್ | ಆಂಬುಲೆನ್ಸ್‌ಗಳು | ವಾಹನ ಚಾಲಕರು | ಸ್ಟ್ರೆಚರ್ ಬೇರರ್ | ಆಂಬುಲೆನ್ಸ್‌ಗಳು | ವಾಹನ ಚಾಲಕರು | ಸ್ಟ್ರೆಚರ್ ಬೇರರ್ |
| 1 | ಕಾ.ರಾ.ವಿ. ಆಸ್ಪತ್ರೆ ಇಂದಿರಾನಗರ 300 ಹಾಸಿಗೆ ಸಾಮರ್ಥ್ಯ | 3 | 9 | 18 | 2 | 3 | 0 | 1 | 6 | 18 |
| 2 | ಕಾ.ರಾ.ವಿ. ಆಸ್ಪತ್ರೆ ಮೈಸೂರು 100 ಹಾಸಿಗೆ ಸಾಮರ್ಥ್ಯ | 2 | 6 | 12 | 2 | 2 | 0 | 0 | 4 | 12 |

| | | | | | | | | | | | |
|---|---|---|---|---|---|---|---|---|---|---|---|
| 3. | ಕಾ.ರಾ.ವಿ. ಆಸ್ಪತ್ರೆ ಮಂಗಳೂರು 100 ಹಾಸಿಗೆ ಸಾಮರ್ಥ್ಯ | 2 | 6 | 12 | 1 | 2 | 0 | 1 | 4 | 12 |
| 4. | ಕಾ.ರಾ.ವಿ. ಆಸ್ಪತ್ರೆ ಬೆಳಗಾವಿ 50 ಹಾಸಿಗೆ ಸಾಮರ್ಥ್ಯ | 1 | 3 | 6 | 1 | 2 | 0 | 0 | 1 | 6 |
| 5. | ಕಾ.ರಾ.ವಿ ಆಸ್ಪತ್ರೆ ಹುಬ್ಬಳ್ಳಿ 50 ಹಾಸಿಗೆ ಸಾಮರ್ಥ್ಯ | 1 | 3 | 6 | 1 | 1 | 0 | 0 | 2 | 6 |
| 6. | ಕಾ.ರಾ.ವಿ ಆಸ್ಪತ್ರೆ ದಾಂಡೇಲಿ 25 ಹಾಸಿಗೆ ಸಾಮರ್ಥ್ಯ | 1 | 3 | 6 | 1 | 1 | 0 | 0 | 2 | 6 |
| 7. | ಕಾ.ರಾ.ವಿ ಆಸ್ಪತ್ರೆ ದಾವಣಗೆರೆ 50 ಹಾಸಿಗೆ ಸಾಮರ್ಥ್ಯ | 1 | 3 | 6 | 1 | 1 | 0 | 0 | 2 | 6 |
| 8. | ಕಾ.ರಾ.ವಿ. ಚಿಕಿತ್ಸಾಲಯ ಬೊಮ್ಮಸಂದ್ರ. ಬೆಂಗಳೂರು 44854 ಎಂ. ಆರ್. ಇ. | 1 | 3 | 6 | 1 | 1 | 0 | 0 | 2 | 6 |
| 9. | ಕಾ.ರಾ.ವಿ. ರೋಗ ಪತ್ತೆ ಹಚ್ಚುವ ಕೇಂದ್ರ ಬಸವನಗುಡಿ. ಬೆಂಗಳೂರು 67330 ಎಂ. ಆರ್. ಇ. | 1 | 3 | 6 | 0 | 0 | 0 | 1 | 3 | 6 |
| 10. | ಕಾ.ರಾ.ವಿ. ಚಿಕಿತ್ಸಾಲಯ ಪೀಣ್ಯಾ, ಬೆಂಗಳೂರು 52220 ಎಂ. ಆರ್. ಇ. | 1 | 3 | 6 | 0 | 0 | 0 | 1 | 3 | 6 |
| 11. | ಕಾ.ರಾ.ವಿ. ಚಿಕಿತ್ಸಾಲಯ ಯಲಹಂಕ. ಬೆಂಗಳೂರು 17631 ಎಂ. ಆರ್. ಇ. | 1 | 3 | 6 | 0 | 0 | 0 | 1 | [illegible] | 6 |
| 12. | ಕಾ.ರಾ.ವಿ. ಚಿಕಿತ್ಸಾಲಯ ದ್ಯಾವಸಂದ್ರ 13986 ಎಂ. ಆರ್. ಇ. | 1 | 3 | 6 | 0 | 0 | 0 | 1 | 3 | 6 |
| | ಒಟ್ಟು | 16 | 48 | 96 | 10 | 13 | 0 | 6 | 35 | 96 |

ಇಲಾಖೆಗೆ ಅಗತ್ಯವಾಗಿ 45 ವಾಹನ ಚಾಲಕರು 01 ಕ್ಲೀನರ್ ಮತ್ತು 96 ಸ್ಟ್ರೆಚರ್ ಬೇರರ್ ಹುದ್ದೆಗಳನ್ನು ಸೃಜಿಸಲು 2011-12ನೇ ಸಾಲಿನ ಆಯ-ವ್ಯಯದಲ್ಲಿ ₹.120.32ಲಕ್ಷ ಲಭ್ಯವಿದ್ದು ಅದರಲ್ಲಿ ಈ ಪ್ರಸ್ತಾವನೆಗೆ ತಗಲುವ ಅಂದಾಜು ವೆಚ್ಚ ₹116.70ಲಕ್ಷಗಳನ್ನು ಭರಿಸಬಹುದೆಂದು ತಿಳಿಸಿದ್ದಾರೆ.

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕಾಇ 353 ಎಲ್‌ಎಸ್‌ಐ 2007, ಬೆಂಗಳೂರು ದಿನಾಂಕ:18-01-2012.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ಇಲಾಖೆಯ 07 ವಾಹನ ಚಾಲಕರ ಹುದ್ದೆಗಳು ಹಾಗೂ 20 ಸ್ಟ್ರೆಚರ್ ಬೇರರ್ ಹುದ್ದೆಗಳನ್ನು ಸೃಜಿಸಲು ಹಾಗೂ ಸೂಕ್ತ ಸ್ಥಳಗಳಲ್ಲಿ ನಿಯಮಾನುಸಾರ ಭರ್ತಿ ಮಾಡಲು ಪ್ರಸ್ತುತ ವಿತ್ತ ವ್ಯಯ ಆದೇಶವನ್ನು ಸಡಿಲಿಸಿ ಮಂಜೂರಾತಿ ನೀಡಲಾಗಿದೆ.

ಮೇಲಿನ ಹುದ್ದೆಗಳಿಗೆ, ನೇಮಕ ಮಾಡಿಕೊಂಡ ನಂತರವೂ ಅಗತ್ಯವೆನಿಸಿದಲ್ಲಿ, ಉಳಿದ ನಾಲ್ಕು ವಾಹನ ಚಾಲಕರು ಹಾಗೂ ಒಂದು ಕ್ಲೀನರ್ ಹುದ್ದೆಗಳ ಸೇವೆಯನ್ನು ಬಾಹ್ಯ ಮೂಲದಿಂದ (Out Source) ಪಡೆಯಲು ಹಾಗೂ ಸದರಿ ವೆಚ್ಚವನ್ನು ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸುವಂತೆ ಅನುಮತಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 541 ವೆಚ್ಚ-9/11, ದಿನಾಂಕ:21-12-2011ರ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಗೋವಿಂದಸ್ವಾಮಿ) 18/1
ಪೀಠಾಧಿಕಾರಿ,
ಕಾರ್ಮಿಕ ಇಲಾಖೆ,
(ಕಾರಾವಿ ಯೋಜನೆ ವೈದ್ಯಕೀಯ ಸೇವೆಗಳು)
18/01/2012

ಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ಕಾರ್ಮಿಕ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು, ಬೆಂಗಳೂರು,
3. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-3&9) ವಿಧಾನಸೌಧ, ಬೆಂಗಳೂರು.
4. ಖಜಾನೆ ಅಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು (ನಿರ್ದೇಶಕರ ಮೂಲಕ)
5. ಸಂಬಂಧಪಟ್ಟ ಜಿಲ್ಲಾ/ತಾಲೂಕು ಖಜಾನೆ ಅಧಿಕಾರಿಗಳು, (ನಿರ್ದೇಶಕರ ಮೂಲಕ)
6. ಸರ್ಕಾರದ ಕಾರ್ಯದರ್ಶಿ/ಜಂಟಿ ಕಾರ್ಯದರ್ಶಿ ಯವರ ಆಪ್ತ ಶಾಖೆ, ಕಾರ್ಮಿಕ ಇಲಾಖೆ
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಪ್ರಥಮ ದರ್ಜೆ ಸಹಾಯಕರ ಹುದ್ದೆ ಸೃಜನೆ ಕುರಿತು.

**ಓದಲಾಗಿದೆ:-** ನಿರ್ದೇಶಕರು, ಕಾ.ರಾ.ವಿ. ಯೋಜನೆ ವೈದ್ಯಕೀಯ ಸೇವೆಗಳು, ಇವರ ಪತ್ರ ಸಂಖ್ಯೆ.ಅಭಿವೃದ್ಧಿ/14/2012-13, ದಿನಾಂಕ:21-05-2012,

**ಪ್ರಸ್ತಾವನೆ:**

ನಿರ್ದೇಶಕರು, ಕಾ.ರಾ.ವಿ. ಯೋಜನೆ ವೈದ್ಯಕೀಯ ಸೇವೆಗಳು ಇವರು ಮೇಲೆ ಓದಲಾದ ಪತ್ರದಲ್ಲಿ ಇಲಾಖೆಯ ಅಧೀನಕ್ಕೆ ಒಳಪಡುವ ಕಾ.ರಾ.ವಿ. ಚಿಕಿತ್ಸಾಲಯಗಳಲ್ಲಿ, 3,000 ವಿಮಾದಾರರನ್ನು ಅನುಬಂಧಿಸಲಾಗಿದ್ದು, ಇವುಗಳಲ್ಲಿ ಬಹಳಷ್ಟು ಕಾ.ರಾ.ವಿ. ಚಿಕಿತ್ಸಾಲಯಗಳಲ್ಲಿ ಪ್ರಥಮ ದರ್ಜೆ ಹುದ್ದೆಗಳು ಮಂಜೂರಾಗಿರುವುದಿಲ್ಲ. ಕಾ.ರಾ.ವಿ. ನಿಗಮದ ಮಾರ್ಗಸೂಚಿ (ನಾರಮ್ಸ್) ಅನುಸಾರ 3,000 ಹಾಗೂ ಅದಕ್ಕೂ ಹೆಚ್ಚಿನ ವಿಮಾದಾರರನ್ನು ಅನುಬಂಧಿಸಲಾದ ಚಿಕಿತ್ಸಾಲಯಗಳಿಗೆ 2 ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು ಸೃಜಿಸಲು ಅವಕಾಶವಿರುತ್ತದೆ. ಇಲಾಖೆಯ 28 ಕಾರಾವಿ ಚಿಕಿತ್ಸಾಲಯಗಳಿಗೆ ಪ್ರಥಮ ದರ್ಜೆ ಸಹಾಯಕರ ಹುದ್ದೆ ಮಂಜೂರಾಗಿರುವುದಿಲ್ಲ. ಚಿಕಿತ್ಸಾಲಯಗಳ ಆಡಳಿತಾತ್ಮಕ ಹಿತದೃಷ್ಟಿಯಿಂದ ಪ್ರಥಮ ದರ್ಜೆ ಸಹಾಯಕರ ಹುದ್ದೆಗಳು ಅತೀ ಅವಶ್ಯಕವಾಗಿರುತ್ತದೆ. ಇತ್ತೀಚೆಗೆ ವಿಮಾದಾರರ ಗರಿಷ್ಠ ವೇತನದ ಮಿತಿಯನ್ನು ₹10,000/- ದಿಂದ ₹15,000/-ಕ್ಕೆ ಹೆಚ್ಚಿಸಲಾಗಿದ್ದು, ಹಾಗೂ ಖಾಸಗಿ ವಿದ್ಯಾ ಸಂಸ್ಥೆಗಳು ಮತ್ತು ಖಾಸಗಿ ಆಸ್ಪತ್ರೆ ನರ್ಸಿಂಗ್ ಹೋಂ ನೌಕರರು ಸಹಾ ಇ.ಎಸ್.ಐ. ಯೋಜನೆ ವ್ಯಾಪ್ತಿಗೆ ಒಳಪಡುತ್ತಿರುವುದರಿಂದ ಇ.ಎಸ್.ಐ. ಸೌಲಭ್ಯವನ್ನು ಪಡೆಯಲು ಚಿಕಿತ್ಸಾಲಯಗಳಲ್ಲಿ ಕೆಲಸ ಕಾರ್ಯಗಳ ಒತ್ತಡ ಹೆಚ್ಚಾಗಿರುವ ಕಾರಣ ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು ಸೃಜಿಸುವುದು ಅತ್ಯಗತ್ಯವಾಗಿದೆಯೆಂದು ತಿಳಿಸಿದ್ದಾರೆ.

ಇಲಾಖೆಯ ಈ ಕೆಳಕಂಡ 28 ಕಾ.ರಾ.ವಿ. ಚಿಕಿತ್ಸಾಲಯಗಳಿಗೆ ತಲಾ 2 ರಂತೆ ಒಟ್ಟು 56 ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು ಸೃಜಿಸಲು ವಾರ್ಷಿಕ ₹ 96,43,872/-ಗಳ ಅಂದಾಜು ವೆಚ್ಚ ಉಂಟಾಗುತ್ತದೆ. ಇದರಲ್ಲಿ ಕಾ.ರಾ.ವಿ. ನಿಗಮದ ಪಾಲು ₹84,38,388/-ರಾಜ್ಯ ಸರ್ಕಾರದ ಪಾಲು ಕೇವಲ ₹12,05,484/-ಗಳಾಗಿರುತ್ತದೆ.

1799 28 AUG 2012

ಬೆಂಗಳೂರು-560 010

28/08/12

| ಕ್ರ. ಸಂ. | ಕಾ.ರಾ.ವಿ. ಚಿಕಿತ್ಸಾಲಯಗಳ ಹೆಸರು | ಅನುಬಂಧಿಸಲಾದ ವಿಮಾದಾರರ ಸಂಖ್ಯೆ. | ಕಾ.ರಾ.ವಿ. ಮಾರ್ಗಸೂಚಿ ಪ್ರಕಾರ ಪ್ರ.ದ.ಸ.ರ ಅವಶ್ಯಕವಿರುವ ಪ್ರಮಾಣ |
|---|---|---|---|
| 1. | ಹನುಮಂತನಗರ | 8,742 | 2 |
| 2. | ಜಾಲಹಳ್ಳಿ | 7,289 | 2 |
| 3. | ಜಿಗಣಿ | 7,000 | 2 |
| 4. | ಕೆಂಗೇರಿ | 20,817 | 2 |
| 5. | ಚೆನ್ನಪಟ್ಟಣ | 4,000 | 1 |
| 6. | ನೆಲಮಂಗಲ | 10,212 | 2 |
| 7. | ಹರಿಹರ | 3,500 | 1 |
| 8. | ರಾಮನಗರ | 3,000 | 1 |
| 9. | ಹಾಸನ | 3,012 | 1 |
| 10. | ಮಂಡ್ಯ | 4,608 | 1 |
| 11. | ಬೆಳವಾಡಿ | 12,089 | 2 |
| 12. | ಮೈಸೂರು (ದಕ್ಷಿಣ) | 3,600 | 1 |
| 13. | ಎನ್.ಆರ್.ಮೊಹಲ್ಲಾ | 4,046 | 1 |
| 14. | ವಿ.ವಿ.ಪುರಂ | 3,500 | 1 |
| 15. | ಮಣಿಪಾಲ | 12,301 | 2 |
| 16. | ಕಾರ್ಕಳ | 3,000 | 1 |
| 17. | ಕುಂದಾಪುರ | 3,200 | 1 |
| 18. | ಪೀರನವಾಡಿ | 5,221 | 2 |
| 19. | ಕೊಣ್ಣೂರು | 3,200 | 1 |
| 20. | ಕ.ಎಸ್.ಆರ್.ಟಿ.ಸಿ. ಬೆಳಗಾವಿ | 3,501 | 1 |
| 21. | ಯಮುನಾಪುರ | 5,481 | 2. |
| 22. | ಬೇಲೂರು | 3,400 | 1 |
| 23. | ತಾರಿಹಾಳ | 4,000 | 1 |
| 24. | ಗದಗ | 4,000 | 1 |
| 25. | ಬಳ್ಳಾರಿ | 4,500 | 1 |
| 26. | ಮಳಖೇಡ | 3,600 | 1 |
| 27. | ಸೇಡಂ | 3,797 | 1 |
| 28. | ಅತ್ತಿಬೆಲೆ | 7,303 | 2 |

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ.ಕಾಇ 244 ಎಲ್‌ಎಸ್‌ಐ 2012,**
**ಬೆಂಗಳೂರು, ದಿನಾಂಕ:25-08-2012.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಕಾರ್ಮಿಕ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ಇಲಾಖೆಯಲ್ಲಿನ 28 ಚಿಕಿತ್ಸಾಲಯಗಳಿಗೆ ಈ ಕೆಳಕಂಡಂತೆ ಒಟ್ಟು 38

ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು ಸೃಜಿಸಿ ನಿಯಮಾನುಸಾರ ಭರ್ತಿ ಮಾಡಲು ಮಂಜೂರಾತಿ ನೀಡಲಾಗಿದೆ.

| ಕ್ರ. ಸಂ. | ಚಿಕಿತ್ಸಾಲಯಗಳಿಗೆ ವಿಮಾದಾರರನ್ನು ಅನುಬಂಧಿಸಲಾದ ಪ್ರಮಾಣ | ಹುದ್ದೆಯ ಹೆಸರು | ಹುದ್ದೆಗಳ ಸಂಖ್ಯೆ. |
|---|---|---|---|
| 01. | 18 ಚಿಕಿತ್ಸಾಲಯಗಳಲ್ಲಿ 3,000 ದಿಂದ 5,000ವರೆಗೆ ವಿಮಾದಾರರನ್ನು ಅನುಬಂಧಿಸಲಾಗಿದೆ. | ಪ್ರಥಮ ದರ್ಜೆ ಸಹಾಯಕ/UDC | 1 x 18 = 18 |
| 02. | 10 ಚಿಕಿತ್ಸಾಲಯಗಳಲ್ಲಿ 5,000ಕ್ಕೂ ಹೆಚ್ಚು ವಿಮಾದಾರರನ್ನು ಅನುಬಂಧಿಸಲಾಗಿದೆ. | ಪ್ರಥಮ ದರ್ಜೆ ಸಹಾಯಕ/UDC | 2 x 10 = 20 |
| | | ಒಟ್ಟು | 38 |

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ.ಆಇ 335 ವೆಚ್ಚ-9/2012, ದಿನಾಂಕ:13-08-2012ರ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಗೋವಿಂದಸ್ವಾಮಿ) 2/8
ಪೀಠಾಧಿಕಾರಿ,
ಕಾರ್ಮಿಕ ಇಲಾಖೆ.
(ಕಾರಾವಿ ಯೋ (ವೈ) ಸೇವೆಗಳು)

ಗೆ,

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ ವಿಭಾಗ, ಸರ್ಕಾರಿ ಮುದ್ರಣಾಲಯ, ಕೆಂಗೇರಿ ಹೊರವಲಯ, ಬೆಂಗಳೂರು ಇವರ ಮಾಹಿತಿಗಾಗಿ ಹಾಗೂ ಮುಂಚಿನ ಸಂಚಿಕೆಯಲ್ಲಿ ಪ್ರಕಟಿಸುವ ಸಲುವಾಗಿ ಪ್ರಕಟಿಸಿದ 100 ಪ್ರತಿಗಳನ್ನು ಪೀಠಾಧಿಕಾರಿ-5, ಕಾರ್ಮಿಕ ಇಲಾಖೆ, ಕೊಠಡಿ ಸಂಖ್ಯೆ.411, 4ನೇ ಮಹಡಿ, ವಿಕಾಸ ಸೌಧ, ಬೆಂಗಳೂರು ಇಲ್ಲಿಗೆ ಸರಬರಾಜು ಮಾಡುವಂತೆ ಕೋರಲಾಗಿದೆ.

**ಪ್ರತಿಯನ್ನು:-**

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ನಿರ್ದೇಶಕರು, ಕಾರ್ಮಿಕ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು, ರಾಜಾಜಿನಗರ, ಬೆಂಗಳೂರು.
3) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-9), ವಿಧಾನ ಸೌಧ, ಬೆಂಗಳೂರು.
4) ಸರ್ಕಾರದ ಕಾರ್ಯದರ್ಶಿ/ಜಂಟಿ ಕಾರ್ಯದರ್ಶಿಯವರ ಆಪ್ತ ಶಾಖೆ, ಕಾರ್ಮಿಕ ಇಲಾಖೆ.
5) ವೈದ್ಯಕೀಯ ಅಧೀಕ್ಷಕರುಗಳು, ಕಾರ್ಮಿಕ ರಾಜ್ಯ ವಿಮಾ ಯೋಜನೆ (ವೈದ್ಯಕೀಯ) ಸೇವೆಗಳ ಆಸ್ಪತ್ರೆಗಳು, ಇಂದಿರಾನಗರ, ಮೈಸೂರು, ದಾವಣಗೆರೆ, ಬೆಳಗಾವಿ, ಹುಬ್ಬಳ್ಳಿ,
6) ಶಾಖಾ ರಕ್ಷಕ ಕಡತ : ಹೆಚ್ಚುವರಿ ಪ್ರತಿ.

ಕರ್ನಾಟಕ ಸರ್ಕಾರ
GOVERNMENT OF KARNATAKA
ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳ ನಿರ್ದೇಶನಾಲಯ
DIRECTORATE OF E. S. I. S. MEDICAL SERVICES
ಎಸ್. ನಿಜಲಿಂಗಪ್ಪ ರಸ್ತೆ, 2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560 010
S.Nijalingappa Road, II Block, RAJAJINAGAR, BANGALORE – 560 010.
http://labour.kar.nic.in/esism/esis-index.htm Telefax: 2332 4216

**ನಿರ್ದೇಶಕರು ಕಾರ್ಮಿಕ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ರಾಜಾಜಿನಗರ ಬೆಂಗಳೂರು ಇವರ ನಡಾವಳಿ**

ವಿಷಯ:– ಕಾರಾವಿ ಚಿಕಿತ್ಸಾಲಯಗಳಿಗೆ ಹೊಸದಾಗಿ ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು ಸೃಜಿಸಲಾದ ಬಗ್ಗೆ.

ಓದಲಾಗಿದೆ:

1) ಈ ನಿರ್ದೇಶನಾಲಯದ ಪತ್ರ ಸಂಖ್ಯೆ: ಅಭಿವೃದ್ಧಿ/14/2012–13 ದಿ:21/05/2012
2) ಸರ್ಕಾರದ ಆದೇಶ ಸಂಖ್ಯೆ: ಕಾಇ/244/ಎಲ್‌ಎಸ್‌ಐ/12 ದಿ: 25/08/2012

ಪ್ರಸ್ತಾವನೆ:

ಓದಲಾದ (1)ರ ಈ ನಿರ್ದೇಶನಾಲಯದ ಪತ್ರದಲ್ಲಿ 28 ಕಾರಾವಿ ಚಿಕಿತ್ಸಾಲಯಗಳಿಗೆ ಕಾರಾವಿ ನಿಗಮದ ನಾರ್ಮ್ಸ್ ಪ್ರಕಾರ ಒಟ್ಟಾರೆ 56 ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು ಚಿಕಿತ್ಸಾಲಯದ ಆಡಳಿತಾತ್ಮಕ ಹಿತದೃಷ್ಟಿಯಿಂದ ಹೊಸದಾಗಿ ಸೃಜಿಸಲು ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. ಈ 28 ಕಾರಾವಿ ಚಿಕಿತ್ಸಾಲಯಗಳಿಗೆ ಪ್ರಥಮ ದರ್ಜೆ ಸಹಾಯಕರ ಹುದ್ದೆಗಳು ಮಂಜೂರಾತಿಯಾಗಿರುವುದಿಲ್ಲ ಎಂಬುದಾಗಿ ಸಹ ಸಮರ್ಥನೆಯಲ್ಲಿ ವಿವರಿಸಲಾಗಿರುತ್ತದೆ.

ಓದಲಾದ (2) ರ ಸರ್ಕಾರದ ಆದೇಶದಲ್ಲಿ 18 ಕಾರಾವಿ ಚಿಕಿತ್ಸಾಲಯಗಳಿಗೆ ತಲಾ ಒಂದು (1) ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು ಹಾಗೂ 10 ಕಾರಾವಿ ಚಿಕಿತ್ಸಾಲಯಗಳಿಗೆ ವಿಮಾದಾರರ ಸಂಖ್ಯೆಗೆ ಅನುಗುಣವಾಗಿ 2 ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು ಹೊಸದಾಗಿ ಸೃಜಿಸಿ ನಿಯಮಾನುಸಾರ ಭರ್ತಿ ಮಾಡಲು ಮಂಜೂರಾತಿಯನ್ನು ನೀಡಲಾಗಿರುತ್ತದೆ. ಆದ್ದರಿಂದ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಆದೇಶ ಸಂಖ್ಯೆ ಅಭಿವೃದ್ಧಿ/14/12–13 ದಿ: 06/09/2012**

ಓದಲಾದ (1)ರ ಸರ್ಕಾರದ ಆದೇಶದಲ್ಲಿ 38 ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು ಸೃಜಿಸಿರುವುದರಿಂದ ಈ ಕೆಳಕಂಡ ಕಾರಾವಿ ಚಿಕಿತ್ಸಾಲಯಗಳಿಗೆ ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು ಮಂಜೂರಾತಿ ಮಾಡಲಾಗಿದೆ.

| ಕ್ರಸಂ. | ಕಾರಾವಿ ಚಿಕಿತ್ಸಾಲಯದ ಹೆಸರು | ಹೊಸದಾಗಿ ಮಂಜೂರಾದ ಪ್ರಥಮ ದರ್ಜೆ ಸಹಾಯಕರ ಹುದ್ದೆಗಳು |
|---|---|---|
| 1. | ಚೆನ್ನಪಟ್ಟಣ, ಬೆಂಗಳೂರು ಗ್ರಾಮಾಂತರ | 1 |
| 2. | ಹರಿಹರ, ದಾವಣಗೆರೆ ಜಿಲ್ಲೆ | 1 |
| 3. | ರಾಮನಗರ, ಬೆಂಗಳೂರು ಗ್ರಾಮಾಂತರ | 1 |
| 4. | ಹಾಸನ | 1 |
| 5. | ಮಂಡ್ಯ | 1 |
| 6. | ಮೈಸೂರು(ದಕ್ಷಿಣ), ಮೈಸೂರು | 1 |
| 7. | ಎನ್.ಆರ್.ಮೊಹಲ್ಲ, ಮೈಸೂರು | 1 |

| | | |
|---|---|---|
| 8. | ವಿ.ವಿ.ಪುರಂ, ಮೈಸೂರು | 1 |
| 9. | ಕಾರ್ಕಳ, ಉಡುಪಿ ಜಿಲ್ಲೆ | 1 |
| 10. | ಕುಂದಾಪುರ, ಉಡುಪಿ ಜಿಲ್ಲೆ | 1 |
| 11. | ಕೊಣ್ಣೂರು, ಬೆಳಗಾಂ ಜಿಲ್ಲೆ | 1 |
| 12. | ಕೆಎಸ್ಆರ್‌ಟಿಸಿ, ಬೆಳಗಾಂ | 1 |
| 13. | ಬೇಲೂರು, ಧಾರವಾಡ ಜಿಲ್ಲೆ | 1 |
| 14. | ತಾರಿಹಾಳ, ಹುಬ್ಬಳ್ಳಿ | 1 |
| 15. | ಗದಗ್ | 1 |
| 16. | ಬಳ್ಳಾರಿ | 1 |
| 17. | ಮಳಖೇಡ್, ಗುಲ್ಬರ್ಗ ಜಿಲ್ಲೆ | 1 |
| 18. | ಸೇಡಂ, ಗುಲ್ಬರ್ಗ ಜಿಲ್ಲೆ | 1 |
| 19. | ಅತ್ತಿಬೆಲೆ, ಬೆಂಗಳೂರು | 2 |
| 20. | ಹನುಮಂತನಗರ, ಬೆಂಗಳೂರು | 2 |
| 21. | ಜಾಲಹಳ್ಳಿ, ಬೆಂಗಳೂರು | 2 |
| 22. | ಜಿಗಣಿ, ಬೆಂಗಳೂರು | 2 |
| 23. | ಕೆಂಗೇರಿ, ಬೆಂಗಳೂರು | 2 |
| 24. | ನೆಲಮಂಗಲ, ಬೆಂಗಳೂರು ಗ್ರಾಮಾಂತರ | 2 |
| 25. | ಬೆಳವಾಡಿ, ಮೈಸೂರು | 2 |
| 26. | ಮಣಿಪಾಲ್, ಉಡುಪಿ ಜಿಲ್ಲೆ | 2 |
| 27. | ಪೀರನವಾಡಿ, ಬೆಳಗಾಂ ಜಿಲ್ಲೆ | 2 |
| 28. | ಯಮುನಾಪುರ, ಬೆಳಗಾಂ ಜಿಲ್ಲೆ | 2 |
| | **ಒಟ್ಟು ಹುದ್ದೆಗಳು** | **38** |

ಹೊಸದಾಗಿ ಸೃಜಿಸಲಾದ ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು ಚಿಕಿತ್ಸಾಲಯದ Scale Register ನಲ್ಲಿ ಸೇರ್ಪಡೆ ಮಾಡಿಕೊಳ್ಳುವಂತೆ ಆದೇಶಿಸುತ್ತಾ ಈ ಹುದ್ದೆಗಳಿಗೂ 2013–14ನೇ ಸಾಲಿನ ಆಯವ್ಯಯದಲ್ಲಿ ಸೇರ್ಪಡೆ ಮಾಡಿ **ಯೋಜನೆಯಡಿಯಲ್ಲಿ (PLAN)** ಆಯವ್ಯಯದ ಅಂದಾಜು ಪಟ್ಟಿಯಲ್ಲಿ ಸೇರಿಸತಕ್ಕದ್ದು.

ನಿರ್ದೇಶಕರು,
ಕಾರಾವಿ. ಯೋಜನೆ ವೈದ್ಯಕೀಯ ಸೇವೆಗಳು.
6/09/12

ಗೆ,
ಆಡಳಿತ ವಿಮಾವೈದ್ಯಾಧಿಕಾರಿಗಳು
ಕಾರಾವಿ ಚಿಕಿತ್ಸಾಲಯ ________

ಪ್ರತಿಯನ್ನು

1. ಈ ನಿರ್ದೇಶನಾಲಯದ ಎಲ್ಲಾ ಅಧಿಕಾರಿಗಳಿಗೆ, ಅಂಕಿ ಅಂಶ/ಇಲೆಪ/SFWC/HRMS ಸಂಕಲನಗಳಿಗೆ ಹಾಗೂ ಎಲ್ಲಾ ಕಛೇರಿ ಅಧೀಕ್ಷಕರವರ ಮಾಹಿತಿಗಾಗಿ.
2. ಈ ನಿರ್ದೇಶನಾಲಯದ ಸಿಬ್ಬಂದಿ ಸಂಕಲನಕ್ಕೆ ಮಾಹಿತಿಗಾಗಿ ಮತ್ತು ಹೊಸದಾಗಿ ಸೃಜಿಸಲಾದ 38 ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು ನಮೂದಿಸಿ ಪ್ರಥಮ ದರ್ಜೆ ಸಹಾಯಕರ ಹುದ್ದೆಯ ಮಂಜೂರಾತಿ ಪಟ್ಟಿಗೆ ಸೇರಿಸತಕ್ಕದ್ದು.
3. ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು ಇವರ ಮಾಹಿತಿಗಾಗಿ.
4. ಖಜಾನಾಧಿಕಾರಿಗಳು, ಜಿಲ್ಲಾ ಖಜಾನೆ, .................................. ಇವರ ಮಾಹಿತಿಗಾಗಿ.
5. ಮಹಾಲೇಖಪಾಲರು, ಕರ್ನಾಟಕ ವಲಯ, ಬೆಂಗಳೂರು.
6. ಕಛೇರಿ ಪ್ರತಿ.

ನಿರ್ದೇಶಕರು
ಕಾರ್ಮಿಕರ ರಾಜ್ಯ ವಿಮಾ ಯೋಜನೆ
(ವೈದ್ಯಕೀಯ) ಸೇವೆಗಳು
1147 07 NOV 2012
ಬೆಂಗಳೂರು-560 010

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಹತ್ತುಸಾವಿರ ಹಾಗೂ ಅದಕ್ಕೂ ಹೆಚ್ಚಿನ ವಿಮಾ ದಾಖಲಾತಿಗಳನ್ನು ಅನುಬಂಧಿಸಲಾದ ಚಿಕಿತ್ಸಾಲಯಗಳಿಗೆ ಕಛೇರಿ ಅಧೀಕ್ಷಕರ ಹುದ್ದೆ ಸೃಜಿಸುವ ಬಗ್ಗೆ.

ಓದಲಾಗಿದೆ:- ನಿರ್ದೇಶಕರು ಕಾ.ರಾ.ವಿ. ಯೋಜನೆ ವೈದ್ಯಕೀಯ ಸೇವೆಗಳು ರಾಜಾಜಿನಗರ, ಬೆಂಗಳೂರು ಇವರ ಪತ್ರಗಳ ಸಂಖ್ಯೆ: ಅಭಿವೃದ್ಧಿ/18/12-13 ದಿನಾಂಕ : 31-05-2012, 25-06-2012 ಮತ್ತು 04-09-2012.

ಪ್ರಸ್ತಾವನೆ:-

ನಿರ್ದೇಶಕರು, ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ರಾಜಾಜಿನಗರ, ಬೆಂಗಳೂರು ಇವರ ಮೇಲೆ ಓದಲಾದ ಪತ್ರಗಳಲ್ಲಿ ಇತ್ತೀಚೆಗೆ ವಿದ್ಯಾ ಸಂಸ್ಥೆಗಳು, ಖಾಸಗಿ ಆಸ್ಪತ್ರೆ ಮತ್ತು ನರ್ಸಿಂಗ್ ಹೋಂಗಳ ನೌಕರರು ಕಾ.ರಾ.ವಿ. ಯೋಜನೆ ವ್ಯಾಪ್ತಿಗೆ ಒಳಪಡುತ್ತಿರುವುದರಿಂದ ವಿಮಾದಾರರ ಸಂಖ್ಯೆ ಗಣನೀಯವಾಗಿ ಹೆಚ್ಚಾಗುತ್ತಿದೆಯೆಂದೂ ರಾಜ್ಯ ಸರ್ಕಾರವು "ಸಕಾಲ" ಆದೇಶವನ್ನು ಜಾರಿಗೊಳಿಸಿರುವುದರಿಂದ ವಿಮಾದಾರರ ವೈದ್ಯಕೀಯ ವೆಚ್ಚ ಮರುಪಾವತಿ ಕಾರ್ಯವು "ಸಕಾಲ" ವ್ಯಾಪ್ತಿಗೆ ಒಳಪಟ್ಟಿರುತ್ತದೆಯೆಂದೂ ತಿಳಿಸಿರುತ್ತಾರೆ. ಇದರಿಂದ ಕಾ.ರಾ.ವಿ. ಚಿಕಿತ್ಸಾಲಯಗಳಲ್ಲಿ ಕೆಲಸದ ಒತ್ತಡ ಅಧಿಕವಾಗಿದ್ದು, ಕಾ.ರಾ.ವಿ. ನಿಗಮದ ಮಾರ್ಗಸೂಚಿಯ ಅನುಸಾರ ಹತ್ತು ಸಾವಿರ ಹಾಗೂ ಅದಕ್ಕೂ ಹೆಚ್ಚಿನ ವಿಮಾ ದಾಖಲಾತಿಗಳನ್ನು ಅನುಬಂಧಿಸಲಾದ 37 ಚಿಕಿತ್ಸಾಲಯಗಳಿಗೆ ಆಡಳಿತಾತ್ಮಕ ಹಿತದೃಷ್ಟಿಯಿಂದ ಒಂದು ಕಛೇರಿ ಅಧೀಕ್ಷಕರ (Office Superintendent) ಹುದ್ದೆಯನ್ನು ಸೃಜಿಸಲು ಅವಕಾಶವಿರುತ್ತದೆ ಎಂದು ತಿಳಿಸಿರುತ್ತಾರೆ.

ರಾಜ್ಯ ಸರ್ಕಾರವು ಕಾ.ರಾ.ವಿ ನಿಗಮದೊಂದಿಗೆ ಮಾಡಿಕೊಂಡ ಒಪ್ಪಂದದ ಪ್ರಕಾರ ಇಲಾಖೆಯು ಮಾಡುವ ಒಟ್ಟು ವೆಚ್ಚದಲ್ಲಿ ಕಾ.ರಾ.ವಿ ನಿಗಮವು ಶೇ. 87.50 ರಷ್ಟನ್ನು ಪುನರ್‌ಭರಣ ಮಾಡುತ್ತಿದೆ. ರಾಜ್ಯ ಸರ್ಕಾರದ ಪಾಲು ಕೇವಲ ಶೇ. 12.50ರಷ್ಟು ಮಾತ್ರ ಆಗಿರುತ್ತದೆ. 37 ಕಛೇರಿ ಅಧೀಕ್ಷಕರ ಹುದ್ದೆಗಳನ್ನು ಸೃಜಿಸಲು ವಾರ್ಷಿಕ ರೂ. 30.25 ಲಕ್ಷ ವೆಚ್ಚವಾಗುತ್ತದೆ. ಇದರಲ್ಲಿ ಕಾ.ರಾ.ವಿ. ನಿಗಮದ ಪಾಲು ರೂ. 26.46 ಲಕ್ಷ, ರಾಜ್ಯ ಸರ್ಕಾರದ ಪಾಲು ರೂ. 3.79 ಲಕ್ಷವಾಗಿರುತ್ತದೆ.

ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಯ ಪ್ರಕಾರ ಕಛೇರಿ ಅಧೀಕ್ಷಕರ ಹುದ್ದೆಯನ್ನು ಪೂರ್ಣ ಪ್ರಮಾಣದಲ್ಲಿ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪ್ರಥಮ ದರ್ಜೆ ಸಹಾಯಕರಿಗೆ/ ಶೀಘ್ರ ಲಿಪಿಗಾರರಿಗೆ ಪದೋನ್ನತಿಯನ್ನು ನೀಡುವುದರ ಮುಖಾಂತರವೇ ಭರ್ತಿ ಮಾಡುವುದರಿಂದ ಒಂದು ವೇತನ ಬಡ್ತಿ ಮಾತ್ರ ಅರ್ಹ ಸಿಬ್ಬಂದಿಗಳಿಗೆ ದೊರಕುತ್ತದೆ. ಆದ್ದರಿಂದ ಸರ್ಕಾರಕ್ಕೆ ಹೆಚ್ಚಿನ ಆರ್ಥಿಕ ಹೊರೆ ಉಂಟಾಗುವುದಿಲ್ಲ. ಆದಕಾರಣ 37 ಕಾ.ರಾ.ವಿ ಚಿಕಿತ್ಸಾಲಯಗಳಿಗೆ 37 ಕಛೇರಿ ಅಧೀಕ್ಷಕರ ಹುದ್ದೆಗಳನ್ನು ಸೃಜಿಸಲು ಮಂಜೂರಾತಿ ಕೋರಿರುತ್ತಾರೆ.

XXX

ಪ್ರಸ್ತಾವನೆಯನ್ನು ಕೂಲಂಕೂಷವಾಗಿ **ಪರಿಶೀಲಿಸಿ ಈ** ಕೆಳಕಂಡಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: **ಕಾಇ 243 ಎಲ್ಎಸ್ಐ 2012 ಬೆಂಗಳೂರು, ದಿನಾಂಕ: 06-11-2012**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ನಿರ್ದೇಶಕರು ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ಇಲಾಖೆಯ ನಿರ್ದೇಶಕರ ಉಲ್ಲೇಖದಲ್ಲಿನ ದಿನಾಂಕ: 31-05-2012ರ ಪತ್ರದಲ್ಲಿ ನಮೂದಿಸಿರುವ **ಈ ಕೆಳಕಂಡ 37 ಕಾ.ರಾ.ವಿ.** ಚಿಕಿತ್ಸಾಲಯಗಳಿಗೆ ತಲಾ ಒಂದರಂತೆ ಒಟ್ಟು 37 ಕಛೇರಿ ಅಧೀಕ್ಷಕರ ಹುದ್ದೆಗಳನ್ನು ಸೃಜಿಸಲು ಮಂಜೂರಾತಿ ನೀಡಿದೆ.

| ಕ್ರಮ ಸಂಖ್ಯೆ | ಕಾ.ರಾ.ವಿ. ಚಿಕಿತ್ಸಾಲಯಗಳ ಹೆಸರು | ಸೃಜಿಸಲಾದ ಕಛೇರಿ ಅಧೀಕ್ಷಕರ ಹುದ್ದೆಗಳ ಸಂಖ್ಯೆ |
|---|---|---|
| 1 | ಬನಶಂಕರಿ | 1 |
| 2 | ಬಸವನಗುಡಿ | 1 |
| 3 | ಕಂಗೇರಿ | 1 |
| 4 | ಕೋಣನಕುಂಟೆ | 1 |
| 5 | ಮಾಗಡಿರಸ್ತೆ | 1 |
| 6 | ಮೈಸೂರು ರಸ್ತೆ | 1 |
| 7 | ರಾಜಾಜಿನಗರ-1 | 1 |
| 8 | ಶ್ರೀರಾಮಪುರಂ | 1 |
| 9 | ವಿಲ್ಸನ್‌ಗಾರ್ಡನ್ | 1 |
| 10 | ಯಲಹಂಕ | 1 |
| 11 | ಯಶವಂತಪುರ | 1 |
| 12 | ಹಲಸೂರು | 1 |
| 13 | ವಿವೇಕನಗರ | 1 |
| 14 | ದೊಡ್ಡಬಳ್ಳಾಪುರ | 1 |
| 15 | ವಿಲ್ಸನ್ ಗಾರ್ಡನ್ | 1 |
| 16 | ಸಿಂಗಸಂದ್ರ | 1 |
| 17 | ಕೆ.ಆರ್.ಪುರಂ-1 | 1 |
| 18 | ಮಾರತ್ ಹಳ್ಳಿ | 1 |
| 19 | ಕೆ.ಆರ್.ಪುರಂ-2 | 1 |
| 20 | ಫ್ರೇಜರ್ ಟೌನ್ | 1 |
| 21 | ನೆಲಮಂಗಲ | 1 |
| 22 | ತುಮಕೂರು | 1 |
| 23 | ಅತ್ತಿಬೆಲೆ | 1 |
| 24 | ದ್ಯಾವಸಂದ್ರ | 1 |
| 25 | ಜಯನಗರ | 1 |
| 26 | ರಸೆಲ್ ಮಾರ್ಕೆಟ್-2 | 1 |
| 27 | ಬೆಳವಡಿ | 1 |

| | | |
|---|---|---|
| 28 | ಮೈಸೂರು (ಕೇಂದ್ರ) | 1 |
| 29 | ಮಣಿಪಾಲ್ | 1 |
| 30 | ಪಣಂಬೂರ್ | 1 |
| 31 | ಉಡುಪಿ | 1 |
| 32 | ಬನಹಟ್ಟಿ | 1 |
| 33 | ಜಗಣಿ | 1 |
| 34 | ಧಾರವಾಡ | 1 |
| 35 | ಹುಬ್ಬಳ್ಳಿ | 1 |
| 36 | ಭದ್ರಾವತಿ | 1 |
| 37 | ಶಿವಮೊಗ್ಗ | 1 |
| | ಒಟ್ಟು ಹುದ್ದೆಗಳ ಸಂಖ್ಯೆ | 37 |

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 379 ವೆಚ್ಚ -9/2012 ದಿ: 30-10-2012ರ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ,
ಮತ್ತು ಅವರ ಹೆಸರಿನಲ್ಲಿ,

(ಗೋವಿಂದ ಸ್ವಾಮಿ) 6/11
ಪೀಠಾಧಿಕಾರಿ-5
ಕಾರ್ಮಿಕ ಇಲಾಖೆ.
ಕಾ.ರಾ.ವಿ.ಯೋ (ವೈ) ಸೇವೆಗಳು.
ದೂ.ಸಂಖ್ಯೆ: 2203 5022

ಗೆ,

1. ಮಹಾಲೇಖಾಪಾಲಕರು, ಕರ್ನಾಟಕ ರಾಜ್ಯ , ಪಾರ್ಕ್ ಹೌಸ್ ರಸ್ತೆ, ಬೆಂಗಳೂರು-560 001
2. ನಿರ್ದೇಶಕರು ಕಾ.ರಾ.ವಿ. ಯೋಜನೆ ವೈದ್ಯಕೀಯ ಸೇವೆಗಳು ರಾಜಾಜಿನಗರ, ಬೆಂಗಳೂರು-560 010
3. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ 3 ಮತ್ತು 9) ವಿಧಾನ ಸೌಧ, ಬೆಂಗಳೂರು.
4. ಆಡಳಿತ ವಿಮಾ ವೈದ್ಯಾಧಿಕಾರಿಗಳು, ಸಂಬಂಧಪಟ್ಟ 37 ಕಾ.ರಾ.ವಿ. ಚಿಕಿತ್ಸಾಲಯಗಳು ಹಾಗೂ ಎಲ್ಲಾ ವೈದ್ಯಕೀಯ ಅಧೀಕ್ಷಕರುಗಳು (ನಿರ್ದೇಶಕರ ಮೂಲಕ)
5. ಸಂಬಂಧಪಟ್ಟ ಖಜಾನೆ ಅಧಿಕಾರಿಗಳಿಗೆ ( ನಿರ್ದೇಶಕರ ಮುಖಾಂತರ)
6. ಸರ್ಕಾರದ ಕಾರ್ಯದರ್ಶಿ/ಜಂಟಿ ಕಾರ್ಯದರ್ಶಿಯವರ ಆಪ್ತ ಶಾಖೆ, ಕಾರ್ಮಿಕ ಇಲಾಖೆ.
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ನಿರ್ದೇಶನಾಲಯ
ಕಾರ್ಮಿಕರ ರಾಜ್ಯ ವಿಮಾ ಯೋಜನೆ
(ವೈದ್ಯಕೀಯ) ಸೇವೆಗಳು
03 NOV 2014
2267
ಬೆಂಗಳೂರು-560 010

**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ:- ಶಿವಮೊಗ್ಗ ನಗರದಲ್ಲಿ ಹೊಸದಾಗಿ 2 ಕಾರ್ಮಿಕರ ರಾಜ್ಯ ವಿಮಾ ಚಿಕಿತ್ಸಾಲಯವನ್ನು ಪ್ರಾರಂಭಿಸುವ ಕುರಿತು.

ಓದಲಾಗಿದೆ:- (1) ನಿರ್ದೇಶಕರು, ಕಾ.ರಾ.ವಿ. ಯೋಜನೆ ವೈದ್ಯಕೀಯ ಸೇವೆಗಳು, ಇವರ ಪತ್ರ ಸಂಖ್ಯೆ.ಅಭಿವೃದ್ಧಿ/209/2013-14, ದಿನಾಂಕ:15-02-2014, 07-05-2014 ಮತ್ತು 13-08-2014

ಪ್ರಸ್ತಾವನೆ:

**11 ಹೊಸ ಕಾರಾವಿ ಚಿಕಿತ್ಸಾಲಯಗಳಿಗೆ ಅವಶ್ಯಕವಿರುವ ಹುದ್ದೆಗಳ ವಿವರ ಈ ಕೆಳಕಂಡತಿವೆ:**

| ಕ್ರ. ಸಂ. | ಹುದ್ದೆಯ ಹೆಸರು | ವೇತನ ಶ್ರೇಣಿ | ಸೃಜಿಸಬೇಕಾಗಿರುವ ಹುದ್ದೆಗಳ ಸಂಖ್ಯೆ |
|---|---|---|---|
| 1 | ವಿಮಾ ವೈದ್ಯಾಧಿಕಾರಿ | 52650-97100 | 28 |
| 2 | ಕಛೇರಿ ಅಧೀಕ್ಷಕರು | 37900-70850 | 02 |
| 3 | ಪ್ರಥಮ ದರ್ಜೆ ಸಹಾಯಕರು | 27650-52650 | 21 |
| 3 | ಶುಶ್ರೂಷಕರು | 33450-62600 | 25 |
| 5 | ಫಾರ್ಮಸಿಸ್ಟ್ | 27650-52650 | 28 |
| 6 | ಕಿರಿಯ ಪ್ರಯೋಗಶಾಲಾ ತಂತ್ರಜ್ಞರು | 27650-52650 | 10 |
| 7 | ಡ್ರೆಸರ್ | 17000-28950 | 14 |
| 8 | ರೆಕಾರ್ಡ್ ಸಾರ್ಟರ್ | 21400-42000 | 14 |
| 9 | ಗ್ರೂಪ್ ಡಿ | 17000-28950 | 37 |
| | **ಒಟ್ಟು** | | **179** |

ರಾಜ್ಯದಲ್ಲಿ 11 ಹೊಸ ಕಾರಾವಿ ಚಿಕಿತ್ಸಾಲಯಗಳಿಗೆ ಒಟ್ಟಾರೆ 179 ಹುದ್ದೆಗಳನ್ನು ಈ ಕೆಳಕಂಡಂತಿದೆ ಸೃಜಿಸಬೇಕಾಗಿರುತ್ತದೆ:-

| ಕ್ರ ಸಂ | ಚಿಕಿತ್ಸಾಲಯದ ಹೆಸರು | ವಿ. ವೈ. | ಕ. ಅ. | ಪ್ರ ದಸ | ಶುಶ್ರೂಷಕರು | ಫಾರ್ಮಸಿಸ್ಟ್ | ಕಿ. ಪ್ರ. ಶಾ. ತಂ. | ಡ್ರೆಸರ್ | ರೆಕಾರ್ಡ್ ಸಾರ್ಟರ್ | ಗ್ರೂಪ್ ಡಿ | ಒಟ್ಟು |
|---|---|---|---|---|---|---|---|---|---|---|---|
| 1 | ವಸಂತನರಸಾಪುರ | 01 | - | 01 | 01 | 01 | - | 01 | 01 | 01 | **07** |
| 2 | ಗೌರಿಬಿದನೂರು | 02 | - | 02 | 02 | 02 | 01 | 01 | 01 | 03 | **14** |
| 3 | ಬಂಟ್ವಾಳ | 02 | - | 02 | 02 | 02 | 01 | 01 | 01 | 03 | **14** |
| 4 | ಚಿಂಚೋಳಿ | 02 | - | 02 | 02 | 02 | 01 | 01 | 01 | 03 | **14** |
| 5 | ಅರಸೀಕೆರೆ | 02 | - | 02 | 02 | 02 | 01 | 01 | 01 | 03 | **14** |
| 6 | ರಾಣಿಬೆನ್ನೂರು | 02 | - | 02 | 02 | 02 | 01 | 01 | 01 | 03 | **14** |
| 7 | ಕೋಲಾರ | 02 | - | 02 | 02 | 02 | 01 | 01 | 01 | 03 | **14** |
| 8 | ಕನಕಪುರ | 02 | - | 02 | 02 | 02 | 01 | 01 | 01 | 03 | **14** |
| 9 | ಮುದೋಳ | 03 | - | 02 | 02 | 03 | 01 | 02 | 02 | 05 | **20** |
| 10 | ನರಸಾಪುರ | 05 | 01 | 02 | 04 | 05 | 01 | 02 | 02 | 05 | **27** |
| 11 | ಸಂಡೂರು | 05 | 01 | 02 | 04 | 05 | 01 | 02 | 02 | 05 | **27** |
| | **ಒಟ್ಟು** | **28** | **02** | **21** | **25** | **28** | **10** | **14** | **14** | **37** | **179** |

ಈ ಮೇಲಿನ ಅಂಶಗಳ ಹಿನ್ನಲೆಯಲ್ಲಿ ರಾಜ್ಯದಲ್ಲಿ 11 ಹೊಸ ಕಾರಾವಿ ಚಿಕಿತ್ಸಾಲಯಗಳನ್ನು ಪ್ರಾರಂಭಿಸಲು ಹಾಗೂ ಅವಶ್ಯಕವಿರುವ ಒಟ್ಟಾರೆ 179 ವಿವಿಧ ವೃಂದದ ಹುದ್ದೆಗಳನ್ನು ಸೃಜಿಸಲು ಸರ್ಕಾರದ ಮಂಜೂರಾತಿಗಾಗಿ ನಿರ್ದೇಶಕರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ (3)ರ ಆರ್ಥಿಕ ಇಲಾಖೆಯ ಟಿಪ್ಪಣಿಯಲ್ಲಿ ರಾಜ್ಯದಲ್ಲಿ 11 ಹೊಸ ಕಾರಾವಿ ಚಿಕಿತ್ಸಾಲಯಗಳನ್ನು ಪ್ರಾರಂಭಿಸಲು ಮತ್ತು ಸದರಿ ಆಸ್ಪತ್ರೆಗಳಿಗೆ ಷರತ್ತಿಗೊಳಪಟ್ಟು ಅವಶ್ಯಕವಿರುವ ಒಟ್ಟು 104 ವಿವಿಧ ವೃಂದದ ಹುದ್ದೆಗಳನ್ನು ಸೃಜಿಸಲು ಮಂಜೂರಾತಿ ನೀಡಲಾಗಿದೆ.

ಪ್ರಸ್ತಾವನೆಯನ್ನು ಕುಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ:ಕಾಇ 88 ಎಲ್ಎಸ್ಐ 2021 ದಿನಾಂಕ:25-10-2022</u>**

ಮೇಲ್ಕಂಡಂತೆ ನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಕಾರಾವಿ ಯೋಜನೆ ವೈದ್ಯಕೀಯ ಸೇವೆಗಳ ಇಲಾಖೆಯಡಿಯಲ್ಲಿ ರಾಜ್ಯದಲ್ಲಿ 11 ಹೊಸ ಕಾರಾವಿ ಚಿಕಿತ್ಸಾಲಯಗಳನ್ನು ಪ್ರಾರಂಭಿಸಲು ಮತ್ತು ಸದರಿ ಆಸ್ಪತ್ರೆಗಳಿಗೆ ಈ ಕೆಳಕಂಡ ಷರತ್ತಿಗೊಳಪಟ್ಟು ಅವಶ್ಯಕವಿರುವ ಒಟ್ಟು 104 ವಿವಿಧ ವೃಂದದ ಹುದ್ದೆಗಳನ್ನು ಈ ಕೆಳಗಿನಂತೆ ಸೃಜಿಸಲು ಮಂಜೂರಾತಿ ನೀಡಲಾಗಿದೆ.

| ಕ್ರ.ಸಂ | ಹೊಸದಾಗಿ ಕಾ.ರಾ.ವಿ ಚಿಕಿತ್ಸಾಲಯಗಳನ್ನು ಪ್ರಾರಂಭಿಸಲು ನಿಗಧಿಪಡಿಸಿರುವ ಸ್ಥಳ/ಪ್ರದೇಶ | ಜಿಲ್ಲೆ | ವೈದ್ಯಾಧಿಕಾರಿಗಳ ಸಂಖ್ಯೆ | ಆರ್ಥಿಕ ಇಲಾಖೆಯು ಸೃಜಿಸಲು ಸಹಮತಿ ನೀಡಿರುವ ಹುದ್ದೆಗಳ ವಿವರ | ಹುದ್ದೆಗಳ ಸಂಖ್ಯೆ | ನೇಮಕಾತಿ |
|---|---|---|---|---|---|---|
| 1 | ವಸಂತ ನರಸಾಪುರ | ತುಮಕೂರು | 01 | Insurance Medical Officer | 01 | As per C&R |
| | | | | SDA cum Record Sorter | 01 | |
| | | | | Staff Nurse | 01 | Outsourcing |
| | | | | Pharmacist | 01 | |
| | | | | Grout-D | 01 | |
| | | | | **Total** | **05** | |
| 2 | ಗೌರಿಬಿದನೂರು | ಚಿಕ್ಕಬಳ್ಳಾಪುರ | 02 | Insurance Medical Officer | 2x7=14 | As per C&R |
| 3 | ಬಂಟ್ವಾಳ | ದಕ್ಷಿಣ ಕನ್ನಡ | | SDA cum Record Sorter | 1x7=7 | |
| 4 | ಚಿಂಚೋಳಿ | ಕಲಬುರಗಿ | | Staff Nurse | 2x7=14 | Outsourcing |
| 5 | ಅರಸೀಕೆರೆ | ಹಾಸನ | | Pharmacist | 1x7=7 | |
| 6 | ರಾಣೆಬೆನ್ನೂರು | ಹಾವೇರಿ | | Grout-D | 2x7=14 | |
| 7 | ಕೋಲಾರ | ಕೋಲಾರ | | **Total** | **8x7=56** | |
| 8 | ಕನಕಪುರ | ರಾಮನಗರ | | | | |
| 9 | ಮುಧೋಳ | ಬಾಗಲಕೋಟೆ | 03 | Insurance Medical Officer | 03 | As per C&R |
| | | | | SDA cum Record Sorter | 01 | |
| | | | | Staff Nurse | 02 | Outsourcing |
| | | | | Pharmacist | 01 | |
| | | | | Grout-D | 02 | |
| | | | | **Total** | **09** | |
| 10 | ನರಸಾಪುರ | ಕೋಲಾರ | 05 | Insurance Medical Officer | 5x2=10 | As per C&R |
| | | | | Office Superintendent | 1x2=2 | |
| | | | | SDA cum Record Sorter | 1x2=2 | |
| | | | | Staff Nurse | 4x2=8 | Outsourcing |
| | | | | Pharmacist | 2x2=4 | |
| | | | | Junior Lab Technician | 1x2=2 | |
| 11 | ಸಂಡೂರು | ಬಳ್ಳಾರಿ | | Grout-D | 3x2=6 | |
| | | | | **Total** | **17x2=34** | |

.....4

**ಷರತ್ತುಗಳು:**

1) Insurance Medical Officer, Office Superintendent, FDA/SDA cum Record Sorter ಹುದ್ದೆಗಳನ್ನು ಮಾತ್ರ ನೇರ ನೇಮಕಾತಿಯಿಂದ ಭರ್ತಿ ಮಾಡುವುದು. ಉಳಿದ ವೃಂದದ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯುವುದು.

2) ವೃಂದ ಮತ್ತು ನೇಮಕಾತಿ ನಿಯಮಗಳನ್ವಯ/ ನೇರನೇಮಕಾತಿಯಿಂದ ಭರ್ತಿ ಮಾಡುವ ಹುದ್ದೆಗಳ NPS pension contribution ಅನ್ನು ರಾಜ್ಯ ಸರ್ಕಾರದಿಂದ ಒದಗಿಸಲಾಗುವುದಿಲ್ಲ. ಸದರಿ ವೆಚ್ಚವನ್ನು ESI ಸಂಸ್ಥೆಯೆ ಭರಿಸುವುದು.

3) ಆಡಳಿತ ಇಲಾಖೆಯು ತಿಳಿಸಿರುವಂತೆ ಮೊದಲ 3 ವರ್ಷಗಳ ಸಂಪೂರ್ಣ ವೆಚ್ಚವನ್ನು ಕೇಂದ್ರ ಸರ್ಕಾರ ಭರಿಸುವುದು. ಅನಂತರ ರಾಜ್ಯ ಸರ್ಕಾರದ ಪಾಲಿನ 12.5% ಅನ್ನು ಮಾತ್ರ ರಾಜ್ಯ ಸರ್ಕಾರವು ಒದಗಿಸುತ್ತದೆ. ಉಳಿದ 87.5% ವೆಚ್ಚವನ್ನು ಕೇಂದ್ರ ಸರ್ಕಾರದಿಂದ ಪಡೆಯುವುದು.

ಸದರಿ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: FD/296/ವೆಚ್ಚ9/2021(e) ಮತ್ತು ಆಇ 324 ಎಫ್ ಆರ್.ಸಿ 2021(e) ದಿನಾಂಕ:18-08-2022 ರನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

Vijaya.N 25/10/2022
(ವಿಜಯ.ಎನ್)
ಪೀಠಾಧಿಕಾರಿ-05,
ಕಾರಾವಿಯೋವ್ಯೆ ಸೇವೆಗಳು,
ಕಾರ್ಮಿಕ ಇಲಾಖೆ.

**ಇವರಿಗೆ:**

1. ಮಹಾಲೇಖಪಾಲರು, ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನೆ, ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ಕಾರಾವಿ ಯೋಜನೆ (ವೈ) ಸೇವೆಗಳು, ರಾಜಾಜಿನಗರ, ಬೆಂಗಳೂರು-560010.
3. ಕರ್ನಾಟಕ ಲೋಕಸೇವಾ ಆಯೋಗ ಉದ್ಯೋಗ ಸೌಧ, ಅಂಬೇಡ್ಕರ್ ವೀದಿ, ಬೆಂಗಳೂರು-560001
4. ಹೆಚ್ಚುವರಿ ಪ್ರತಿ : ಶಾಖಾ ರಕ್ಷಾ ಕಡತ.

**ಪ್ರತಿ ಮಾಹಿತಿಗಾಗಿ:**

1. ಮಾನ್ಯ ಕಾರ್ಮಿಕ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಾರ್ಮಿಕ ಇಲಾಖೆ.

ಕರ್ನಾಟಕ ಸರ್ಕಾರ
**GOVERNMENT OF KARNATAKA**
**ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಯ ನಿರ್ದೇಶನಾಲಯ**
**DIRECTORATE OF E. S. I. S. MEDICAL SERVICES**
**ಎಸ್. ನಿಜಲಿಂಗಪ್ಪ ರಸ್ತೆ, 2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು - 560 010**
**S.Nijalingappa Road, II Block, RAJAJINAGAR, BANGALORE ಗ 560 010.**

E.S.I.S. M. SERVICES KARNATAKA

https://esisms.karnataka.gov.in/ Tel / Fax:080 - 2332 4216

**ಸಂಖ್ಯೆ:ESIS/ಅಭಿವೃದ್ಧಿ/39/20-21** **ದಿನಾಂಕ: 19-12-2022**

## ಹಿಂಬರಹ

ವಿಷಯ: ಕೊಪ್ಪಳದಲ್ಲಿ 30 ಹಾಸಿಗೆ ಸಾಮರ್ಥ್ಯದ ಕಾರಾವಿ ಆಸ್ಪತ್ರೆ ಪ್ರಾರಂಭಿಸಲು ಅವಶ್ಯಕವಿರುವ ಹುದ್ದೆಗಳನ್ನು ಸೃಜಿಸುವ ಬಗ್ಗೆ ಹಾಗೂ ಆಸ್ಪತ್ರೆಯ ಕಟ್ಟಡ ಕಾಮಗಾರಿ ಮುಗಿರುವವರೆಗೆ ಆಸ್ಪತ್ರೆ ಪ್ರಾರಂಭಿಸುವ ಕುರಿತು.

ಉಲ್ಲೇಖ:- 1. ಸರ್ಕಾರದ ಆದೇಶ ಸಂಖ್ಯೆ: ಕಾಇ 104 ಎಲ್ಎಸ್ಐ 2021, ದಿನಾಂಕ: 17-12-2022.
2. ಸರ್ಕಾರದ ಪತ್ರ ಸಂಖ್ಯೆ: LD-LSI/104/2021 P-1, ದಿನಾಂಕ: 17-12-2022

*****

ಕೊಪ್ಪಳದಲ್ಲಿ 30 ಹಾಸಿಗೆ ಸಾಮರ್ಥ್ಯದ ಕಾರಾವಿ ಆಸ್ಪತ್ರೆ ಪ್ರಾರಂಭಿಸಲು ಅವಶ್ಯಕವಿರುವ ಹುದ್ದೆಗಳನ್ನು ಉಲ್ಲೇಖಿತ (01ರ ಸರ್ಕಾರದ ಆದೇಶದಲ್ಲಿ ಸೃಜಿಸಲಾಗಿರುತ್ತದೆ ಹಾಗೂ ಉಲ್ಲೇಖ (02) ರ ಪತ್ರದಲ್ಲಿ ಕೊಪ್ಪಳ ಜಿಲ್ಲೆಯ ಬಸಾಪುರ ಗ್ರಾಮದಲ್ಲಿ 30 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆಯ ಕಟ್ಟಡ ಕಾಮಗಾರಿ ಮುಗಿಯುವವರೆಗೆ ಕೊಪ್ಪಳದ ಜಿಲ್ಲಾ ಆಸ್ಪತ್ರೆಯಲ್ಲಿನ ತಾಯಿ ಮತ್ತು ಆರೋಗ್ಯ ವಿಭಾಗ ಹಾಗೂ ಕಟ್ಟಡಕ್ಕೆ ಹೊಂದಿಕೊಂಡಿರುವ ಸಿಬ್ಬಂದಿ ವಸತಿ ಗೃಹಗಳಲ್ಲಿನ ಎರಡು ವಸತಿ ಗೃಹಗಳಲ್ಲಿ ಕಾರಾವಿ ಆಸ್ಪತ್ರೆಯನ್ನು ಪ್ರಾರಂಭಿಸಲು ನಿಯಮಾನುಸಾರ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ತಿಳಿಸಿರುತ್ತಾರೆ.

ಉಲ್ಲೇಖಿತ ಸರ್ಕಾರದ ಆದೇಶ ಹಾಗೂ ಪತ್ರಗಳ ಪ್ರತಿಯನ್ನು ಈ ಪತ್ರದೊಂದಿಗೆ ಅಡಕಗೊಳಿಸಿ ಮುಂದಿನ ಕ್ರಮಕ್ಕಾಗಿ ರವಾನಿಸಿದೆ.

19/12/2022

ನಿರ್ದೇಶಕರು (ಪ್ರ)
ಕಾರಾವಿ ಯೋ ವೈ ಸೇವೆ.

19/12

ರವರಿಗೆ,

1. ವೈದ್ಯರು / ಸಿಬ್ಬಂದಿ / ಫಾರ್ಮಸಿಸ್ಟ್ / ಶುಶ್ರೂಷಕರು / ಗ್ರೂಪ್ 'ಡಿ' / ಕಟ್ಟಡ / ಖಜಾನೆ – 2 / ಆಯವ್ಯಯ / ಹೆಚ್ಆರ್ಎಂಎಸ್ ಸಂಕಲನಗಳು ಕಾರಾವಿ ನಿರ್ದೇಶನಾಲಯ

ಪ್ರತಿಯನ್ನು

2. ಕಾರಾವಿ ನಿರ್ದೇಶನಾಲಯದ ಎಲ್ಲಾ ಅಧಿಕಾರಿಗಳ ಮಾಹಿತಿಗಾಗಿ ಸಲ್ಲಿಸಿದೆ.
3. ವೈದ್ಯಕೀಯ ಅಧೀಕ್ಷಕರು, ಕಾರಾವಿ ಆಸ್ಪತ್ರೆ ಹುಬ್ಬಳಿ, ಇವರ ಮಾಹಿತಿಗಾಗಿ ಸಲ್ಲಿಸಿದೆ.
4. ಕಛೇರಿ ಪ್ರತಿ.

E:/Himbaraha 2020-21

# ಕರ್ನಾಟಕ ಸರ್ಕಾರ

ಸಂಖ್ಯೆ: LD-LSI/104/2021 P-1

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ
ಬೆಂಗಳೂರು, ದಿನಾಂಕ:17-12-2022.

**ಇಂದ**,
ಸರ್ಕಾರದ ಕಾರ್ಯದರ್ಶಿ,
ಕಾರ್ಮಿಕ ಇಲಾಖೆ,
ವಿಕಾಸ ಸೌಧ, ಬೆಂಗಳೂರು.

**ಇವರಿಗೆ**,
ನಿರ್ದೇಶಕರು,
ಕಾರ್ಮಿಕ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು,
ರಾಜಾಜಿನಗರ, ಬೆಂಗಳೂರು.

**ಮಾನ್ಯರೆ**,

ವಿಷಯ: ಕೊಪ್ಪಳದಲ್ಲಿ 30 ಹಾಸಿಗೆ ಸಾಮರ್ಥ್ಯದ ಕಾರಾವಿ ಆಸ್ಪತ್ರೆಯನ್ನು ಪ್ರಾರಂಭಿಸಲು ಅನುಮತಿ ನೀಡುವ ಕುರಿತು.

ಉಲ್ಲೇಖ:
1. ತಮ್ಮ ಕಛೇರಿಯ ಪತ್ರ ಸಂಖ್ಯೆ: ESIS/ಅಭಿವೃದ್ಧಿ/39/20-21 ದಿನಾಂಕ: 22-11-2022.
2. ವೈದ್ಯಕೀಯ ಅಧೀಕ್ಷಕರು, ಕಾರಾವಿ ಆಸ್ಪತ್ರೆ, ಹುಬ್ಬಳ್ಳಿ, ಇವರ ಪತ್ರ ಸಂಖ್ಯೆ: ಕಾರಾವಿ ಆ/ಹು/ಘಾವಿ/375/2022-23 ದಿನಾಂಕ: 21-10-2022.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ವರದಿಯನ್ನು ಪರಿಶೀಲಿಸಲಾಗಿ, ಕೊಪ್ಪಳ ಜಿಲ್ಲೆಯ ಬಸಾಪುರ ಗ್ರಾಮದಲ್ಲಿ 30 ಹಾಸಿಗೆ ಸಾಮರ್ಥ್ಯದ ಕಾರಾವಿ ಆಸ್ಪತ್ರೆಯ ಕಟ್ಟಡ ಕಾಮಗಾರಿ ಮುಗಿಯುವವರೆಗೆ ಕೊಪ್ಪಳದ ಜಿಲ್ಲಾ ಆಸ್ಪತ್ರೆಯಲ್ಲಿನ ತಾಯಿ ಮತ್ತು ಆರೋಗ್ಯ ವಿಭಾಗ ಹಾಗೂ ಕಟ್ಟಡಕ್ಕೆ ಹೊಂದಿಕೊಂಡಿರುವ ಸಿಬ್ಬಂಧಿ ವಸತಿ ಗೃಹಗಳಲ್ಲಿನ ಎರಡು ವಸತಿ ಗೃಹಗಳಲ್ಲಿ ಕಾರಾವಿ ಆಸ್ಪತ್ರೆಯನ್ನು ಪ್ರಾರಂಭಿಸಲು ನಿಯಮಾನುಸಾರ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ತಮಗೆ ತಿಳಿಸಲು ನಿರ್ದೇಶಿತನಾಗಿದ್ದೇನೆ.

ವಿಮಾ ಯೋಜನೆ ವೈದ್ಯಕೀಯ ... ನಿರ್ದೇಶಕರ ಆಪ್ತ ಶಾಖೆ ... ಪತ್ರ ಸಂಖ್ಯೆ 835/2022-23
17 DEC 2022

ತಮ್ಮ ನಂಬುಗೆಯ,
Vijaya N 17/12/2022
(ವಿಜಯ.ಎನ್)
ಪೀಠಾಧಿಕಾರಿ-5,
ಕಾರ್ಮಿಕ ಇಲಾಖೆ
(ಕಾ.ರಾ.ವಿ.ಯೋ.ವೈ.ಸೇವೆಗಳು)

17/12/2022

ಪ್ರತಿಯನ್ನು,

ವೈದ್ಯಕೀಯ ಅಧೀಕ್ಷಕರು, ಕಾರಾವಿ ಆಸ್ಪತ್ರೆ, ಹುಬ್ಬಳ್ಳಿ ಇವರಿಗೆ ಅಗತ್ಯ ಕ್ರಮಕ್ಕಾಗಿ.

# ಕರ್ನಾಟಕ ಸರ್ಕಾರದ ನಡಾವಳಿಗಳು

ವಿಮಾ ಯೋಜನೆ ವೈದ್ಯಕೀಯ ನಿರ್ದೇಶಕರ ಆಪ್ತ ಶಾಖೆ
ಪತ್ರ ಸಂಖ್ಯೆ 836/2022-23
17 DEC 2022
ಬೆಂಗಳೂರು-560 011

**ವಿಷಯ**:- ಕೊಪ್ಪಳದಲ್ಲಿ 30 ಹಾಸಿಗೆ ಸಾಮರ್ಥ್ಯದ ಕಾರಾವಿ ಆಸ್ಪತ್ರೆಯನ್ನು ಪ್ರಾರಂಭಿಸಲು ಅವಶ್ಯಕವಾದ ಹುದ್ದೆಗಳನ್ನು ಸೃಜಿಸುವ ಬಗ್ಗೆ.

**ಉಲ್ಲೇಖ:** 1. ಪ್ರಾದೇಶಿಕ ನಿರ್ದೇಶಕರು, ಕಾರಾವಿ ನಿಗಮ, ಬೆಂಗಳೂರು ಇವರ ಪತ್ರ ಸಂಖ್ಯೆ: 53.U.16.51.01.2018.Inspn. ದಿನಾಂಕ: 24-03-2021.
2. ನಿರ್ದೇಶಕರು, ಕಾರಾವಿ ಯೋಜನೆ ವೈದ್ಯಕೀಯ ಸೇವೆ, ಇವರ ಪತ್ರ ಸಂಖ್ಯೆ: ಅಭಿವೃದ್ಧಿ/39/2020-21, ದಿನಾಂಕ: 27-05- 2020 ಮತ್ತು 01-06-2022.
3. ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ/387/ವೆಚ್ಚ9/2021ದಿನಾಂಕ:07-12-2022.

*******

**ಪ್ರಸ್ತಾವನೆ:**

ಮೇಲೆ ಓದಲಾದ (1) ರ ಪ್ರಾದೇಶಿಕ ನಿರ್ದೇಶಕರು, ಕಾರಾವಿ ನಿಗಮ, ಬೆಂಗಳೂರು ಇವರ ಪತ್ರದಲ್ಲಿ ಕೊಪ್ಪಳದಲ್ಲಿ ಕಾರಾವಿ ಆಸ್ಪತ್ರೆಯನ್ನು ಪ್ರಾರಂಭಿಸಲು ತಾತ್ವಿಕ ಅನುಮೋದನೆ ನೀಡಿರುತ್ತದೆ.

ಮೇಲೆ ಓದಲಾದ (2) ರ ನಿರ್ದೇಶಕರು, ಕಾರಾವಿ ಯೋಜನೆ ವೈದ್ಯಕೀಯ ಸೇವೆ ಇವರ ಪತ್ರದಲ್ಲಿ ಕಾರಾವಿ ನಿಗಮದ ಮಾರ್ಗಸೂಚಿಯಂತೆ ಕೊಪ್ಪಳದಲ್ಲಿ 30 ಹಾಸಿಗೆ ಸಾಮರ್ಥ್ಯದ ಕಾರಾವಿ ಆಸ್ಪತ್ರೆಯನ್ನು ಪ್ರಾರಂಭಿಸಲು ಅವಶ್ಯಕವಿರುವ ವಿವಿಧ ವೃಂದದ 68 ಹುದ್ದೆಗಳನ್ನು ನೇರನೇಮಕಾತಿ ಮೇರೆಗೆ ಹಾಗೂ 29 ಹುದ್ದೆಗಳನ್ನು ಹೊರಗುತ್ತಿಗೆ ಮೇರೆಗೆ ಸೃಜಿಸಲು ಸರ್ಕಾರದ ಮಂಜೂರಾತಿಗಾಗಿ ನಿರ್ದೇಶಕರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

**ಕೊಪ್ಪಳದಲ್ಲಿ 30 ಹಾಸಿಗೆ ಸಾಮರ್ಥ್ಯದ ಕಾರಾವಿ ಆಸ್ಪತ್ರೆಗೆ ಅವಶ್ಯಕವಿರುವ ಹುದ್ದೆಗಳ ವಿವಿರ ಈ ಕೆಳಕಂಡಂತಿವೆ:**

| ಕ್ರ. ಸಂ. | ಹುದ್ದೆಯ ಹೆಸರು | ವೇತನ ಶ್ರೇಣಿ | ಸೃಜಿಸಬೇಕಾಗಿರುವ ಹುದ್ದೆಗಳ ಸಂಖ್ಯೆ |
|---|---|---|---|
| 1 | ವಿಮಾ ವೈದ್ಯಾಧಿಕಾರಿ | 52650-97100 | 17 |
| 2 | ಆಯುರ್ವೇಧಿಕ್ ವೈದ್ಯಾಧಿಕಾರಿ | 52650-97100 | 01 |
| 3 | ಶುಶ್ರೂಷಕರು | 33450-62600 | 15 |
| 4 | ಫಾರ್ಮಸಿ ಅಧಿಕಾರಿ | 27650-52650 | 04 |
| 5 | ಕಛೇರಿ ಅಧೀಕ್ಷಕರು | 37900-70850 | 01 |
| 6 | ಪ್ರಥಮ ದರ್ಜೆ ಸಹಾಯಕರು | 27650-52650 | 04 |
| 7 | ದ್ವಿತೀಯ ದರ್ಜೆ ಸಹಾಯಕರು | 21400-42000 | 01 |
| 8 | ಡೆಂಟಲ್ ಸಹಾಯಕರು | 18600-32600 | 01 |
| 9 | ಒ.ಟಿ. ಟೆಕ್ನಿಷಿಯನ್ | 18600-32600 | 02 |
| 10 | ಪ್ಲಾಸ್ಟರ್ ಟೆಕ್ನಿಷಿಯನ್/ಸಹಾಯಕರು | 18600-32600 | 02 |
| 11 | ಇ.ಸಿ.ಜಿ ತಂತ್ರಜ್ಞರು | 27650-52650 | 02 |
| 12 | ಗ್ರೂಪ್ ಡಿ | 17000-28950 | 18 |
| | **ಒಟ್ಟು** | | **68** |

| ಕ್ರಸಂ | ಹೊರಗುತ್ತಿಗೆ ಆಧಾರದ ಮೇರೆಗೆ | ಒಟ್ಟು ಹುದ್ದೆ |
|---|---|---|
| 1 | ಹೌಸ್ ಕೀಪಿಂಗ್ | 18 |
| 2 | ಕಾವಲುಗಾರರು | 11 |
| | ಒಟ್ಟು | **29** |

17/12/2022

ಮೇಲೆ ಓದಲಾದ (3) ರ ಆರ್ಥಿಕ ಇಲಾಖೆಯ ಟಿಪ್ಪಣಿಯಲ್ಲಿ ಕೊಪ್ಪಳದಲ್ಲಿ 30 ಹಾಸಿಗೆ ಸಾಮರ್ಥ್ಯದ ಕಾರಾವಿ ಆಸ್ಪತ್ರೆಯನ್ನು ಪ್ರಾರಂಭಿಸಲು ಅವಶ್ಯಕವಿರುವ ಒಟ್ಟು 50 ವಿವಿಧ ವೃಂದದ ಹುದ್ದೆಗಳನ್ನು ಸೃಜಿಸಲು ಸಹಮತಿಸಿರುತ್ತದೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ:ಕಾಇ 104 ಎಲ್ಎಸ್ಐ 2021 ದಿನಾಂಕ:17-12-2022</u>**

ಮೇಲ್ಕಂಡಂತೆ ನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಕಾರಾವಿ ಯೋಜನೆ ವೈದ್ಯಕೀಯ ಸೇವೆಗಳ ಇಲಾಖೆಯಡಿಯಲ್ಲಿ ಕೊಪ್ಪಳದಲ್ಲಿ 30 ಹಾಸಿಗೆ ಸಾಮರ್ಥ್ಯದ ಕಾರಾವಿ ಆಸ್ಪತ್ರೆಯನ್ನು ಪ್ರಾರಂಭಿಸಲು ಅವಶ್ಯಕವಿರುವ ಒಟ್ಟು 50 ವಿವಿಧ ವೃಂದದ ಹುದ್ದೆಗಳನ್ನು ಈ ಕೆಳಗಿನಂತೆ ಸೃಜಿಸಲು ಮಂಜೂರಾತಿ ನೀಡಲಾಗಿದೆ.

| Sl.No | Designation | No of posts approved by Fd | Mode of Recruitment |
|---|---|---|---|
| 1 | Specialists (Medicine, Surgery, Gynaecologist, Orthopaedics, Pediatrician & Anaesthetist) | 06 | Contract |
| 2 | Medical Officer | 11 | Contract / Deputation of existing insurance medical officer |
| 3 | Staff Nurses | 15 | Outsource |
| 4 | Pharmacist (Store & OPD) | 02 | Outsource |
| 5 | OT Technician/Assistant | 02 | Outsource |
| 6 | ECG Technician | 01 | Contract |
| 7 | First Division Assistant | 01 | Deputation |
| 8 | Second Division Assistant | 02 | Deputation |
| 9 | Group D- Attender | 10 | Outsource |
| | **Total** | **50** | |

ಕಾರ್ಮಿಕರ ರಾಜ್ಯ ವಿಮಾ ಆಸ್ಪತ್ರೆ ಕೊಪ್ಪಳ ಇಲ್ಲಿನ ಮೊದಲ 3 ವರ್ಷಗಳ ಸಂಪೂರ್ಣ ವೆಚ್ಚವನ್ನು ಕೇಂದ್ರ ಸರ್ಕಾರ ಭರಿಸುವುದು. ಅನಂತರ ರಾಜ್ಯ ಸರ್ಕಾರದ ಪಾಲಿನ 12.5% ಅನ್ನು ಮಾತ್ರ ರಾಜ್ಯ ಸರ್ಕಾರವು ಒದಗಿಸುತ್ತದೆ. ಉಳಿದ 87.5% ವೆಚ್ಚವನ್ನು ಕೇಂದ್ರ ಸರ್ಕಾರದಿಂದ ಪಡೆಯುವುದು.

ಸದರಿ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಪತ್ರ ಸಂಖ್ಯೆ: ಆಇ/387/ವೆಚ್ಚ-9/2021 ದಿನಾಂಕ: 07-12-2022 ರಲ್ಲಿ ನೀಡಿರುವ ಸಹಮತಿ ಅನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

Vijaya.N 17/12/2022

(ವಿಜಯ.ಎನ್)
ಪೀಠಾಧಿಕಾರಿ-5,
ಕಾರ್ಮಿಕ ಇಲಾಖೆ
(ಕಾ.ರಾ.ವಿ.ಯೋ.ವೈ.ಸೇವೆಗಳು)

**ಇವರಿಗೆ:**

1. ಮಹಾಲೇಖಪಾಲರು, ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನೆ, ಕರ್ನಾಟಕ, ಬೆಂಗಳೂರು

2. ನಿರ್ದೇಶಕರು, ಕಾರಾವಿ ಯೋಜನೆ (ವೈ) ಸೇವೆಗಳು, ರಾಜಾಜಿನಗರ, ಬೆಂಗಳೂರು-560010.
3. ಹೆಚ್ಚುವರಿ ಪ್ರತಿ : ಶಾಖಾ ರಕ್ಷಾ ಕಡತ.

**ಪ್ರತಿ ಮಾಹಿತಿಗಾಗಿ:**

1. ಮಾನ್ಯ ಕಾರ್ಮಿಕ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಾರ್ಮಿಕ ಇಲಾಖೆ.

ಕರ್ನಾಟಕ ಸರ್ಕಾರ
GOVERNMENT OF KARNATAKA
ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಯ ನಿರ್ದೇಶನಾಲಯ
DIRECTORATE OF E. S. I. S. MEDICAL SERVICES
ಎಸ್. ನಿಜಲಿಂಗಪ್ಪ ರಸ್ತೆ, 2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು - 560 010
S.Nijalingappa Road, II Block, RAJAJINAGAR, BANGALORE ґ 560 010.
http://www.karnataka.gov.in/esisms Tel / Fax:080 - 2332 4216

ಸಂಖ್ಯೆ:ESIS/ಅಭಿವೃದ್ಧಿ/275/2016-17(p-2) ದಿನಾಂಕ: 24-02-2023

## ಹಿಂಬರಹ

ವಿಷಯ: ಕಾರಾವಿ ಆಸ್ಪತ್ರೆ ಹುಬ್ಬಳ್ಳಿಯನ್ನು 50 ಹಾಸಿಗೆ ಸಾಮ್ಯರ್ಥದಿಂದ 100 ಹಾಸಿಗೆ ಸಾಮ್ಯರ್ಥಕ್ಕೆ ಉನ್ನತ್ತೀಕರಿಸುವ ಕುರಿತು.

ಉಲ್ಲೇಖ:- ಸರ್ಕಾರದ ಆದೇಶ ಸಂಖ್ಯೆ: ಕಾಇ 86 ಎಲ್ಎಸ್ಐ 2021 ದಿ:04-02-2023.

*****

ಉಲ್ಲೇಖಿತ ಸರ್ಕಾರದ ಆದೇಶದ ಪ್ರತಿಯನ್ನು ಈ ಪತ್ರದೊಂದಿಗೆ ಅಡಕಗೊಳಿಸಿ ಮುಂದಿನ ಕ್ರಮಕ್ಕಾಗಿ ರವಾನಿಸಿದೆ.

23/2/2023

ನಿರ್ದೇಶಕರು (ಪ್ರ)
ಕಾರಾವಿ ಯೋ. ವೈ. ಸೇವೆ.

24/02

ರವರಿಗೆ,

1. ವೈದ್ಯರು / ಸಿಬ್ಬಂದಿ / ಫಾರ್ಮಸಿಸ್ಟ್ / ಶುಶ್ರೂಷಕರು / ಗ್ರೂಪ್ 'ಡಿ' / ಖಜಾನೆ – 2 / ಆಯವ್ಯಯ / ಹೆಚ್ಆರ್ಎಂಎಸ್ ಸಂಕಲನಗಳು ಕಾರಾವಿ ನಿರ್ದೇಶನಾಲಯ

ಪ್ರತಿಯನ್ನು

2. ಕಾರಾವಿ ನಿರ್ದೇಶನಾಲಯದ ಎಲ್ಲಾ ಅಧಿಕಾರಿಗಳ ಮಾಹಿತಿಗಾಗಿ ಸಲ್ಲಿಸಿದೆ.
3. ಕಛೇರಿ ಪ್ರತಿ.

E:/Himbaraha 2020-21

# ಕರ್ನಾಟಕ ಸರ್ಕಾರದ ನಡಾವಳಿಗಳು

ವಿಷಯ:- ಹುಬ್ಬಳ್ಳಿಯಲ್ಲಿರುವ 50 ಹಾಸಿಗೆಗಳ ಕಾರಾವಿ ಆಸ್ಪತ್ರೆಯನ್ನು 100 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲು ಅವಶ್ಯಕವಾದ ಹುದ್ದೆಗಳನ್ನು ಸೃಜಿಸುವ ಬಗ್ಗೆ.

ಉಲ್ಲೇಖ: 1. ಸಹಾಯಕ ನಿರ್ದೇಶಕರು, ಕಾರಾವಿ ನಿಗಮ, ನವದೆಹಲಿ ಇವರ ಪತ್ರ ಸಂಖ್ಯೆ: U/16/12/4/VIP/Karnataka/2017/Med-II. ದಿನಾಂಕ: 20-08-2018.

2. ನಿರ್ದೇಶಕರು, ಕಾರಾವಿ ಯೋಜನೆ ವೈದ್ಯಕೀಯ ಸೇವೆ, ಇವರ ಪತ್ರ ಸಂಖ್ಯೆ: ಅಭಿವೃದ್ಧಿ/275/2016-17, ದಿನಾಂಕ: 08-08-2022, ಹಾಗೂ ಅಭಿವೃದ್ಧಿ/275/2016-17 (P-1), ದಿನಾಂಕ:30-09-2022.

3. ಆರ್ಥಿಕ ಇಲಾಖೆಯ ಟಿಪ್ಪಣಿ ಪತ್ರ ಸಂಖ್ಯೆ: ಆಇ 325 ಎಫ್.ಆರ್.ಸಿ.2021 (511187) ಆಇ 299 ವೆಚ್ಚ-9 2021 (500067) ದಿನಾಂಕ: 24-01-2023 ಮತ್ತು ಆಇ 299 ವೆಚ್ಚ-9 2021 ದಿನಾಂಕ: 30-01-2023.

1011 22 23
6 FEB 2023
ಬೆಂಗಳೂರು-560 010

*****

**ಪ್ರಸ್ತಾವನೆ:**

ಮೇಲೆ ಓದಲಾದ (1) ರ ಸಹಾಯಕ ನಿರ್ದೇಶಕರು, ಕಾರಾವಿ ನಿಗಮ, ನವದೆಹಲಿ ಇವರ ಪತ್ರದಲ್ಲಿ, ಕಾರಾವಿ ಆಸ್ಪತ್ರೆ, ಹುಬ್ಬಳ್ಳಿಯನ್ನು 50 ಹಾಸಿಗೆ ಸಾಮರ್ಥ್ಯದಿಂದ 100 ಹಾಸಿಗೆ ಸಾಮರ್ಥ್ಯಕ್ಕೆ ಉನ್ನತೀಕರಿಸಲು ಸಹಮತವನ್ನು ನೀಡಿರುತ್ತದೆ.

ಮೇಲೆ ಓದಲಾದ (2) ರ ನಿರ್ದೇಶಕರು, ಕಾರಾವಿ ಯೋಜನೆ ವೈದ್ಯಕೀಯ ಸೇವೆ ಇವರ ಪತ್ರದಲ್ಲಿ ಕಾರಾವಿ ನಿಗಮದ ಮಾರ್ಗಸೂಚಿಯಂತೆ ಹುಬ್ಬಳ್ಳಿಯಲ್ಲಿರುವ 50 ಹಾಸಿಗೆಗಳ ಕಾರಾವಿ ಆಸ್ಪತ್ರೆಯನ್ನು 100 ಹಾಸಿಗೆಗಳ ಆಸ್ಪತೆಯನ್ನಾಗಿ ಮೇಲ್ದರ್ಜೆಗೇರಿಸಲು ಅವಶ್ಯಕವಾದ ವಿವಿಧ ವೃಂದದ 216 ಹುದ್ದೆಗಳನ್ನು ನೇರ ನೇಮಕಾತಿ ಮೇರೆಗೆ ನೇಮಕ ಮಾಡಿಕೊಳ್ಳಲು ಹಾಗೂ Speciality Wise ಹುದ್ದೆಗಳನ್ನು ಗುರುತಿಸಿ ಸರ್ಕಾರದ ಮಂಜೂರಾತಿಗಾಗಿ ನಿರ್ದೇಶಕರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

**ಕಾರಾವಿ ಆಸ್ಪತ್ರೆ ಹುಬ್ಬಳ್ಳಿ ಇದನ್ನು 50 ಹಾಸಿಗೆ ಸಾಮರ್ಥ್ಯದಿಂದ 100 ಹಾಸಿಗೆ ಸಾಮರ್ಥ್ಯಕ್ಕೆ ಉನ್ನತೀಕರಿಸಲು ಸೃಜಿಸಬೇಕಾಗಿರುವ ವಿವಿಧ ವೃಂದಗಳ ಹುದ್ದೆಗಳ ವಿವರ ಈ ಕೆಳಕಂಡಂತಿದೆ:**

| ಕ್ರ. ಸಂ | ಹುದ್ದೆ | ವೇತನ ಶ್ರೇಣಿ | ಗ್ರೂಪ್ | ಸೃಜಿಸ ಬೇಕಾದ ಹುದ್ದೆಗಳ ಸಂಖ್ಯೆ |
|---|---|---|---|---|
| 1 | ವಿಮಾ ವೈದ್ಯಾಧಿಕಾರಿ | 52650-97100 | A | 26 |
| 2 | ಶುಶ್ರೂಷಕ ಅಧೀಕ್ಷಕರು ದರ್ಜೆ - I | 43100-83900 | B | 1 |
| 3 | ಕಛೇರಿ ಅಧೀಕ್ಷಕರು | 37900-70850 | C | 1 |
| 4 | ಶೀಘ್ರಲಿಪಿಗಾರರು | 27650-52650 | C | 1 |
| 5 | ದ್ವಿತೀಯ ದರ್ಜೆಸಹಾಯಕರು | 21400-42000 | C | 5 |
| 6 | ರೆಕಾರ್ಡ್ ಸಾರ್ಟರ್ | 21400-42000 | C | 2 |
| 7 | ಶುಶ್ರೂಷಕ ಅಧೀಕ್ಷಕರು ದರ್ಜೆ – II | 40900-78200 | C | 4 |
| 8 | ಶುಶ್ರೂಷಕರು | 33450-62600 | C | 34 |
| 9 | ಡೈಟಿಷಿಯನ್ | 37900-70850 | C | 1 |
| 10 | ಹಿರಿಯ ಪ್ರಯೋಗಶಾಲ ತಂತ್ರಜ್ಞರು | 30350-58250 | C | 2 |
| 11 | ಕಿರಿಯ ಪ್ರಯೋಗಶಾಲ ತಂತ್ರಜ್ಞರು | 27650-52650 | C | 2 |
| 12 | ರೇಡಿಯೋಗ್ರಾಫರ್ | 30350-58250 | C | 2 |
| 13 | ಕಿರಿಯ ರೇಡಿಯೋಗ್ರಾಫರ್ | 27650-52650 | C | 5 |

6/2/2023

| | | | | |
|---|---|---|---|---|
| 14 | ಅಕ್ಯೂಪೆಷನಲ್ ಥೆರಾಪಿಸ್ಟ್ | 27650-52650 | C | 1 |
| 15 | ಇ.ಸಿ.ಜಿ ತಂತ್ರಜ್ಞರು | 27650-52650 | C | 4 |
| 16 | ಡ್ರೆಸರ್ | 17000-28950 | D | 2 |
| 17 | ಒ. ಟಿ. ತಂತ್ರಜ್ಞರು | 18600-32600 | D | 5 |
| 18 | ಒ. ಟಿ. ಸಹಾಯಕರು | 18600-32600 | D | 10 |
| 19 | ಹೆಡ್ ಕುಕ್ | 18600-32600 | D | 1 |
| 20 | ಕುಕ್ | 17000-28950 | D | 4 |
| 21 | ಗ್ರೂಪ್ ಡಿ | 17000-28950 | D | 103 |
| | **ಒಟ್ಟು** | | | **216** |

ಮೇಲೆ ಓದಲಾದ (3) ರ ಆರ್ಥಿಕ ಇಲಾಖೆಯ ಟಿಪ್ಪಣಿಯಲ್ಲಿ ಹುಬ್ಬಳ್ಳಿಯಲ್ಲಿರುವ 50 ಹಾಸಿಗೆಗಳ ಕಾರಾವಿ ಆಸ್ಪತ್ರೆಯನ್ನು 100 ಹಾಸಿಗೆಗಳ ಆಸ್ಪತೆಯನ್ನಾಗಿ ಮೇಲ್ದರ್ಜೆಗೇರಿಸಲು 50 ಹಾಸಿಗೆಗಳ ಕಾರಾವಿ ಆಸ್ಪತ್ರೆಗೆ ಮಂಜೂರಾಗಿರುವ ಹುದ್ದೆ ಹೊರತುಪಡಿಸಿ, ಕೆಲವು ಷರತ್ತುಗಳಿಗೊಳಪಟ್ಟು ಅವಶ್ಯಕವಾದ ಒಟ್ಟು 90 ವಿವಿಧ ವೃಂದದ ಹುದ್ದೆಗಳನ್ನು ಸೃಜಿಸಲು ಸಹಮತಿಸಿರುತ್ತದೆ.

ಪ್ರಸ್ತಾವನೆಯನ್ನು ನಿಯಮಾನುಸಾರ ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಕಾಇ 86 ಎಲ್ಎಸ್ಐ 2021 ದಿನಾಂಕ: 04-02-2023**

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳ ಇಲಾಖೆಯಡಿಯಲ್ಲಿ ಹುಬ್ಬಳ್ಳಿಯಲ್ಲಿರುವ 50 ಹಾಸಿಗೆಗಳ ಕಾರಾವಿ ಆಸ್ಪತ್ರೆಯನ್ನು 100 ಹಾಸಿಗೆಗಳ ಆಸ್ಪತೆಯನ್ನಾಗಿ ಮೇಲ್ದರ್ಜೆಗೇರಿಸಲು 50 ಹಾಸಿಗೆಗಳ ಕಾರಾವಿ ಆಸ್ಪತ್ರೆಗೆ ಮಂಜೂರಾಗಿರುವ ಹುದ್ದೆ ಹೊರತುಪಡಿಸಿ, ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅವಶ್ಯಕವಾದ ಒಟ್ಟು 90 ವಿವಿಧ ವೃಂದದ ಹುದ್ದೆಗಳನ್ನು ಈ ಕೆಳಗಿನಂತೆ ಸೃಜಿಸಲು ಮಂಜೂರಾತಿ ನೀಡಲಾಗಿದೆ.

| ಕ್ರ. ಸಂ | ಪದನಾಮ | ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ |
|---|---|---|---|
| 1 | Specialists | 17 | Contract |
| 2 | Insurance Medical Officer | 07 | Contract/Deputation |
| 3 | S.D.A. | 03 | DEO cum Clerk Outsource |
| 4 | Record Sorter | 02 | Outsource |
| 5 | Staff Nurse | 20 | Outsource |
| 6 | Dietician | 01 | Contract |
| 7 | Senior Lab Technician | 01 | Outsource |
| 8 | Junior Lab Technician | 01 | Outsource |
| 9 | Radiographer | 01 | Outsource |
| 10 | Junior Radiographer | 01 | Outsource |
| 11 | ECG Technician | 01 | Outsource |
| 12 | Dresser | 01 | Outsource |
| 13 | O.T. Technician | 03 | Outsource |
| 14 | O.T. Assistant | 05 | Outsource |
| 15 | Head Cook | 01 | Outsource |
| 16 | Group-D | 25 | Outsource |
| | Total | **90** | |

ಷರತ್ತುಗಳು

1. ಪ್ರಸ್ತಾವನೆಗೆ ತಗಲುವ ವೆಚ್ಚದ ಶೇ.87.50% ಅನ್ನು ಕೇಂದ್ರ ಸರ್ಕಾರದಿಂದ ಪಡೆಯುವುದು. ಇದರಲ್ಲಿ, ನೇರ ನೇಮಕಾತಿ / ನಿಯೋಜನೆ ಮೇಲೆ ಭರ್ತಿಯಾಗುವ ಸಿಬ್ಬಂದಿಯ. NPS Contribution ಕಟಾವಣೆ ಸಹ ಒಳಗೊಂಡಿರುತ್ತದೆ.
2. ಪ್ರಸ್ತಾವನೆಗೆ ತಗಲುವ ವೆಚ್ಚದ ಶೇ.12.50% ಅನ್ನು ಮಾತ್ರ ರಾಜ್ಯ ಸರ್ಕಾರದಿಂದ ಒದಗಿಸಲಾಗುವುದು ಎಂದು ತಿಳಿಸಲಾಗಿದೆ.
3. Specialists ಹುದ್ದೆಗಳನ್ನು ಮೊದಲಿಗೆ ಗುತ್ತಿಗೆ ಆಧಾರದ ಮೇಲೆ NHM ನಿಗದಿಪಡಿಸಿರುವ ಮೊತ್ತದಂತೆ ಪಡೆಯುವುದು. ಅನಂತರ, ಸದರಿ ಹುದ್ದೆಗಳನ್ನು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅಳವಡಿಸಿಕೊಳ್ಳಲು ಕ್ರಮವಹಿಸಿ, ನೇರ ನೇಮಕಾತಿಯಿಂದ ಭರ್ತಿ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು.
4. ರೋಗಿಗಳಿಗೆ ಆಹಾರ ಒದಗಿಸುವ ಕ್ರಮವನ್ನು ಟೆಂಡರ್ ಮೂಲಕ ನಿರ್ವಹಿಸುವುದು, ಉತ್ತಮ ಗುಣಮಟ್ಟದ ಆಹಾರವನ್ನು ಹೆಡ್ ಕುಕ್ ರವರು ಖಚಿತಪಡಿಸಿಕೊಳ್ಳುವುದು.

ಸದರಿ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಪತ್ರ ಸಂಖ್ಯೆ: ಆಇ 325 ಎಫ್.ಆರ್.ಸಿ.2021 (511187) ಆಇ 299 ವೆಚ್ಚ-9 2021 (500067) ದಿನಾಂಕ: 24-01-2023 ಮತ್ತು ಆಇ 299 ವೆಚ್ಚ-9 2021 ದಿನಾಂಕ: 30-01-2023 ರಲ್ಲಿ ನೀಡಿರುವ ಸಹಮತಿ ಅನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

Vijaya.N 4/2/2023.
**(ವಿಜಯ ಎನ್)**
ಪೀಠಾಧಿಕಾರಿ-5
ಕಾರ್ಮಿಕ ಇಲಾಖೆ,
ಕಾರಾವಿಯೋವ್ಯೆ ಸೇವೆಗಳು

**ಇವರಿಗೆ:**

1. ಮಹಾಲೇಖಪಾಲರು, ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನೆ, ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ಕಾರಾವಿ ಯೋಜನೆ (ವೈ) ಸೇವೆಗಳು, ರಾಜಾಜಿನಗರ, ಬೆಂಗಳೂರು-560010.
3. ವೈದ್ಯಕೀಯ ಅಧೀಕ್ಷಕರು, ಕಾರಾವಿ ಆಸ್ಪತ್ರೆ, ಹುಬ್ಬಳ್ಳಿ.
4. ಹೆಚ್ಚುವರಿ ಪ್ರತಿ : ಶಾಖಾ ರಕ್ಷಾ ಕಡತ.

**ಪ್ರತಿ ಮಾಹಿತಿಗಾಗಿ:**

1. ಮಾನ್ಯ ಕಾರ್ಮಿಕ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಾರ್ಮಿಕ ಇಲಾಖೆ.

ಕರ್ನಾಟಕ ಸರ್ಕಾರ
GOVERNMENT OF KARNATAKA
**ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಯ ನಿರ್ದೇಶನಾಲಯ**
**DIRECTORATE OF E. S. I. S. MEDICAL SERVICES**
ಎಸ್. ನಿಜಲಿಂಗಪ್ಪ ರಸ್ತೆ, 2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು - 560 010
S.Nijalingappa Road, II Block, RAJAJINAGAR, BANGALORE ಗ 560 010.
http://www.karnataka.gov.in/esisms
Tel / Fax:080 - 2332 4216

ಸಂಖ್ಯೆ:ESIS/ಅಭಿವೃದ್ಧಿ/275/2016-17(p-2) ದಿನಾಂಕ: 24-02-2023

## ಹಿಂಬರಹ

ವಿಷಯ: ಕಾರಾವಿ ಆಸ್ಪತ್ರೆ ದಾವಣಗೆರೆಯನ್ನು 50 ಹಾಸಿಗೆ ಸಾಮ್ಯರ್ಥದಿಂದ 100 ಹಾಸಿಗೆ ಸಾಮ್ಯರ್ಥಕ್ಕೆ ಉನ್ನತ್ರೀಕರಿಸುವ ಕುರಿತು.
ಉಲ್ಲೇಖ:- ಸರ್ಕಾರದ ಆದೇಶ ಸಂಖ್ಯೆ: ಕಾಇ 85 ಎಲ್‌ಎಸ್‌ಐ 2021 ದಿ: 04-02-2023.

*****

ಉಲ್ಲೇಖಿತ ಸರ್ಕಾರದ ಆದೇಶದ ಪ್ರತಿಯನ್ನು ಈ ಪತ್ರದೊಂದಿಗೆ ಅಡಕಗೊಳಿಸಿ ಮುಂದಿನ ಕ್ರಮಕ್ಕಾಗಿ ರವಾನಿಸಿದೆ.

27/2/2023
ನಿರ್ದೇಶಕರು (ಪ್ರ)
ಕಾರಾವಿ ಯೋವೈ ಸೇವೆ.

ರವರಿಗೆ,

1. ವೈದ್ಯರು / ಸಿಬ್ಬಂದಿ / ಫಾರ್ಮಸಿಸ್ಟ್ / ಶುಶ್ರೂಷಕರು / ಗ್ರೂಪ್ 'ಡಿ' / ಖಜಾನೆ – 2 / ಆಯವ್ಯಯ / ಹೆಚ್‌ಆರ್‌ಎಂಎಸ್ ಸಂಕಲನಗಳು ಕಾರಾವಿ ನಿರ್ದೇಶನಾಲಯ

ಪ್ರತಿಯನ್ನು

2. ಕಾರಾವಿ ನಿರ್ದೇಶನಾಲಯದ ಎಲ್ಲಾ ಅಧಿಕಾರಿಗಳ ಮಾಹಿತಿಗಾಗಿ ಸಲ್ಲಿಸಿದೆ.
3. ಕಛೇರಿ ಪ್ರತಿ.

# ಕರ್ನಾಟಕ ಸರ್ಕಾರದ ನಡಾವಳಿಗಳು

ವಿಷಯ:- ದಾವಣಗೆರೆಯಲ್ಲಿರುವ 50 ಹಾಸಿಗೆಗಳ ಕಾರಾವಿ ಆಸ್ಪತ್ರೆಯನ್ನು 100 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲು ಅವಶ್ಯಕವಾದ ಹುದ್ದೆಗಳನ್ನು ಸೃಜಿಸುವ ಬಗ್ಗೆ.

ಉಲ್ಲೇಖ:1. ಉಪ ವೈದ್ಯಕೀಯ ಆಯುಕ್ತರು, ಕಾರಾವಿ ನಿಗಮ, ನವದೆಹಲಿ ಇವರ ಪತ್ರ ಸಂಖ್ಯೆ: U/16/12/4/VIP/Karnataka/2017/Med-II. ದಿನಾಂಕ: 12-02-2019.

2. ನಿರ್ದೇಶಕರು, ಕಾರಾವಿ ಯೋಜನೆ ವೈದ್ಯಕೀಯ ಸೇವೆ, ಇವರ ಪತ್ರ ಸಂಖ್ಯೆ: ಅಭಿವೃದ್ಧಿ/275/2016-17, ದಿನಾಂಕ: 08-08-2022, ಹಾಗೂ ಅಭಿವೃದ್ಧಿ/275/2016-17 (P-1), ದಿನಾಂಕ:30-09-2022.

3. ಆರ್ಥಿಕ ಇಲಾಖೆಯ ಟಿಪ್ಪಣಿ ಪತ್ರ ಸಂಖ್ಯೆ: ಆಇ 326 ಎಫ್.ಆರ್.ಸಿ.2021 (511257) ಆಇ 297 ವೆಚ್ಚ-9 2021 (499980) ದಿನಾಂಕ: 24-01-2023 ಮತ್ತು ಆಇ 297 ವೆಚ್ಚ-9 2021 ದಿನಾಂಕ: 30-01-2023.

*****

1010 22-23
- 6 FEB 2023
ಬೆಂಗಳೂರು-560 010

**ಪ್ರಸ್ತಾವನೆ:**

ಮೇಲೆ ಓದಲಾದ (1) ರ ಉಪ ವೈದ್ಯಕೀಯ ಆಯುಕ್ತರು, ಕಾರಾವಿ ನಿಗಮ ನವದೆಹಲಿ ಇವರ ಪತ್ರದಲ್ಲಿ ಕಾರಾವಿ ಆಸ್ಪತ್ರೆ, ದಾವಣಗೆರೆಯನ್ನು 50 ಹಾಸಿಗೆ ಸಾಮರ್ಥ್ಯದಿಂದ 100 ಹಾಸಿಗೆ ಸಾಮರ್ಥ್ಯಕ್ಕೆ ಉನ್ನತೀಕರಿಸಲು ಸಹಮತವನ್ನು ನೀಡಿರುತ್ತದೆ.

ಮೇಲೆ ಓದಲಾದ (2) ರ ನಿರ್ದೇಶಕರು, ಕಾರಾವಿ ಯೋಜನೆ ವೈದ್ಯಕೀಯ ಸೇವೆ ಇವರ ಪತ್ರದಲ್ಲಿ ಕಾರಾವಿ ನಿಗಮದ ಮಾರ್ಗಸೂಚಿಯಂತೆ ದಾವಣಗೆರೆಯಲ್ಲಿರುವ 50 ಹಾಸಿಗೆಗಳ ಕಾರಾವಿ ಆಸ್ಪತ್ರೆಯನ್ನು 100 ಹಾಸಿಗೆಗಳ ಆಸ್ಪತೆಯನ್ನಾಗಿ ಮೇಲ್ದರ್ಜೆಗೇರಿಸಲು ಅವಶ್ಯಕವಾದ ವಿವಿಧ ವೃಂದದ 218 ಹುದ್ದೆಗಳನ್ನು ನೇರ ನೇಮಕಾತಿ ಮೇರೆಗೆ ನೇಮಕ ಮಾಡಿಕೊಳ್ಳಲು ಹಾಗೂ Speciality Wise ಹುದ್ದೆಗಳನ್ನು ಗುರುತಿಸಿ ಸರ್ಕಾರದ ಮಂಜೂರಾತಿಗಾಗಿ ನಿರ್ದೇಶಕರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

**ಕಾರಾವಿ ಆಸ್ಪತ್ರೆ ದಾವಣಗೆರೆ ಇದನ್ನು 50 ಹಾಸಿಗೆ ಸಾಮರ್ಥ್ಯದಿಂದ 100 ಹಾಸಿಗೆ ಸಾಮರ್ಥ್ಯಕ್ಕೆ ಉನ್ನತೀಕರಿಸಲು ಸೃಜಿಸಬೇಕಾಗಿರುವ ವಿವಿಧ ವೃಂದಗಳ ಹುದ್ದೆಗಳ ವಿವರ ಈ ಕೆಳಕಂಡಂತಿದೆ:**

| ಕ್ರ. ಸಂ | ಹುದ್ದೆ | ವೇತನ ಶ್ರೇಣಿ | ಗ್ರೂಪ್ | ಸೃಜಿಸ ಬೇಕಾದ ಹುದ್ದೆಗಳ ಸಂಖ್ಯೆ |
|---|---|---|---|---|
| 1 | ವಿಮಾ ವೈದ್ಯಾಧಿಕಾರಿ | 52650-97100 | A | 29 |
| 2 | ಶುಶ್ರೂಷಕ ಅಧೀಕ್ಷಕರು ದರ್ಜೆ -I | 43100-83900 | B | 1 |
| 3 | ಕಛೇರಿ ಅಧೀಕ್ಷಕರು | 37900-70850 | C | 2 |
| 4 | ಶೀಘ್ರಲಿಪಿಗಾರರು | 27650-52650 | C | 1 |
| 5 | ದ್ವಿತೀಯ ದರ್ಜೆಸಹಾಯಕರು | 21400-42000 | C | 5 |
| 6 | ರೆಕಾರ್ಡ್ ಸಾರ್ಟರ್ | 21400-42000 | C | 2 |
| 7 | ಶುಶ್ರೂಷಕ ಅಧೀಕ್ಷಕರು ದರ್ಜೆ – II | 40900-78200 | C | 4 |
| 8 | ಶುಶ್ರೂಷಕರು | 33450-62600 | C | 36 |
| 9 | ಡೈಟಿಷಿಯನ್ | 37900-70850 | C | 1 |
| 10 | ಹಿರಿಯ ಪ್ರಯೋಗಶಾಲ ತಂತ್ರಜ್ಞರು | 30350-58250 | C | 2 |
| 11 | ಕಿರಿಯ ಪ್ರಯೋಗಶಾಲ ತಂತ್ರಜ್ಞರು | 27650-52650 | C | 2 |
| 12 | ರೆಡಿಯೋಗ್ರಾಫರ್ | 30350-58250 | C | 1 |
| 13 | ಕಿರಿಯ ರೆಡಿಯೋಗ್ರಾಫರ್ | 27650-52650 | C | 5 |
| 14 | ಅಕ್ಯೂಪೆಷನಲ್ ಥೆರಾಪಿಸ್ಟ್ | 27650-52650 | C | 1 |
| 15 | ಇ.ಸಿ.ಜಿ ತಂತ್ರಜ್ಞರು | 27650-52650 | C | 4 |

6/2/2023

| | | | | |
|---|---|---|---|---|
| 16 | ಡ್ರೆಸರ್ | 17000-28950 | D | 2 |
| 17 | ಒ. ಟಿ. ತಂತ್ರಜ್ಞರು | 18600-32600 | D | 5 |
| 18 | ಒ. ಟಿ. ಸಹಾಯಕರು | 18600-32600 | D | 10 |
| 19 | ಹೆಡ್ ಕುಕ್ | 18600-32600 | D | 1 |
| 20 | ಕುಕ್ | 17000-28950 | D | 4 |
| 21 | ಗ್ರೂಪ್ ಡಿ | 17000-28950 | D | 100 |
| | **ಒಟ್ಟು** | | | **218** |

ಮೇಲೆ ಓದಲಾದ (3) ರ ಆರ್ಥಿಕ ಇಲಾಖೆಯ ಟಿಪ್ಪಣಿಯಲ್ಲಿ ದಾವಣಗೆರೆಯಲ್ಲಿರುವ 50 ಹಾಸಿಗೆಗಳ ಕಾರಾವಿ ಆಸ್ಪತ್ರೆಯನ್ನು 100 ಹಾಸಿಗೆಗಳ ಆಸ್ಪತೆಯನ್ನಾಗಿ ಮೇಲ್ದರ್ಜೆಗೇರಿಸಲು 50 ಹಾಸಿಗೆಗಳ ಕಾರಾವಿ ಆಸ್ಪತ್ರೆಗೆ ಮಂಜೂರಾಗಿರುವ ಹುದ್ದೆ ಹೊರತುಪಡಿಸಿ, ಕೆಲವು ಷರತ್ತುಗಳಿಗೊಳಪಟ್ಟು ಅವಶ್ಯಕವಾದ ಒಟ್ಟು 90 ವಿವಿಧ ವೃಂದದ ಹುದ್ದೆಗಳನ್ನು ಸೃಜಿಸಲು ಸಹಮತಿಸಿರುತ್ತದೆ.

ಪ್ರಸ್ತಾವನೆಯನ್ನು ನಿಯಮಾನುಸಾರ ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಕಾಇ 85 ಎಲ್ಎಸ್ಐ 2021 ದಿನಾಂಕ: 04-02-2023**

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಕಾರಾವಿ ಯೋಜನೆ ವೈದ್ಯಕೀಯ ಸೇವೆಗಳ ಇಲಾಖೆಯಡಿಯಲ್ಲಿ ದಾವಣಗೆರೆಯಲ್ಲಿರುವ 50 ಹಾಸಿಗೆಗಳ ಕಾರಾವಿ ಆಸ್ಪತ್ರೆಯನ್ನು 100 ಹಾಸಿಗೆಗಳ ಆಸ್ಪತೆಯನ್ನಾಗಿ ಮೇಲ್ದರ್ಜೆಗೇರಿಸಲು 50 ಹಾಸಿಗೆಗಳ ಕಾರಾವಿ ಆಸ್ಪತ್ರೆಗೆ ಮಂಜೂರಾಗಿರುವ ಹುದ್ದೆ ಹೊರತುಪಡಿಸಿ, ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅವಶ್ಯಕವಾದ ಒಟ್ಟು 90 ವಿವಿಧ ವೃಂದದ ಹುದ್ದೆಗಳನ್ನು ಈ ಕೆಳಗಿನಂತೆ ಸೃಜಿಸಲು ಮಂಜೂರಾತಿ ನೀಡಲಾಗಿದೆ.

| ಕ್ರ. ಸಂ | ಪದನಾಮ | ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ |
|---|---|---|---|
| 1 | Specialists | 17 | Contract |
| 2 | Insurance Medical Officer | 07 | Contract/Deputation |
| 3 | S.D.A. | 03 | DEO cum Clerk Outsource |
| 4 | Record Sorter | 02 | Outsource |
| 5 | Staff Nurse | 20 | Outsource |
| 6 | Dietician | 01 | Contract |
| 7 | Senior Lab Technician | 01 | Outsource |
| 8 | Junior Lab Technician | 01 | Outsource |
| 9 | Radiographer | 01 | Outsource |
| 10 | Junior Radiographer | 01 | Outsource |
| 11 | ECG Technician | 01 | Outsource |
| 12 | Dresser | 01 | Outsource |
| 13 | O.T. Technician | 03 | Outsource |
| 14 | O.T. Assistant | 05 | Outsource |
| 15 | Head Cook | 01 | Outsource |
| 16 | Group-D | 25 | Outsource |
| | Total | **90** | |

ಷರತ್ತುಗಳು

1. ಪ್ರಸ್ತಾವನೆಗೆ ತಗಲುವ ವೆಚ್ಚದ ಶೇ.87.50% ಅನ್ನು ಕೇಂದ್ರ ಸರ್ಕಾರದಿಂದ ಪಡೆಯುವುದು. ಇದರಲ್ಲಿ, ನೇರ ನೇಮಕಾತಿ / ನಿಯೋಜನೆ ಮೇಲೆ ಭರ್ತಿಯಾಗುವ ಸಿಬ್ಬಂದಿಯ. NPS Contribution ಕಟಾವಣೆ ಸಹ ಒಳಗೊಂಡಿರುತ್ತದೆ.

2. ಪ್ರಸ್ತಾವನೆಗೆ ತಗಲುವ ವೆಚ್ಚದ ಶೇ.12.50% ಅನ್ನು ಮಾತ್ರ ರಾಜ್ಯ ಸರ್ಕಾರದಿಂದ ಒದಗಿಸಲಾಗುವುದು ಎಂದು ತಿಳಿಸಲಾಗಿದೆ.

3. Specialists ಹುದ್ದೆಗಳನ್ನು ಮೊದಲಿಗೆ ಗುತ್ತಿಗೆ ಆಧಾರದ ಮೇಲೆ NHM ನಿಗದಿಪಡಿಸಿರುವ ಮೊತ್ತದಂತೆ ಪಡೆಯುವುದು. ಅನಂತರ, ಸದರಿ ಹುದ್ದೆಗಳನ್ನು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅಳವಡಿಸಿಕೊಳ್ಳಲು ಕ್ರಮವಹಿಸಿ, ನೇರ ನೇಮಕಾತಿಯಿಂದ ಭರ್ತಿ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು.

4. ರೋಗಿಗಳಿಗೆ ಆಹಾರ ಒದಗಿಸುವ ಕ್ರಮವನ್ನು ಟೆಂಡರ್ ಮೂಲಕ ನಿರ್ವಹಿಸುವುದು, ಉತ್ತಮ ಗುಣಮಟ್ಟದ ಆಹಾರವನ್ನು ಹೆಡ್ ಕುಕ್ ರವರು ಖಚಿತಪಡಿಸಿಕೊಳ್ಳುವುದು.

5. Norms ಗಿಂತ ಹೆಚ್ಚುವರಿಯಾಗಿ ಮಂಜೂರಾಗಿ ಖಾಲಿ ಇರುವ 3 Pharmacist ಹುದ್ದೆಗಳನ್ನು ರದ್ದುಪಡಿಸುವುದು.

ಸದರಿ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಪತ್ರ ಸಂಖ್ಯೆ: ಆಇ 326 ಎಫ್.ಆರ್.ಸಿ.2021 ( 511257) ಆಇ 297 ವೆಚ್ಚ-9 2021 (499980) ದಿನಾಂಕ: 24-01-2023 ಮತ್ತು ಆಇ 297 ವೆಚ್ಚ-9 2021 ದಿನಾಂಕ: 30-01-2023 ರಲ್ಲಿ ನೀಡಿರುವ ಸಹಮತಿ ಅನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

Vijaya.N 14/2/2023.
(ವಿಜಯ ಎನ್)
ಪೀಠಾಧಿಕಾರಿ-5
ಕಾರ್ಮಿಕ ಇಲಾಖೆ,
ಕಾರಾವಿಯೋವ್ಯೆ ಸೇವೆಗಳು

**ಇವರಿಗೆ:**

1. ಮಹಾಲೇಖಪಾಲರು, ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನೆ, ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ಕಾರಾವಿ ಯೋಜನೆ (ವೈ) ಸೇವೆಗಳು, ರಾಜಾಜಿನಗರ, ಬೆಂಗಳೂರು-560010.
3. ವೈದ್ಯಕೀಯ ಅಧೀಕ್ಷಕರು, ಕಾರಾವಿ ಆಸ್ಪತ್ರೆ, ದಾವಣಗೆರೆ.
4. ಹೆಚ್ಚುವರಿ ಪ್ರತಿ : ಶಾಖಾ ರಕ್ಷಾ ಕಡತ.

**ಪ್ರತಿ ಮಾಹಿತಿಗಾಗಿ:**

1. ಮಾನ್ಯ ಕಾರ್ಮಿಕ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಾರ್ಮಿಕ ಇಲಾಖೆ.

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ಇಲಾಖೆಯ ಕಾ.ರಾ.ವಿ. ಚಿಕಿತ್ಸಾಲಯ, ಮದ್ದೂರು ಮತ್ತು ಕಾ.ರಾ.ವಿ. ಚಿಕಿತ್ಸಾಲಯ ಟಿ. ನರಸೀಪುರ ಇಲ್ಲಿಗೆ ಹುದ್ದೆಗಳನ್ನು ಸ್ಥಳಾಂತರಿಸುವ ಬಗ್ಗೆ.

ಓದಲಾಗಿದೆ: ನಿರ್ದೇಶಕರು, ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ಇವರ ಪತ್ರ ಸಂಖ್ಯೆ: ಅಭಿವೃದ್ಧಿ/257/2017-18, ದಿನಾಂಕ: 30-11-2017

********

ಪ್ರಸ್ತಾವನೆ:-

ಮೇಲೆ ಓದಲಾದ ನಿರ್ದೇಶಕರು, ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ಇವರ ಪತ್ರದಲ್ಲಿ, ಕಾರಾವಿ ಚಿಕಿತ್ಸಾಲಯ, ಮದ್ದೂರು ಮತ್ತು ಕಾರಾವಿ ಚಿಕಿತ್ಸಾಲಯ ಟಿ. ನರಸೀಪುರ ಈ ಚಿಕಿತ್ಸಾಲಯಗಳನ್ನು ಮುಚ್ಚಿ ಈ ವಲಯದ ವಿಮಾದಾರರಿಗೆ ಹಾಗೂ ಅವರ ಕುಟುಂಬದವರಿಗೆ ಐ.ಎಂ.ಪಿ. ಪದ್ಧತಿ ಮೂಲಕ ವೈದ್ಯಕೀಯ ಸೌಲಭ್ಯ ವಿಸ್ತರಿಸಲು ಸರ್ಕಾರದ ಆದೇಶ ಸಂಖ್ಯೆ: ಕಾಇ 71 ಎಲ್ಎಸ್ಐ 2004, ದಿನಾಂಕ;11-08-2004ರಲ್ಲಿ ಮಂಜೂರಾತಿ ನೀಡಲಾಗಿರುತ್ತದೆ. ಆದರೆ ಈ ಪ್ರದೇಶದಲ್ಲಿ ಇದುವರೆಗೂ ಐ.ಎಂ.ಪಿ. ಪದ್ಧತಿಯನ್ನು ಅನುಷ್ಠಾನಗೊಳಿಸದೆ ಅಲ್ಲಿ ಚಿಕಿತ್ಸಾಲಯಗಳನ್ನು ಮುಂದುವರೆಸಿಕೊಂಡು ಬರಲಾಗಿರುತ್ತದೆ ಹಾಗೂ ಇಲಾಖೆಯ ಪುನರ್ ಸಂಘಟನೆ ಆದೇಶದಲ್ಲಿ ಈ ಚಿಕಿತ್ಸಾಲಯವನ್ನು ಮುಚ್ಚುವ ಪ್ರಸ್ತಾಪವಿದ್ದುದರಿಂದ ಈ ಚಿಕಿತ್ಸಾಲಯಗಳಿಗೆ ಮಂಜೂರಾದ ಹುದ್ದೆಗಳನ್ನು ಇತರೆ ಚಿಕಿತ್ಸಾಲಯಗಳಿಗೆ ಹಂಚಿಕೆ ಮಾಡಲಾಗಿದ್ದು, ಪ್ರಸ್ತುತ ಈ ಚಿಕಿತ್ಸಾಲಯಗಳಲ್ಲಿ ಯಾವುದೇ ಹುದ್ದೆಗಳು ಮಂಜೂರಾಗಿರುವುದಿಲ್ಲ ಹಾಗೂ ಕಾಲಕಾಲಿಕವಾಗಿ ಚಿಕಿತ್ಸಾಲಯಕ್ಕೆ ಅವಶ್ಯಕವಿರುವ ಸಿಬ್ಬಂದಿಗಳನ್ನು ನಿಯೋಜನೆ ಮೇರೆಗೆ ನೇಮಿಸುವ ಮುಖಾಂತರ ಈ ವಲಯದ ವಿಮಾ ರೋಗಿಗಳಿಗೆ ವೈದ್ಯಕೀಯ ಸೌಲಭ್ಯಗಳನ್ನು ವಿಸ್ತರಿಸಲಾಗುತ್ತಿದೆ.

ಕಾ.ರಾ.ವಿ. ಚಿಕಿತ್ಸಾಲಯ, ಮದ್ದೂರು ಮತ್ತು ಟಿ. ನರಸೀಪುರ ಈ ಚಿಕಿತ್ಸಾಲಯಗಳಿಗೆ ಅನುಬಂಧಿಸಲಾದ ವಿಮಾದಾರರ ಸಂಖ್ಯೆ ಹಾಗೂ ಹೊರರೋಗಿಗಳ ಸಂಖ್ಯೆ ಅಂಕಿ-ಅಂಶಗಳು ಈ ಕೆಳಕಂಡಂತಿವೆ:

| ಕ್ರ.ಸಂ. | ಚಿಕಿತ್ಸಾಲಯದ ಹೆಸರು | ವಿಮಾದಾರರ ಸಂಖ್ಯೆ | ದಿನವಹಿ ಹೊರ ರೋಗಿಗಳ ಸಂಖ್ಯೆ |
|---|---|---|---|
| 1 | ಕಾರಾವಿ ಚಿಕಿತ್ಸಾಲಯ, ಮದ್ದೂರು | 3744 | 25-30 |
| 2 | ಕಾರಾವಿ ಚಿಕಿತ್ಸಾಲಯ, ಟಿ. ನರಸೀಪುರ | 4300 | 25-30 |

ಮುಂದುವರೆದು ಕಾರಾವಿ ಚಿಕಿತ್ಸಾಲಯ ಮದ್ದೂರಿಗೆ ಸಮೀಪದ ಚಿಕಿತ್ಸಾಲಯ ಮಂಡ್ಯದಲ್ಲಿದ್ದು ಚನ್ನಪಟ್ಟಣದಿಂದ 18 ಕಿ.ಮಿ. ದೂರದಲ್ಲಿರುವುದರಿಂದ ಮದ್ದೂರಿನಲ್ಲಿ

ನಿರ್ದೇಶಕರ ಆಪ್ತ ಶಾಖೆ
ಪತ್ರ ಸಂಖ್ಯೆ ...1153/2017-2018
0 FEB 2018
ಬೆಂಗಳೂರು-560 010

ಚಿಕಿತ್ಸಾಲಯವನ್ನು ಮುಂದುವರೆಸುವುದು ಅವಶ್ಯಕವಿರುತ್ತದೆ. ಇದೇ ರೀತಿ ಕಾರಾವಿ ಚಿಕಿತ್ಸಾಲಯ ಟಿ. ನರಸೀಪುರಕ್ಕೆ ಅತಿ ಹತ್ತಿರದ ಚಿಕಿತ್ಸಾಲಯ ಕಾರಾವಿ ಚಿಕಿತ್ಸಾಲಯ, ನಂಜನಗೂಡು ಆಗಿದ್ದು, ಇದು ಟಿ. ನರಸೀಪುರದಿಂದ 35 ಕಿ.ಮಿ. ದೂರದಲ್ಲಿರುವುದರಿಂದ ಟಿ. ನರಸೀಪುರದಲ್ಲಿ ಚಿಕಿತ್ಸಾಲಯವನ್ನು ಮುಂದುವರೆಸುವುದು ಅಗತ್ಯವಾಗಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ ಕಾಇ 50 ಎಲ್ಎಸ್ಐ 2010, ದಿ: 21-09-2011 ರ ಪ್ರಕಾರ ಬೆಂಗಳೂರಿನ ಕೋಣಪ್ಪನ ಅಗ್ರಹಾರದಲ್ಲಿ ಹೊಸದಾಗಿ ಚಿಕಿತ್ಸಾಲಯವನ್ನು ಪ್ರಾರಂಭಿಸಲು ಮಂಜೂರಾತಿ ಆದೇಶವನ್ನು ಹೊರಡಿಸಿದ್ದು ಇದುವರೆವಿಗೂ ಚಿಕಿತ್ಸಾಲಯವನ್ನು ಪ್ರಾರಂಭಿಸಿರುವುದಿಲ್ಲ. ಈ ಚಿಕಿತ್ಸಾಲಯಕ್ಕೆ ಮಂಜೂರಾದ ಹುದ್ದೆಗಳ ವಿವರ ಕೆಳಕಂಡಂತಿದೆ.

| ಕ್ರ.ಸಂ. | ಪದನಾಮ | ಮಂಜೂರಾತಿ |
|---|---|---|
| 1. | ವಿಮಾ ವೈದ್ಯಾಧಿಕಾರಿ | 3 |
| 2. | ಕಛೇರಿ ಅಧೀಕ್ಷಕರು | 1 |
| 3. | ಪ್ರ.ದ.ಸ | 2 |
| 4. | ದ್ವಿ.ದ.ಸ | 3 |
| 5. | ಶುಶ್ರೂಷಕರು | 4 |
| 6. | ಫಾರ್ಮಸಿಸ್ಟ್ | 5 |
| 7. | ಗ್ರೂಪ್ ಡಿ | 7 |
| ಒಟ್ಟು | | 25 |

ಕೋಣಪ್ಪನ ಅಗ್ರಹಾರ ಚಿಕಿತ್ಸಾಲಯಕ್ಕೆ ಮಂಜೂರಾದ ಮೇಲ್ಕಂಡ ಹುದ್ದೆಗಳನ್ನು ಕಾರಾವಿ ಚಿಕಿತ್ಸಾಲಯ, ಮದ್ದೂರು ಹಾಗೂ ಟಿ. ನರಸೀಪುರ ಇಲ್ಲಿಗೆ ಕೆಳಕಂಡಂತೆ ಹುದ್ದೆಗಳನ್ನು ಸ್ಥಳಾಂತರಿಸಬಹುದಾಗಿದೆ. ಮದ್ದೂರು ಪ್ರದೇಶದಲ್ಲಿ ಹಲವಾರು ಕೈಗಾರಿಕಾ ಘಟಕಗಳು ಹೊಸದಾಗಿ ಪ್ರಾರಂಭವಾಗುತ್ತಿರುವುದರಿಂದ ಈ ಚಿಕಿತ್ಸಾಲಯಕ್ಕೆ ಹೆಚ್ಚುವರಿ ಹುದ್ದೆಗಳನ್ನು ಪ್ರಸ್ತಾಪಿಸಲಾಗಿದೆ.

| ಕ್ರ.ಸಂ. | ಪದನಾಮ | ಕಾರಾವಿ ಚಿಕಿತ್ಸಾಲಯ, ಮದ್ದೂರು | ಕಾರಾವಿ ಚಿಕಿತ್ಸಾಲಯ, ಟಿ.ನರಸೀಪುರ |
|---|---|---|---|
| 1. | ವಿಮಾ ವೈದ್ಯಾಧಿಕಾರಿ | 2 | 1 |
| 2. | ಪ್ರ.ದ.ಸ | 1 | 1 |
| 3. | ದ್ವಿ.ದ.ಸ | 1 | 2 |
| 4. | ಶುಶ್ರೂಷಕರು | 2 | 2 |
| 5. | ಫಾರ್ಮಸಿಸ್ಟ್ | 3 | 2 |
| 6. | ಗ್ರೂಪ್ ಡಿ | 4 | 3 |
| ಒಟ್ಟು | | 13 | 11 |

ಮೇಲೆ ತಿಳಿಸಿರುವ ಅಂಕಿ ಅಂಶಗಳ ಹಿನ್ನೆಲೆಯಲ್ಲಿ ಕಾರಾವಿ ಚಿಕಿತ್ಸಾಲಯ ಮದ್ದೂರು ಮತ್ತು ಕಾರಾವಿ ಚಿಕಿತ್ಸಾಲಯ ಟಿ. ನರಸೀಪುರ ಇವುಗಳಿಗೆ 3000ಕ್ಕಿಂತ ಹೆಚ್ಚಿನ ವಿಮಾದಾರರನ್ನು ಅನುಬಂಧಿಸಲಾಗಿರುವುದರಿಂದ ಕಾರಾವಿ ಚಿಕಿತ್ಸಾಲಯ ಮದ್ದೂರು ಮತ್ತು

ಕಾರಾವಿ ಚಿಕಿತ್ಸಾಲಯ ಟಿ. ನರಸೀಪುರ ಇವುಗಳನ್ನು ಪೂರ್ಣಕಾಲಿಕ ಕಾರಾವಿ ಚಿಕಿತ್ಸಾಲಯಗಳನ್ನಾಗಿ ಪರಿವರ್ತಿಸಬಹುದಾಗಿರುತ್ತದೆ ಎಂದು ತಿಳಿಸಿದ್ದಾರೆ.

ಈ ಮೇಲೆ ವಿವರಿಸಲಾದ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ ಕಾರಾವಿ ಚಿಕಿತ್ಸಾಲಯ ಮದ್ದೂರು ಮತ್ತು ಕಾರಾವಿ ಚಿಕಿತ್ಸಾಲಯ ಟಿ. ನರಸೀಪುರ ಇವುಗಳನ್ನು ಮುಂದುವರೆಸಿಕೊಂಡು ಬಂದಿದ್ದು ಇದಕ್ಕೆ ಸರ್ಕಾರದ ವತಿಯಿಂದ ಘಟನೋತ್ತರ ಮಂಜೂರಾತಿ ಆದೇಶ ಹೊರಡಿಸಲು ಹಾಗೂ ಈ ಚಿಕಿತ್ಸಾಲಯಗಳನ್ನು ಐ.ಎಂ.ಪಿ.

ಪದ್ಧತಿಯಿಂದ ಪೂರ್ಣಕಾಲಿಕ ಕಾರಾವಿ ಚಿಕಿತ್ಸಾಲಯಗಳನ್ನಾಗಿ ಪರಿವರ್ತಿಸಲು ಹಾಗೂ ಇದಕ್ಕೆ ಅವಶ್ಯಕವಾದ ಹುದ್ದೆಗಳನ್ನು ಕಾರಾವಿ ಚಿಕಿತ್ಸಾಲಯ ಕೋಣಪ್ಪನ ಅಗ್ರಹಾರದಿಂದ (Non commissioned) ಸ್ಥಳಾಂತರಿಸಲಾದ ಬಗ್ಗೆ ಸರ್ಕಾರದ ವತಿಯಿಂದ ಮಂಜೂರಾತಿ ಆದೇಶವನ್ನು ಹೊರಡಿಸುವಂತೆ ಕೋರಿರುತ್ತಾರೆ.

ಮೇಲಿನ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಕಾಇ 297 ಎಲ್‌ಎಸ್‌ಐ 2017, ದಿನಾಂಕ: 31-01-2018**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು, ಇಲಾಖೆಯ ಕಾರಾವಿ ಚಿಕಿತ್ಸಾಲಯ ಮದ್ದೂರು ಮತ್ತು ಕಾರಾವಿ ಚಿಕಿತ್ಸಾಲಯ ಟಿ. ನರಸೀಪುರ ಇವುಗಳನ್ನು ಮುಂದುವರೆಸಲು ಘಟನೋತ್ತರ ಮಂಜೂರಾತಿ ನೀಡಿದೆ ಹಾಗೂ ಈ ಚಿಕಿತ್ಸಾಲಯಗಳನ್ನು ಐ.ಎಂ.ಪಿ. ಪದ್ಧತಿಯಿಂದ ಪೂರ್ಣಕಾಲಿಕ ಕಾ.ರಾ.ವಿ. ಚಿಕಿತ್ಸಾಲಯಗಳನ್ನಾಗಿ ಪರಿವರ್ತಿಸಲು ಹಾಗೂ ಈ ಚಿಕಿತ್ಸಾಲಯಗಳಿಗೆ ಅವಶ್ಯಕವಾದ ಹುದ್ದೆಗಳನ್ನು ಕಾರಾವಿ ಚಿಕಿತ್ಸಾಲಯ ಕೋಣಪ್ಪನ ಅಗ್ರಹಾರದಿಂದ (Non commissioned) ಸ್ಥಳಾಂತರಿಸಿ ಈ ಕೆಳಕಂಡಂತೆ ಹಂಚಿಕೆ ಮಾಡಿ ಆದೇಶ ಹೊರಡಿಸಿದೆ.

| ಕ್ರ.ಸಂ. | ಪದನಾಮ | ಕಾರಾವಿ ಚಿಕಿತ್ಸಾಲಯ, ಕೋಣಪ್ಪನ ಅಗ್ರಹಾರ(Non Commissioned) ಇಲ್ಲಿಗೆ ಮಂಜೂರಾದ ಹುದ್ದೆಗಳ ಸಂಖ್ಯೆ | ಕಾ.ರಾ.ವಿ. ಚಿಕತ್ಸಾಲಯ, ಕೋಣಪ್ಪನ ಅಗ್ರಹಾರದಿಂದ ಕಾರಾವಿ ಚಿಕಿತ್ಸಾಲಯ, ಮದ್ದೂರು ಇಲ್ಲಿಗೆ ಸ್ಥಳಾಂತಿರಿಸಲಾದ ಹುದ್ದೆಗಳ ಸಂಖ್ಯೆ: | ಕಾ.ರಾ.ವಿ. ಚಿಕಿತ್ಸಾಲಯ, ಕೋಣಪ್ಪನ ಅಗ್ರಹಾರದಿಂದ ಕಾರಾವಿ ಚಿಕಿತ್ಸಾಲಯ, ಟಿ.ನರಸೀಪುರ ಇಲ್ಲಿಗೆ ಸ್ಥಳಾಂತರಿಸಲಾದ ಹುದ್ದೆಗಳ ಸಂಖ್ಯೆ |
|---|---|---|---|---|
| 1. | ವಿಮಾ ವೈದ್ಯಾಧಿಕಾರಿ | 3 | 2 | 1 |
| 2. | ಕಛೇರಿ ಅಧೀಕ್ಷಕರು | 1 | – | – |
| 3. | ಪ್ರ.ದ.ಸ | 2 | 1 | 1 |
| 4. | ದ್ವಿ.ದ.ಸ | 3 | 1 | 2 |

| | | | | |
|---|---|---|---|---|
| 5. | ಶುಶ್ರೂಷಕರು | 4 | 2 | 2 |
| 6. | ಫಾರ್ಮಸಿಸ್ಟ್ | 5 | 3 | 2 |
| 7. | ಗ್ರೂಪ್ ಡಿ | 7 | 4 | 3 |
| ಒಟ್ಟು | | 25 | 13 | 11 |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

Ramani
(ರಮಣಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಕಾರ್ಮಿಕ ಇಲಾಖೆ.
(ಕಾ.ರಾ.ವಿ.ಯೋ.ವೈ.ಸೇ)

1. ಮಹಾಲೇಖಪಾಲರು, (ಲೆಕ್ಕಪತ್ರ ಮತ್ತು ಲೆಕ್ಕ ಪರಿಶೋಧನೆ) ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು
2. ನಿರ್ದೇಶಕರು, ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು, ರಾಜಾಜಿನಗರ, ಬೆಂಗಳೂರು,
3. ಸಂಬಂಧಪಟ್ಟ ನೌಕರರಿಗೆ (ನಿರ್ದೇಶಕರು, ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ಇವರ ಮುಖಾಂತರ)
4. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಾರ್ಮಿಕ ಇಲಾಖೆ, ವಿಕಾಸಸೌಧ, ಬೆಂಗಳೂರು.
5. ಶಾಖಾ ರಕ್ಷ ಕಡತ/ಹೆಚ್ಚುವರಿ ಪ್ರತಿ.

| | | | | |
|---|---|---|---|---|
| 5. | ಶುಶ್ರೂಷಕರು | 4 | 2 | 2 |
| 6. | ಫಾರ್ಮಸಿಸ್ಟ್ | 5 | 3 | 2 |
| 7. | ಗ್ರೂಪ್ ಡಿ | 7 | 4 | 3 |
| ಒಟ್ಟು | | 25 | 13 | 11 |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

Ramani
(ರಮಣಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಕಾರ್ಮಿಕ ಇಲಾಖೆ.
(ಕಾ.ರಾ.ವಿ.ಯೋ.ವೈ.ಸೇ)

1. ಮಹಾಲೇಖಪಾಲರು, (ಲೆಕ್ಕಪತ್ರ ಮತ್ತು ಲೆಕ್ಕ ಪರಿಶೋಧನೆ) ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು
2. ನಿರ್ದೇಶಕರು, ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು, ರಾಜಾಜಿನಗರ, ಬೆಂಗಳೂರು,
3. ಸಂಬಂಧಪಟ್ಟ ನೌಕರರಿಗೆ (ನಿರ್ದೇಶಕರು, ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ಇವರ ಮುಖಾಂತರ)
4. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಾರ್ಮಿಕ ಇಲಾಖೆ, ವಿಕಾಸಸೌಧ, ಬೆಂಗಳೂರು.
5. ಶಾಖಾ ರಕ್ಷ ಕಡತ/ಹೆಚ್ಚುವರಿ ಪ್ರತಿ.

ಸಂಖ್ಯೆ: ಅಭಿವೃದ್ಧಿ/257/17-18 ದಿನಾಂಕ: 12-02-2018

## ಹಿಂ ಬ ರ ಹ

ಮೇಲಿನ ಸರ್ಕಾರದ ಆದೇಶ ಪತ್ರವನ್ನು ತಮ್ಮ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ರವಾನಿಸುತ್ತಾ, ಸ್ಕೇಲ್ ರಿಜಿಸ್ಟರ್‌ನಲ್ಲಿ ನಮೂದಿಸಿ ಮುಂದಿನ ಕ್ರಮವಹಿಸಲು ಸೂಚಿಸಿದೆ.

ನಿರ್ದೇಶಕರು,
ಕಾರಾವಿ. ಯೋಜನೆ ವೈದ್ಯಕೀಯ ಸೇವೆ.

ಗೆ, (ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.)

1. ವೈದ್ಯರು / ಸಿಬ್ಬಂದಿ / ಶುಶ್ರೂಷಕರು / ಫಾರ್ಮಸಿಸ್ಟ್ / ಗ್ರೂಪ್ ಡಿ / ಹೆಚ್‌ಆರ್‌ಎಂಎಸ್ / ಆಯವ್ಯಯ / ಪಿಎನ್ಟ್ಯಾಬು ಅಂಕಿಅಂಶ / ಇಲೆಪ ಸಂಕಲನಗಳು, ಕಾರಾವಿ ನಿರ್ದೇಶನಾಲಯ, ಬೆಂ,
2. ಸಂಬಂಧಪಟ್ಟ ಕಾರಾವಿ ಚಿಕಿತ್ಸಾಲಯಗಳು
3. ನಿರ್ದೇಶನಾಲಯದ ಎಲ್ಲಾ ಅಧಿಕಾರಿಗಳಿಗೆ ಮಾಹಿತಿಗಾಗಿ ಸಲ್ಲಿಸಿದೆ.

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಭದ್ರಾವತಿಯ ಎಂ.ಪಿ.ಎಂ.ಆವರಣದಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರಾವಿ ಚಿಕಿತ್ಸಾಲಯಕ್ಕೆ ಪ್ರತ್ಯೇಕವಾದ ಹುದ್ದೆಗಳನ್ನು ಸೃಜಿಸುವ ಬಗ್ಗೆ.

**ಓದಲಾಗಿದೆ:-** ನಿರ್ದೇಶಕರು, ಕಾರಾವಿ ಯೋ (ವೈ) ಸೇವೆಗಳು ರಾಜಾಜಿನಗರ ಬೆಂಗಳೂರು ಇವರ ಪತ್ರ ಸಂಖ್ಯೆ:ಅಭಿವೃದ್ಧಿ:35:83-84, ದಿ: 27-08-05.

**ಪ್ರಸ್ತಾವನೆ:**

ನಿರ್ದೇಶಕರು, ಕಾರಾವಿ ಇವರು ಮೇಲೆ ಓದಲಾದ ದಿ:27-08-05ರ ತಮ್ಮ ಪತ್ರದಲ್ಲಿ ದಿ:23-11-04ರಂದು ನಡೆದ ಸಭೆಯಲ್ಲಿ ಮಾನ್ಯ ಕಾರ್ಮಿಕ ಸಚಿವರು ಸೂಚಿಸಿದಂತೆ ಕಾರಾವಿ ಚಿಕಿತ್ಸಾಲಯ, ಭದ್ರಾವತಿಯ ಒಂದು ವಿಭಾಗ ದಿ:23-03-05ರಿಂದ ಎಂ.ಪಿ.ಎಂ ಆವರಣದಲ್ಲಿ ಕಾರ್ಯನಿರ್ವಹಿಸುವಂತೆ ಕ್ರಮ ಕೈಗೊಳ್ಳಲಾಗಿದ್ದು, ಈ ಚಿಕಿತ್ಸಾಲಯಕ್ಕೆ 1200 ವಿಮಾ ಕಾರ್ಡುಗಳನ್ನು ಅನುಬಂಧಿಸಲಾಗಿದೆಯೆಂದು ವರದಿ ಮಾಡಿರುತ್ತಾರೆ. ಪ್ರಸ್ತುತ ಎಂ.ಪಿ.ಎಂ. ಕೇಂದ್ರ ಕಾರ್ಖಾನೆ ಆವರಣದಲ್ಲಿ ಕಾರ್ಯನಿರ್ವಹಿಸುತ್ತಿರುವ ಚಿಕಿತ್ಸಾಲಯಕ್ಕೆ ಒಬ್ಬರು ವಿಮಾ ವೈದ್ಯಾಧಿಕಾರಿಯನ್ನು ಹಾಗೂ ಒಬ್ಬರು ಫಾರ್ಮಸಿಸ್ಟ್, ಒಬ್ಬರು ಗ್ರೂಪ್ ಡಿ ನೌಕರರನ್ನು ನಿಯೋಜಿಸಲಾಗಿದ್ದು, ಸದರಿ ಚಿಕಿತ್ಸಾಲಯದಲ್ಲಿ ಪ್ರತಿನಿತ್ಯ 120 ರಿಂದ 150 ವಿಮಾ ರೋಗಿಗಳು ಹಾಜರಾಗುತ್ತಿದ್ದು, ಕೆಲಸದ ಒತ್ತಡ ತೀವ್ರವಾಗಿರುವುದರಿಂದ ಒಬ್ಬರು ವಿಮಾ ವೈದ್ಯಾಧಿಕಾರಿಯವರಿಂದ ಚಿಕಿತ್ಸಾಲಯದ ನಿರ್ವಹಣೆ ಸಾಧ್ಯವಾಗುವುದಿಲ್ಲವೆಂದೂ, ಅಲ್ಲದೆ ತಿಂಗಳಿಗೆ 300 ರಿಂದ 400 ವೈದ್ಯಕೀಯ ವೆಚ್ಚದ ಡಿ.ಸಿ.ಬಿಲ್ಲುಗಳನ್ನು ತಯಾರಿಸಬೇಕಾಗಿದ್ದು, ಈ ಚಿಕಿತ್ಸಾಲಯಕ್ಕೆ ಪ್ರತ್ಯೇಕವಾಗಿ ಪ್ರಥಮ ದರ್ಜೆ ಸಹಾಯಕರ ಹುದ್ದೆ ಜೊತೆಯಲ್ಲಿಯೇ ಉಳಿದ ಹುದ್ದೆಗಳನ್ನು ಸೃಜಿಸುವುದು ಅಗತ್ಯವಾಗಿದೆಯೆಂದು ತಿಳಿಸಿರುತ್ತಾರೆ. ಸದರಿ ಚಿಕಿತ್ಸಾಲಯಕ್ಕೆ ಈ ಕೆಳಕಂಡ ಹುದ್ದೆಗಳ ಅವಶ್ಯಕತೆಯಿರುವುದಾಗಿ ಸಹ ತಿಳಿಸಿರುತ್ತಾರೆ.

| | | |
|---|---|---|
| 1) ವಿಮಾ ವೈದ್ಯಾಧಿಕಾರಿ | – | 2 ಹುದ್ದೆಗಳು |
| 2) ಪ್ರ.ದ.ಸಹಾಯಕರು | – | 1 ಹುದ್ದೆ |
| 3) ಫಾರ್ಮಸಿಸ್ಟ್ | – | 2 ಹುದ್ದೆಗಳು |
| 4) ಶುಶ್ರೂಷಕರು | – | 1 ಹುದ್ದೆ |
| 5) ಗ್ರೂಪ್ ಡಿ | – | 2 ಹುದ್ದೆಗಳು |

ಮೇಲೆ ಹೇಳಲಾದ ಹುದ್ದೆಗಳ ಪೈಕಿ ವಿಮಾ ವೈದ್ಯಾಧಿಕಾರಿಗಳ 2 ಹುದ್ದೆಗಳನ್ನು ಕಾರಾವಿ ಆಸ್ಪತ್ರೆ, ಮಂಗಳೂರಿನಿಂದ ಹಾಗೂ ಉಳಿದ ಎಲ್ಲಾ ಹುದ್ದೆಗಳನ್ನು ಕಾರಾವಿ ಆಸ್ಪತ್ರೆ, ಇಂದಿರಾನಗರದಿಂದ ಸ್ಥಳಾಂತರಿಸುವುದರ ಮೂಲಕ ಸೃಜಿಸಬಹುದಾಗಿದೆಯೆಂದು ಅಭಿಪ್ರಾಯ ಪಟ್ಟಿರುತ್ತಾರೆ. ಕಾರಾವಿ ಚಿಕಿತ್ಸಾಲಯ, ಭದ್ರಾವತಿಗೆ ಮಂಜೂರಾದ ಸಿಬ್ಬಂದಿಯೊಂದಿಗೆ ಎಂ.ಪಿ.ಎಂ. ಆವರಣದ ಚಿಕಿತ್ಸಾಲಯವನ್ನು ಮುಂದುವರೆಸಿಕೊಂಡು ಬರುವುದು ಸಾಧ್ಯವಾಗದ ಕಾರಣ ಎಂ.ಪಿ.ಎಂ. ಆವರಣದಲ್ಲಿ ಕಾರ್ಯನಿರ್ವಹಿಸುತ್ತಿರುವ ಚಿಕಿತ್ಸಾಲಯಕ್ಕೆ ಪ್ರತ್ಯೇಕವಾಗಿ ಹುದ್ದೆಗಳನ್ನು ಸೃಜಿಸುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ:ಕಾಇ 261 ಎಲ್ಎಸ್ಎ 2005, ಬೆಂಗಳೂರು, ದಿನಾಂಕ:18-10-2005.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಸನ್ನಿವೇಶದ ಹಿನ್ನೆಲೆಯಲ್ಲಿ ಪ್ರಸ್ತುತ ಭದ್ರಾವತಿಯ ಎಂ.ಪಿ.ಎಂ. ಕೇಂದ್ರ ಕಾರ್ಖಾನೆ ಆವರಣದಲ್ಲಿ ಕಾರ್ಯನಿರ್ವಹಿಸುತ್ತಿರುವ ಚಿಕಿತ್ಸಾಲಯಕ್ಕೆ ಈ ಕೆಳಕಂಡ ಹುದ್ದೆಗಳನ್ನು ಮಂಜೂರು ಮಾಡಲಾಗಿದೆ.

1) ವಿಮಾ ವೈದ್ಯಾಧಿಕಾರಿ – 2 ಹುದ್ದೆಗಳು
2) ಪ್ರ.ದ.ಸಹಾಯಕರು – 1 ಹುದ್ದೆ
3) ಫಾರ್ಮಸಿಸ್ಟ್ – 2 ಹುದ್ದೆಗಳು
4) ಶುಶ್ರೂಷಕರು – 1 ಹುದ್ದೆ
5) ಗ್ರೂಪ್ ಡಿ – 2 ಹುದ್ದೆಗಳು

ಮೇಲೆ ಹೇಳಲಾದ ವಿಮಾ ವೈದ್ಯಾಧಿಕಾರಿಗಳ 2 ಹುದ್ದೆಗಳನ್ನು ಕಾರಾವಿ ಆಸ್ಪತ್ರೆ, ಮಂಗಳೂರಿನಿಂದ ಹಾಗೂ ಉಳಿದ ಎಲ್ಲಾ ಹುದ್ದೆಗಳನ್ನು ಕಾರಾವಿ ಆಸ್ಪತ್ರೆ, ಇಂದಿರಾನಗರದಿಂದ ಭದ್ರಾವತಿ ಎಂ.ಪಿ.ಎಂ.ಆವರಣದ ಕಾರಾವಿ ಚಿಕಿತ್ಸಾಲಯಕ್ಕೆ ಸ್ಥಳಾಂತರಿಸಲಾಗಿದೆ.

ಈ ಆದೇಶವನ್ನು ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 96, ದಿ:10-07-96ರ ಅನುಬಂಧದಲ್ಲಿನ ಐಟಂ 53ರಲ್ಲಿ ಸರ್ಕಾರದ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಲಾದ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

19/10/05

(ಹೆಚ್.ವಿಶ್ವನಾಥ)
ಸರ್ಕಾರದ ಅಧೀನ ಕಾರ್ಯದರ್ಶಿ
ಕಾರ್ಮಿಕ ಇಲಾಖೆ.

19/x

ಗೆ:

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ನಿರ್ದೇಶಕರು, ಕಾರಾವಿ ಯೋಜನೆ (ವೈದ್ಯಕೀಯ) ಸೇವೆಗಳು, ರಾಜಾಜಿನಗರ ಬೆಂಗಳೂರು.
3) ವೈದ್ಯಕೀಯ ಅಧೀಕ್ಷಕರು, ಕಾರಾವಿ ಆಸ್ಪತ್ರೆ, ಮಂಗಳೂರು/ಇಂದಿರಾನಗರ,ಬೆಂಗಳೂರು.
4) ಪ್ರಾಂತೀಯ ನಿರ್ದೇಶಕರು, ಕಾರಾವಿ ನಿಗಮ, ನಂ.10, ಬಿನ್ನಿಫೀಲ್ಡ್ಸ್, ಬಿನ್ನಿಪೇಟೆ, ಬೆಂಗಳೂರು-23.
5) ಮಾನ್ಯ ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ.
6) ಶಾಖಾ ರಕ್ಷಕ ಕಡತ : ಹೆಚ್ಚುವರಿ ಪ್ರತಿ.

62

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ಇಲಾಖೆಗೆ 30 ಹಿರಿಯ ಫಾರ್ಮಾಸಿಸ್ಟ್ ಹುದ್ದೆಯನ್ನು ಸೃಜಿಸಿ, ಹಂಚಿಕೆ ಮಾಡುವ ಬಗ್ಗೆ.

**ಓದಲಾಗಿದೆ:** 1. ಸರ್ಕಾರದ ಆದೇಶ ಸಂಖ್ಯೆ: ಕಾಇ 59 ಎಲ್‌ಎಸ್‌ಐ 2013, ದಿನಾಂಕ:27-12-2010

2. ಸರ್ಕಾರದ ಆದೇಶ ಸಂಖ್ಯೆ: ಕಾಇ 134 ಎಲ್‌ಎಸ್‌ಐ 2013, ದಿನಾಂಕ: 26-09-2016.

3. ಸರ್ಕಾರದ ಸೇರ್ಪಡೆ ಆದೇಶ ಸಂಖ್ಯೆ: ಕಾಇ 134 ಎಲ್‌ಎಸ್‌ಐ 2013, ದಿನಾಂಕ: 29-08-2017.

4. ನಿರ್ದೇಶಕರು, ಕಾ.ರಾವಿ.ಯೋ.ಸೇವೆಗಳು, ಬೆಂಗಳೂರು ಇವರ ಪತ್ರ ಸಂಖ್ಯೆ: ಅಭಿವೃದ್ಧಿ/01/16-17, ದಿನಾಂಕ: 15-12-2017 ಮತ್ತು 11-01-2018.

********

**ಪ್ರಸ್ತಾವನೆ:-**

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ಇಲಾಖೆಗೆ ಮಂಜೂರಾಗಿರುವ 302 ಫಾರ್ಮಾಸಿಸ್ಟ್ ಹುದ್ದೆಗಳಲ್ಲಿ 55 ಹುದ್ದೆಗಳನ್ನು ಹಿರಿಯ ಫಾರ್ಮಾಸಿಸ್ಟ್ ಹುದ್ದೆಗಳೆಂದು ಉನ್ನತೀಕರಿಸಲು ಮಂಜೂರಾತಿ ನೀಡಲಾಗಿರುತ್ತದೆ.

ಮೇಲೆ ಕ್ರಮ ಸಂಖ್ಯೆ (2) ಮತ್ತು (3)ರಲ್ಲಿ ಓದಲಾದ ಸರ್ಕಾರದ ಆದೇಶಗಳಲ್ಲಿ ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳ ಇಲಾಖೆಗೆ ಮಂಜೂರಾಗಿರುವ ಫಾರ್ಮಸಿಸ್ಟ್ ಹುದ್ದೆಗಳಲ್ಲಿ 30 ಫಾರ್ಮಸಿಸ್ಟ್ ಹುದ್ದೆಗಳನ್ನು ಹಿರಿಯ ಫಾರ್ಮಸಿಸ್ಟ್ ಹುದ್ದೆಗೆ ಉನ್ನತೀಕರಿಸಿ, ಕಾರ್ಮಿಕರ ರಾಜ್ಯ ವಿಮಾ ಆಸ್ಪತ್ರೆ ಮತ್ತು ಕಾರ್ಮಿಕರ ರಾಜ್ಯ ವಿಮಾ ಚಿಕಿತ್ಸಾಲಯಗಳಿಗೆ ಹಂಚಿಕೆ ಮಾಡಲಾಗಿದೆ. ಮೇಲೆ ಕ್ರಮ ಸಂಖ್ಯೆ (4)ರಲ್ಲಿ ಓದಲಾದ ಪತ್ರದಲ್ಲಿ ಹೈದ್ರಾಬಾದ್ ಕರ್ನಾಟಕ ಪ್ರಾಂತ್ಯದಲ್ಲಿ 30 ಹಿರಿಯ ಫಾರ್ಮಸಿಸ್ಟ್ ಹುದ್ದೆಗಳನ್ನು ಉನ್ನತೀಕರಿಸಿ, ಅನುಬಂಧ-1 ಮತ್ತು 2ರಲ್ಲಿರುವಂತೆ ಹಂಚಿಕೆ ಮಾಡಿ ಪರಿಷ್ಕೃತ ಆದೇಶ ಹೊರಡಿಸುವಂತೆ ನಿರ್ದೇಶಕರು, ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ಇವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಾವಳಿ 2007ರಂತೆ ಇಲ್ಲಿಯವರೆಗೆ 41 ಫಾರ್ಮಸಿಸ್ಟ್ ಹುದ್ದೆಗಳನ್ನು ವಿವಿಧ ಚಿಕಿತ್ಸಾಲಯಗಳಿಗೆ ಸೃಜಿಸಲಾಗಿರುತ್ತದೆ. ಹೊಸದಾಗಿ ಮಂಜೂರಾದ 41 ಹುದ್ದೆಗಳಿಗೆ 1:4 ಅನುಪಾತದಲ್ಲಿ 10 ಹಿರಿಯ ಫಾರ್ಮಸಿಸ್ಟ್ ಅವಶ್ಯಕವಾಗಿದ್ದು, ಒಟ್ಟಾರೇ ಇಲಾಖೆಗೆ 30 ಹಿರಿಯ ಫಾರ್ಮಸಿಸ್ಟ್ ಹುದ್ದೆಗಳು ಅವಶ್ಯಕತೆಯಿರುವುದರಿಂದ ಸದರಿ ಹುದ್ದೆಗಳನ್ನು ಹೊಸದಾಗಿ ಸೃಜಿಸುವ ಬಗ್ಗೆ ನಿರ್ಧರಿಸಿ, ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕಾಇ 134 ಎಲ್‌ಎಸ್‌ಐ 2013, ಬೆಂಗಳೂರು, ದಿನಾಂಕ:30-01-2018**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ಇಲಾಖೆಗೆ ಮಂಜೂರಾಗಿರುವ ಫಾರ್ಮಸಿಸ್ಟ್ ಹುದ್ದೆಗಳಲ್ಲಿ 30 ಹುದ್ದೆಗಳನ್ನು ಹಿರಿಯ ಫಾರ್ಮಸಿಸ್ಟ್ ಹುದ್ದೆಗೆ ಉನ್ನತೀಕರಿಸಿ ಮಂಜೂರಾತಿ ನೀಡಿ ಹೊರಡಿಸಲಾದ ಸರ್ಕಾರದ ಆದೇಶ ಸಂಖ್ಯೆ: ಕಾಇ 134 ಎಲ್‌ಎಸ್‌ಐ 2013, ದಿನಾಂಕ: 26-09-2016 ಮತ್ತು ಸೇರ್ಪಡೆ ಆದೇಶ ಸಂಖ್ಯೆ: ಕಾಇ 134 ಎಲ್‌ಎಸ್‌ಐ 2013, ದಿನಾಂಕ: 29-08-2017ರ ಆದೇಶಗಳನ್ನು ಹಿಂಪಡೆಯಲಾಗಿದೆ.

......2

1164 17 18
02 FEB 2018

ಹೈದ್ರಾಬಾದ್ ಕರ್ನಾಟಕ ಪ್ರಾಂತ್ಯದಲ್ಲಿಯೂ ಒಳಗೊಂಡಂತೆ ಇಲಾಖೆಗೆ ಮಂಜೂರಾಗಿರುವ ಫಾರ್ಮಸಿಸ್ಟ್ ಹುದ್ದೆಗಳಲ್ಲಿ 30 ಫಾರ್ಮಸಿಸ್ಟ್ ಹುದ್ದೆಗಳನ್ನು ಹಿರಿಯ ಫಾರ್ಮಸಿಸ್ಟ್ ಹುದ್ದೆಗೆ ಉನ್ನತೀಕರಿಸಿ, ಈ ಹುದ್ದೆಗಳನ್ನು ಇದರೊಂದಿಗೆ ಲಗತ್ತಿಸಿರುವ ಅನುಬಂಧ-1 ಮತ್ತು 2 ರಲ್ಲಿರುವಂತೆ ಕಾರ್ಮಿಕರ ರಾಜ್ಯ ವಿಮಾ ಆಸ್ಪತ್ರೆ ಮತ್ತು ಕಾರ್ಮಿಕರ ರಾಜ್ಯ ವಿಮಾ ಚಿಕಿತ್ಸಾಲಯಗಳಿಗೆ ಹಂಚಿಕೆ ಮಾಡಿ ಪರಿಷ್ಕೃತ ಆದೇಶ ಹೊರಡಿಸಲಾಗಿದೆ.

ಈ ಉನ್ನತೀಕರಣದಿಂದ ಉಂಟಾಗುವ ವೆಚ್ಚದ 87.5% ರಷ್ಟು ಕಾರ್ಮಿಕ ರಾಜ್ಯ ವಿಮಾ ನಿಗಮವು ಭರಿಸುವುದು ಹಾಗೂ 12.5% ರಷ್ಟು ಹೆಚ್ಚಳವನ್ನು ರಾಜ್ಯ ಸರ್ಕಾರ ಭರಿಸ ತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

Ramani

(ರಮಣಿ)
ಪೀಠಾಧಿಕಾರಿ-5
ಕಾರ್ಮಿಕ ಇಲಾಖೆ.
[ಕಾ.ರಾ.ವಿ.ಯೋ.ವೈ ಸೇವೆಗಳು]

ಪ್ರತಿಗಳು:-

1) ಪ್ರಧಾನ ಮಹಾಲೇಖಪಾಲರು (ಲೆಕ್ಕಪತ್ರ ಮತ್ತು ಲೆಕ್ಕ ಪರಿಶೋಧನೆ) ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂ:5329, ಬೆಂಗಳೂರು-1.
2) ನಿರ್ದೇಶಕರು,ಕಾ.ರಾ.ವಿ.ವೈ.ಸೇವೆಗಳ ನಿರ್ದೇಶನಾಲಯ, ರಾಜಾಜಿನಗರ, ಬೆಂಗಳೂರು.
3) ಸರ್ಕಾರದ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಕಾರ್ಮಿಕ ಇಲಾಖೆ.
4) ಶಾಖಾ ರಕ್ಷ ಕಡತ/ಹೆಚ್ಚುವರಿ ಪ್ರತಿ.

## ಅನುಬಂಧ-1

### ಕಾರಾವಿ ಆಸ್ಪತ್ರೆಗಳಿಗೆ ಹಂಚಿಕೆ ಮಾಡಿರುವ ಹಿರಿಯ ಫಾರ್ಮಸಿಸ್ಟ್ ಹುದ್ದೆಗಳು

| ಕ್ರ.ಸಂ | ಕಾರಾವಿ ನಿರ್ದೇಶನಾಲಯ/ಆಸ್ಪತ್ರೆ | ಆಸ್ಪತ್ರೆಗಳ ವರ್ಗೀಕರಣ | ಹಾಲಿ ಇರುವ ಫಾರ್ಮಸಿಸ್ಟ್ ಹುದ್ದೆಗಳ ಸಂಖ್ಯೆ | ಹಾಲಿ ಇರುವ ಹಿರಿಯ ಫಾರ್ಮಸಿಸ್ಟ್ ಹುದ್ದೆಗಳ ಸಂಖ್ಯೆ | ಅವಶ್ಯಕವಿರುವ ಹಿರಿಯ ಫಾರ್ಮಸಿಸ್ಟ್ ಹುದ್ದೆಗಳ ಸಂಖ್ಯೆ |
|---|---|---|---|---|---|
| 1 | ಕಾರಾವಿ ಆಸ್ಪತ್ರೆ ಇಂದಿರಾನಗರ | 300 ಹಾಸಿಗೆಗಳ ಆಸ್ಪತ್ರೆ | 16 | 4 | 2 |
| 2 | ಕಾರಾವಿ ಆಸ್ಪತ್ರೆ ಬೆಳಗಾವಿ | 50 ಹಾಸಿಗೆಗಳ ಆಸ್ಪತ್ರೆ | 9 | 2 | 1 |
| 3 | ಕಾರಾವಿ ಆಸ್ಪತ್ರೆ ಹುಬ್ಬಳ್ಳಿ | 50 ಹಾಸಿಗೆಗಳ ಆಸ್ಪತ್ರೆ | 10 | 2 | 1 |
| 4 | ಕಾರಾವಿ ಆಸ್ಪತ್ರೆ ಮೈಸೂರು | 100 ಹಾಸಿಗೆಗಳ ಆಸ್ಪತ್ರೆ | 11 | 2 | 1 |
| 5 | ಕಾರಾವಿ ಆಸ್ಪತ್ರೆ ದಾವಣಗೆರೆ | 50 ಹಾಸಿಗೆಗಳ ಆಸ್ಪತ್ರೆ | 9 | 2 | 1 |
| 6 | ಕಾರಾವಿ ಆಸ್ಪತ್ರೆ ಮಂಗಳೂರು | 100 ಹಾಸಿಗೆಗಳ ಆಸ್ಪತ್ರೆ | 9 | 2 | 1 |
| | | | ಒಟ್ಟು ಹುದ್ದೆಗಳು | 14 | 7 |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಹಾಗೂ ಅವರ ಹೆಸರಿನಲ್ಲಿ.

Ramani
(ರಮಣಿ)
ಪೀಠಾಧಿಕಾರಿ-5
ಕಾರ್ಮಿಕ ಇಲಾಖೆ,
(ಕಾರಾವಿ ಯೋ. ವೈ. ಸೇವೆಗಳು)

## ಅನುಬಂಧ-2

### ಕಾರಾವಿ ಚಿಕಿತ್ಸಾಲಯಗಳಿಗೆ ಹಂಚಿಕೆ ಮಾಡಿರುವ ಹಿರಿಯ ಫಾರ್ಮಸಿಸ್ಟ್ ಹುದ್ದೆಗಳು

| ಕ್ರ.ಸಂ | ಕಾರಾವಿ ಚಿಕಿತ್ಸಾಲಯಗಳ ಹೆಸರು | ಅನುಬಂಧಿಸಲಾದ ವಿಮಾದಾರರ ಸಂಖ್ಯೆ | ದಿನವಹಿ ಹೊರ ರೋಗಿಗಳ ಸಂಖ್ಯೆ | ಹಾಲಿ ಇರುವ ಫಾರ್ಮಸಿಸ್ಟ್ ಹುದ್ದೆಗಳ ಸಂಖ್ಯೆ | ಹಾಲಿ ಇರುವ ಹಿರಿಯ ಫಾರ್ಮಸಿಸ್ಟ್ ಹುದ್ದೆಗಳ ಸಂಖ್ಯೆ | ಅವಶ್ಯಕವಿರುವ ಹಿರಿಯ ಫಾರ್ಮಸಿಸ್ಟ್ ಹುದ್ದೆಗಳ ಸಂಖ್ಯೆ |
|---|---|---|---|---|---|---|
| 1 | ಬನಶಂಕರಿ | 10500 | 80 | 3 | 0 | 1 |
| 2 | ಕೆಂಗೇರಿ | 21000 | 104 | 2 | 0 | 1 |
| 3 | ಕೋಣನಕುಂಟೆ | 10500 | 110 | 2 | 0 | 1 |
| 4 | ಕೆ.ಆರ್ ಪುರಂ-1 | 16400 | 108 | 4 | 0 | 1 |
| 5 | ಕೆ.ಆರ್ ಪುರಂ-2 (ಎನ್.ಜಿ.ಎಫ್) | 13500 | 102 | 3 | 0 | 1 |
| 6 | ವೈಟ್ ಫೀಲ್ಡ್ | 9100 | 95 | 3 | 0 | 1 |
| 7 | ಸಿಂಗಸಂದ್ರ | 11000 | 102 | 2 | 0 | 1 |
| 8 | ಶೇಷಾದ್ರಿಪುರಂ | 8000 | 25 | 2 | 0 | 1 |
| 9 | ಪೀರನವಾಡಿ ಬೆಳಗಾವಿ | 3767 | 80 | 2 | 0 | 1 |
| 10 | ಜಾಲಹಳ್ಳಿ | 9010 | 135 | 3 | 0 | 1 |
| 11 | ವಿಜಯನಗರ | 15000 | 250 | 2 | 0 | 1 |
| 12 | ವಾಡಿ | 3236 | 129 | 2 | 0 | 1 |
| 13 | ಲಗ್ಗೆರೆ | 35000 | 300 | 5 | 0 | 1 |
| 14 | ಬೆಳವಾಡಿ | 12000 | 70 | 2 | 0 | 1 |
| 15 | ಮೈಸೂರು ಕೇಂದ್ರ | 12235 | 104 | 2 | 0 | 1 |
| 16 | ಉಡುಪಿ | 11675 | 87 | 2 | 0 | 1 |
| 17 | ಮಾದನಾಯಕನಹಳ್ಳಿ | 35000 | 300 | 5 | 0 | 1 |
| 18 | ಗದಗ | 4122 | 60 | 2 | 0 | 1 |
| 19 | ಬಳ್ಳಾರಿ | 4511 | 60 | 2 | 0 | 1 |
| 20 | ಶಿವಮೊಗ್ಗ | 8932 | 150 | 2 | 0 | 1 |
| 21 | ಶಹಬಾದ್ | 925 | 22 | 1 | 0 | 1 |
| 22 | ಕೆ.ಬಿ.ಬಡಾವಣೆ | 20000 | 200 | 2 | 0 | 1 |
| 23 | ಕೊಪ್ಪಳ | 9000 | 40 | 1 | 0 | 1 |
| | | | | ಒಟ್ಟು ಹುದ್ದೆಗಳು | | 23+7 = 30 |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಹಾಗೂ ಅವರ ಹೆಸರಿನಲ್ಲಿ.

Ramani
(ರಮಣಿ)
ಪೀಠಾಧಿಕಾರಿ-5
ಕಾರ್ಮಿಕ ಇಲಾಖೆ,
(ಕಾರಾವಿಯೋ.ವೈ.ಸೇವೆಗಳು)

ಹೈದ್ರಾಬಾದ್ ಕರ್ನಾಟಕ ಪ್ರಾಂತ್ಯದಲ್ಲಿಯೂ ಒಳಗೊಂಡಂತೆ ಇಲಾಖೆಗೆ ಮಂಜೂರಾಗಿರುವ ಫಾರ್ಮಸಿಸ್ಟ್ ಹುದ್ದೆಗಳಲ್ಲಿ 30 ಫಾರ್ಮಸಿಸ್ಟ್ ಹುದ್ದೆಗಳನ್ನು ಹಿರಿಯ ಫಾರ್ಮಸಿಸ್ಟ್ ಹುದ್ದೆಗೆ ಉನ್ನತೀಕರಿಸಿ, ಈ ಹುದ್ದೆಗಳನ್ನು ಇದರೊಂದಿಗೆ ಲಗತ್ತಿಸಿರುವ ಅನುಬಂಧ-1 ಮತ್ತು 2 ರಲ್ಲಿರುವಂತೆ ಕಾರ್ಮಿಕರ ರಾಜ್ಯ ವಿಮಾ ಆಸ್ಪತ್ರೆ ಮತ್ತು ಕಾರ್ಮಿಕರ ರಾಜ್ಯ ವಿಮಾ ಚಿಕಿತ್ಸಾಲಯಗಳಿಗೆ ಹಂಚಿಕೆ ಮಾಡಿ ಪರಿಷ್ಕೃತ ಆದೇಶ ಹೊರಡಿಸಲಾಗಿದೆ.

ಈ ಉನ್ನತೀಕರಣದಿಂದ ಉಂಟಾಗುವ ವೆಚ್ಚದ 87.5% ರಷ್ಟು ಕಾರ್ಮಿಕ ರಾಜ್ಯ ವಿಮಾ ನಿಗಮವು ಭರಿಸುವುದು ಹಾಗೂ 12.5% ರಷ್ಟು ಹೆಚ್ಚಳವನ್ನು ರಾಜ್ಯ ಸರ್ಕಾರ ಭರಿಸ ತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
Ramani
(ರಮಣಿ)
ಪೀಠಾಧಿಕಾರಿ-5
ಕಾರ್ಮಿಕ ಇಲಾಖೆ.
(ಕಾ.ರಾ.ವಿ.ಯೋ.ವೈ ಸೇವೆಗಳು)

<u>ಪ್ರತಿಗಳು:-</u>

1) ಪ್ರಧಾನ ಮಹಾಲೇಖಪಾಲರು (ಲೆಕ್ಕಪತ್ರ ಮತ್ತು ಲೆಕ್ಕ ಪರಿಶೋಧನೆ) ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂ:5329, ಬೆಂಗಳೂರು-1.
2) ನಿರ್ದೇಶಕರು,ಕಾ.ರಾ.ವಿ.ವೈ.ಸೇವೆಗಳ ನಿರ್ದೇಶನಾಲಯ, ರಾಜಾಜಿನಗರ, ಬೆಂಗಳೂರು.
3) ಸರ್ಕಾರದ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಕಾರ್ಮಿಕ ಇಲಾಖೆ.
4)ಶಾಖಾ ರಕ್ಷ ಕಡತ/ಹೆಚ್ಚುವರಿ ಪ್ರತಿ.

ಸಂಖ್ಯೆ: ಅಭಿವೃದ್ಧಿ/01/16-17 ದಿನಾಂಕ: 12-02-2018

## ಹಿಂ ಬ ರ ಹ

ಮೇಲಿನ ಸರ್ಕಾರದ ಆದೇಶ ಪತ್ರವನ್ನು ತಮ್ಮ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ರವಾನಿಸುತ್ತಾ, ಸ್ಕೇಲ್ ರಿಜಿಸ್ಟರ್‌ನಲ್ಲ ನಮೂದಿಸಿ ಮುಂದಿನ ಕ್ರಮವಹಿಸಲು ಸೂಚಿಸಿದೆ.

17/2
ನಿರ್ದೇಶಕರು,
ಕಾರಾವಿ. ಯೋಜನೆ ವೈದ್ಯಕೀಯ ಸೇವೆ.

ಗೆ, (ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.)
1. ಫಾರ್ಮಸಿಸ್ಟ್ ಸಂಕಲನ / ಹೆಚ್‌ಆರ್‌ಎಂಎಸ್ ಸಂಕಲನ / ಆಯವ್ಯಯ ಸಂಕಲನ, ಕಾರಾವಿ ನಿರ್ದೇಶನಾಲಯ, ಬೆಂ.
2. ಸಂಬಂಧಪಟ್ಟ ಕಾರಾವಿ ಆಸ್ಪತ್ರೆಗಳು / ಚಿಕಿತ್ಸಾಲಯಗಳು
3. ನಿರ್ದೇಶನಾಲಯದ ಎಲ್ಲಾ ಅಧಿಕಾರಿಗಳಗೆ ಮಾಹಿತಿಗಾಗಿ ಸಲ್ಲಿಸಿದೆ.

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ಇಲಾಖೆಯ ಕಾ.ರಾ.ವಿ. ಚಿಕಿತ್ಸಾಲಯ, ಬೃಂದಾವನ, ಮೈಸೂರು, ಇಲ್ಲಿಗೆ ಕಛೇರಿ ಅಧೀಕ್ಷಕರ ಹುದ್ದೆಯನ್ನು ಸ್ಥಳಾಂತರಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ: ಕಾಇ 50 ಎಲ್‌ಎಸ್‌ಐ 2010, ದಿನಾಂಕ: 21-09-2011.

2) ಸರ್ಕಾರದ ಆದೇಶ ಸಂಖ್ಯೆ: ಕಾಇ 297 ಎಲ್‌ಎಸ್‌ಐ 2017, ದಿನಾಂಕ: 31-01-2018

3) ನಿರ್ದೇಶಕರು, ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ಇವರ ಪತ್ರ ಸಂಖ್ಯೆ: ಅಭಿವೃದ್ಧಿ/231/17-18, ದಿನಾಂಕ: 22-01-2018

********

ಪ್ರಸ್ತಾವನೆ:-

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ 10,000ಕ್ಕೂ ಹೆಚ್ಚು ವಿಮಾದಾರರನ್ನು ಅನುಬಂಧಿಸಲಾದ ಚಿಕಿತ್ಸಾಲಯಗಳನ್ನು ವಿಭಜಿಸಿ ಹೊಸ ಚಿಕಿತ್ಸಾಲಯಗಳನ್ನು ಪ್ರಾರಂಭಿಸಲು ಆದೇಶ ಹೊರಡಿಸಲಾಗಿರುತ್ತದೆ. ಅದರಂತೆ, ಕಾ.ರಾ.ವಿ ಚಿಕಿತ್ಸಾಲಯವನ್ನು ಕೋಣಪ್ಪನ ಅಗ್ರಹಾರದಲ್ಲಿ ಪ್ರಾಂಭಿಸಿರುವುದಿಲ್ಲ. ಈ ಚಿಕಿತ್ಸಾಲಯಕ್ಕೆ ಸೃಜಿಸಲಾದ ಹುದ್ದೆಗಳಲ್ಲಿ ಕಛೇರಿ ಅಧಿಕ್ಷಕರ ಹುದ್ದೆ ಹೊರತುಪಡಿಸಿ ಉಳಿದ ಹುದ್ದೆಗಳನ್ನು ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಸರ್ಕಾರದ ಅದೇಶದಲ್ಲಿ ಕಾ.ರಾ.ವಿ ಚಿಕಿತ್ಸಾಲಯ ಮದ್ದೂರು ಹಾಗೂ ಕಾರಾವಿ ಚಿಕಿತ್ಸಾಲಯ ಟಿ.ನರಸೀಪುರಕ್ಕೆ ಸ್ಥಳಾಂತರಿಸಲಾಗಿದೆ.

ಕಾರಾವಿ ಚಿಕಿತ್ಸಾಲಯ ಬೃಂದಾವನ, ಮೈಸೂರು ಜಿಲ್ಲೆ ಇಲ್ಲಿಗೆ 20.278 ವಿಮಾದಾರರನ್ನು ಅನುಬಂಧಿಸಲಾಗಿದ್ದು ಇಲ್ಲಿ ದಿನವಹಿ 400-450 ಸರಾಸರಿ ಹೊರ ರೋಗಿಗಳ ಚಿಕಿತ್ಸೆ ಪಡೆಯುತ್ತಿದ್ದು ಇಲ್ಲಿನ ವಹಿವಾಟು ವಾರ್ಷಿಕ ರೂ.12-14 ಕೋಟಿಯಾಗಿರುತ್ತದೆ. ಸದರಿ ಚಿಕಿತ್ಸಾಲಯಕ್ಕೆ ಆಡಳಿತಾತ್ಮಕ ಹಿತದೃಷ್ಟಿಯಿಂದ ಒಂದು ಕಛೇರಿ ಅಧೀಕ್ಷಕರು ಹುದ್ದೆ ಸೃಜಿಸುವುದು ಅತಿ ಅವಶ್ಯಕವಾಗಿರುತ್ತದೆ. ಈ ಹಿನ್ನಲೆಯಲ್ಲಿ ಕಾರಾವಿ ಚಿಕಿತ್ಸಾಲಯ ಕೋಣಪ್ಪನ ಅಗ್ರಹಾರ ಇಲ್ಲಿಗೆ ಸೃಜಿಸಲಾದ ಒಂದು ಕಛೇರಿ ಅಧೀಕ್ಷಕರ ಹುದ್ದೆಯನ್ನು ಕಾರಾವಿ ಚಿಕಿತ್ಸಾಲಯ ಬೃಂದಾವನ, ಮೈಸೂರು ಜಿಲ್ಲೆ ಇಲ್ಲಿಗೆ ಆಡಳಿತಾತ್ಮಕ ಹಿತದೃಷ್ಟಿಯಿಂದ ಸ್ಥಳಾಂತರಿಸಿ ಸೃಜಿಸಲು ಸರ್ಕಾರದ ಮಂಜೂರಾತಿ ನೀಡುವಂತೆ ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಪತ್ರವಲ್ಲಿ ನಿರ್ದೇಶಕರು, ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ಇವರು ಕೋರಿರುತ್ತಾರೆ.

....2

ನಿರ್ದೇಶಕರು, ಕಾ.ರಾ.ವಿ.ಯೋ.ವೈ.ಸೇ ಇವರ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಕಾಇ 297 ಎಲ್‌ಎಸ್‌ಐ 2017, ದಿನಾಂಕ: 27-04-2018**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು, ಇಲಾಖೆಯ ಕಾ.ರಾ.ವಿ ಚಿಕಿತ್ಸಾಲಯ, ಕೋಣಪ್ಪನ ಅಗ್ರಹಾರ, ಇಲ್ಲಿಗೆ ಸೃಜಿಸಲಾದ ಒಂದು ಕಛೇರಿ ಅಧೀಕ್ಷಕರ ಹುದ್ದೆಯನ್ನು ಕಾ.ರಾ.ವಿ ಚಿಕಿತ್ಸಾಲಯ ಬೃಂದಾವನ, ಮೈಸೂರು ಜಿಲ್ಲೆ, ಇಲ್ಲಿಗೆ ಆಡಳಿತಾತ್ಮಕ ಹಿತದೃಷ್ಟಿಯಿಂದ ಸ್ಥಳಾಂತರಿಸಿ ಆದೇಶಿಸಿದೆ.

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ**
**ಮತ್ತು ಅವರ ಹೆಸರಿನಲ್ಲಿ,**

Ramani
**(ರಮಣಿ)**
**ಪೀಠಾಧಿಕಾರಿ-5**
**ಕಾರ್ಮಿಕ ಇಲಾಖೆ.**
**(ಕಾ.ರಾ.ವಿ.ಯೋ.ವೈ.ಸೇ)**

**ಇವರಿಗೆ:**

1. ಮಹಾಲೇಖಪಾಲರು, (ಲೆಕ್ಕಪತ್ರ ಮತ್ತು ಲೆಕ್ಕ ಪರಿಶೋಧನೆ) ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು
2. ನಿರ್ದೇಶಕರು, ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು, ರಾಜಾಜಿನಗರ, ಬೆಂಗಳೂರು,
3. ಸಂಬಂಧಪಟ್ಟ ನೌಕರರಿಗೆ (ನಿರ್ದೇಶಕರು, ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ಇವರ ಮುಖಾಂತರ)
4. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಾರ್ಮಿಕ ಇಲಾಖೆ, ವಿಕಾಸಸೌಧ, ಬೆಂಗಳೂರು.
5. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

ನಿರ್ದೇಶಕರು
130
- 9 MAY 20[illegible]

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಕಾರಾವಿ ನಿರ್ದೇಶನಾಲಯಕ್ಕೆ ಮಂಜೂರಾಗಿರುವ 02 ಲೆಕ್ಕ ಪರಿಶೋಧನಾಧಿಕಾರಿಗಳ ಹುದ್ದೆಯ ಪೈಕಿ ಒಂದು ಹುದ್ದೆಯನ್ನು ಸಹಾಯಕ ಆಡಳಿತಾಧಿಕಾರಿ ಹುದ್ದೆಯಾಗಿ ಪರಿವರ್ತಿಸುವ ಬಗ್ಗೆ.

ಓದಲಾಗಿದೆ:- 1) ನಿರ್ದೇಶಕರು, ಕಾರಾವಿ ಯೋ (ವೈ) ಸೇವೆಗಳು ಇವರ ಪತ್ರ ಸಂಖ್ಯೆ:ಅಭಿವೃದ್ಧಿ:159:2003-04, ದಿನಾಂಕ:27-01-2004.

2) ನಿರ್ದೇಶಕರು ಕಾರಾವಿ ಯೋ (ವೈ) ಸೇವೆಗಳು ಇವರ ಪತ್ರ ಸಂಖ್ಯೆ:ಅಭಿವೃದ್ಧಿ:207:97-98, ದಿನಾಂಕ:23-02-2004 ಮತ್ತು 23-12-2005.

ಪ್ರಸ್ತಾವನೆ:-

ನಿರ್ದೇಶಕರು, ಕಾರಾವಿ ಯೋಜನೆ (ವೈ) ಸೇವೆಗಳು ಇವರು ಮೇಲೆ (2)ರಲ್ಲಿ ಓದಲಾದ ದಿನಾಂಕ:23-12-2005ರ ತಮ್ಮ ಪತ್ರದಲ್ಲಿ ರಾಜ್ಯದಲ್ಲಿ 7,56,150 ವಿಮಾದಾರರಿಗೆ ಹಾಗೂ ಅಂದಾಜು 40.00 ಲಕ್ಷ ಅವರ ಕುಟುಂಬದವರಿಗೆ 7 ಕಾರಾವಿ ಆಸ್ಪತ್ರೆ, 102 ಪೂರ್ಣ ಕಾಲಿಕ ಕಾರಾವಿ ಚಿಕಿತ್ಸಾಲಯ ಹಾಗೂ 1 ರೋಗಪತ್ತೆ ಹಚ್ಚುವ ಕೇಂದ್ರದ ಮೂಲಕ ಪೂರ್ಣ ಪ್ರಮಾಣದ ವೈದ್ಯಕೀಯ ಸೌಲಭ್ಯವನ್ನು ವಿಸ್ತರಿಸಲಾಗುತ್ತಿದ್ದು ಇಲಾಖೆಗೆ ಪ್ರಸ್ತುತ 2563 ಹುದ್ದೆಗಳು ಮಂಜೂರಾಗಿದ್ದು 2092 ಸಿಬ್ಬಂದಿ ಕಾರ್ಯನಿರ್ವಹಿಸುತ್ತಿರುವುದಾಗಿ ತಿಳಿಸಿರುತ್ತಾರೆ. ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಕಾರಾವಿ ಆಸ್ಪತ್ರೆ/ಚಿಕಿತ್ಸಾಲಯಗಳ ಆಡಳಿತವು ನಿರ್ದೇಶನಾಲಯದ ಮೂಲಕ ನಿಯಂತ್ರಿಸಲಾಗುತ್ತಿದ್ದು ಆಡಳಿತ ಮತ್ತು ಆರ್ಥಿಕ ನಿಯಂತ್ರಣಕ್ಕೆ ಕಾರಾವಿ ನಿರ್ದೇಶನಾಲಯದ ಅಧೀನದಲ್ಲಿ ಯಾವುದೇ ಪ್ರಾದೇಶಿಕ ಕಛೇರಿ ಹಾಗೂ ವಿಭಾಗ ಕಛೇರಿಗಳು ಕಾರ್ಯನಿರ್ವಹಿಸುತ್ತಿಲ್ಲವೆಂದೂ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ 2092 ಸಿಬ್ಬಂದಿ/ಅಧಿಕಾರಿಗಳಿಗೆ ಸಂಬಂಧಿಸಿದಂತೆ ವೇತನ ನಿಗದಿ, ಪಿಂಚಣಿ, ಬಡ್ತಿ, ಶಿಸ್ತು ಪ್ರಕರಣಗಳು, ರಜೆ ಮಂಜೂರಾತಿ ಇತ್ಯಾದಿ ಆಡಳಿತಾತ್ಮಕ ಕಾರ್ಯಗಳನ್ನು ನಿರ್ದೇಶನಾಲಯದಲ್ಲಿಯೇ ನಿರ್ವಹಿಸಲಾಗುತ್ತಿರುವುದರಿಂದ ಹೆಚ್ಚಿನ ಆಡಳಿತ ಕಾರ್ಯಭಾರ ಇರುವುದಾಗಿಯೂ ತಿಳಿಸಿರುತ್ತಾರೆ. ಇಲಾಖೆಗೆ ಒಂದು ಆಡಳಿತಾಧಿಕಾರಿಯ ಹುದ್ದೆ ಮಂಜೂರಾತಿಯಾಗಿದ್ದು ಆಡಳಿತಾಧಿಕಾರಿಗಳಿಗೆ ಅತಿ ಹೆಚ್ಚಿನ ಕಾರ್ಯಭಾರವಿರುವುದರಿಂದ ಇವರಿಗೆ ಆಡಳಿತಾತ್ಮಕ ವಿಷಯದಲ್ಲಿ ಸಹಾಯಕರಾಗಿ ಕಾರ್ಯನಿರ್ವಹಿಸಲು ನಿರ್ದೇಶನಾಲಯಕ್ಕೆ ಸಹಾಯಕ ಆಡಳಿತಾಧಿಕಾರಿಯ ಹುದ್ದೆ ಅತಿ ಅವಶ್ಯಕವಾಗಿರುವುದಾಗಿ ಆದ್ದರಿಂದ ನಿರ್ದೇಶನಾಲಯಕ್ಕೆ ಮಂಜೂರಾಗಿರುವ 02 ಸಹಾಯಕ ಲೆಕ್ಕ ಪರಿಶೋಧನಾಧಿಕಾರಿ ಹುದ್ದೆಗಳ ಪೈಕಿ ಒಂದು ಹುದ್ದೆಯನ್ನು ಸಹಾಯಕ ಆಡಳಿತಾಧಿಕಾರಿಗಳ ಹುದ್ದೆಯನ್ನಾಗಿ ಪರಿವರ್ತಿಸಿ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಂದಲೇ ಈ ಹುದ್ದೆಯನ್ನು ಭರ್ತಿ ಮಾಡಲು ಸೂಕ್ತ ಆದೇಶವನ್ನು ಹೊರಡಿಸುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿದೆ.

## ಸರ್ಕಾರದ ಆದೇಶ ಸಂಖ್ಯೆ:ಕಾಇಇ 109 ಎಲ್‌ಇಎಸ್‌ವಿ 2004, ಬೆಂಗಳೂರು, ದಿನಾಂಕ:05-05-2006.

ಪ್ರಸ್ತಾವನೆಯಲ್ಲಿ ವಿವರಿಸಿದ ಹಿನ್ನೆಲೆಯಲ್ಲಿ ಕಾರ್ಮಿಕ ರಾಜ್ಯ ವಿಮಾ ಯೋಜನೆ (ವೈ) ಸೇವೆಗಳು ನಿರ್ದೇಶನಾಲಯಕ್ಕೆ ಸರ್ಕಾರದ ಆದೇಶ ಸಂಖ್ಯೆ:ಕಾಇಇ 440 ಎಲ್‌ಇಎಸ್‌ವಿ 98, ದಿನಾಂಕ:01-0[illegible]-98ರಲ್ಲಿ ಮಂಜೂರಾಗಿರುವ 02 ಸಹಾಯಕ ಲೆಕ್ಕ ಪರಿಶೋಧನಾಧಿಕಾರಿಗಳ

ಶುಶ್ರೂಷಕ ವೃಂದದ ಹುದ್ದೆಯನ್ನು ಸಹಾಯಕ ಆಡಳಿತಾಧಿಕಾರಿ ಹುದ್ದೆಯನ್ನಾಗಿ ತಕ್ಷಣದಿಂದ ಜಾರಿಗೆ ಬರುವಂತೆ ಪರಿವರ್ತಿಸಲಾಗಿದೆ. ಸದರಿ ಹುದ್ದೆಗೆ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ [illegible] ನೇಮಕಾತಿ ಮಾಡುವ ಬಗ್ಗೆ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ [illegible] ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸಹ ಆದೇಶಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ:ಆಇ 169 ವೆಚ್ಚ-9:06, ದಿನಾಂಕ:29-03-2006ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

[illegible]

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

(ಹೆಚ್.ವಿಶ್ವನಾಥ)
ಸರ್ಕಾರದ ಅಧೀನ ಕಾರ್ಯದರ್ಶಿ
ಕಾರ್ಮಿಕ ಇಲಾಖೆ.
(ಕಾರಾವಿ ಯೋ. (ವೈ) ಸೇವೆಗಳು)

ಗೆ:

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ನಿರ್ದೇಶಕರು, ಕಾರಾವಿ ಯೋಜನೆ (ವೈದ್ಯಕೀಯ) ಸೇವೆಗಳು, ರಾಜಾಜಿನಗರ, ಬೆಂಗಳೂರು.
3) ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
4) ಮಾನ್ಯ ಕಾರ್ಮಿಕ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
5) ಪ್ರಾದೇಶಿಕ ನಿರ್ದೇಶಕರು, ಕಾರಾವಿ ನಿಗಮ, ನಂ.10, ಬಿನ್ನಿಫೀಲ್ಡ್, ಬಿನ್ನಿಪೇಟೆ, ಬೆಂಗಳೂರು.
6) ಸಂಬಂಧಿಸಿದ ಎಲ್ಲಾ ಕಾರಾವಿ ಆಸ್ಪತ್ರೆಯ ಅಧೀಕ್ಷಕರುಗಳಿಗೆ
7) ರಾಜ್ಯ ರಕ್ಷಾ ಕಡತ: ಹೆಚ್ಚುವರಿ ಪ್ರತಿ.

---

ಕ್ರ.ಸಂ.ಆರ್‌ಎಮ್‌ಇ:207:97-98.

ನಿರ್ದೇಶಕರ ಕಾರ್ಯಾಲಯ, ಕಾರಾವಿ ಯೋಜನೆ (ವೈ) ಸೇವೆಗಳು
[illegible], ಬೆಂಗಳೂರು-10.
ದಿನಾಂಕ:20-05-06.

ಈ ಪ್ರತಿಯೊಂದಿಗೆ ಸರ್ಕಾರದ [illegible] ಆದೇಶದ [illegible] ಪ್ರತಿಯನ್ನು [illegible] ಈ ಆದೇಶದಂತೆ ಮುಂದಿನ ಕ್ರಮ [illegible] ಸೂಚಿಸಲಾಗಿದೆ.

ನಿರ್ದೇಶಕರು,
ಕಾರಾವಿ ಯೋ.(ವೈ) ಸೇವೆಗಳು
[illegible]

ಗೆ
ಈ ನಿರ್ದೇಶನಾಲಯದ ವೈದ್ಯಕೀಯ ಸಿಬ್ಬಂದಿ [illegible]

ಪ್ರತಿಯನ್ನು:
1) [illegible] ಕಾರಾವಿ ಯೋಜನೆ (ವೈ) ಸೇವೆಗಳು [illegible]

435

<u>ಕರ್ನಾಟಕ ಸರ್ಕಾರದ ನಡವಳಿಗಳು</u>

**ವಿಷಯ:-** ಇಲಾಖೆಯ ಕೆಲವು ಫಾರ್ಮಾಸಿಸ್ಟ್ ಹುದ್ದೆಯನ್ನು ಹಿರಿಯ ಫಾರ್ಮಾಸಿಸ್ಟ್ ಹುದ್ದೆಗೆ ಉನ್ನತೀಕರಿಸುವ ಕುರಿತು.

**ಓದಲಾಗಿದೆ:-**
1) ಸರ್ಕಾರದ ಆದೇಶ ಸಂಖ್ಯೆ.ಕಾಇ 59 ಎಲ್‌ಎಸ್‌ಐ 2009, ದಿ.30-07-2010.

2) ನಿರ್ದೇಶಕರು, ಕಾ.ರಾ.ವಿ. ಯೋಜನೆ ವೈದ್ಯಕೀಯ ಸೇವೆಗಳು, ಇವರ ಪತ್ರ ಸಂಖ್ಯೆ.ಅಭಿವೃದ್ಧಿ/112/96-97, ದಿನಾಂಕ:06-09-2010.

3) ಸರ್ಕಾರದ ಅಧಿಕೃತ ಜ್ಞಾಪನಾ ಸಂಖ್ಯೆಸಿಆಸುಇ 38 ಸೇನಿಡಿ 96, ದಿನಾಂಕ:01-08-1996.

1155 28 DEC 2010

**ಪ್ರಸ್ತಾವನೆ:**

ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಕಾ.ರಾ.ವಿ. ಯೋಜನೆ ವೈದ್ಯಕೀಯ ಸೇವೆಗಳು ಇಲಾಖೆಯ ಫಾರ್ಮಾಸಿಸ್ಟ್ ಹುದ್ದೆಯಲ್ಲಿರುವ ನೌಕರರಿಗೆ ಯಾವುದೇ ಮುಂಬಡ್ತಿ ಅವಕಾಶಗಳು ಇಲಾಖಾ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಇಲ್ಲದಿರುವುದರಿಂದ ಹಾಗೂ ಆ.ಕು.ಕ. ಇಲಾಖೆಯಲ್ಲಿನ ಫಾರ್ಮಾಸಿಸ್ಟ್‌ರಿಗೆ ಬಡ್ತಿ ಅವಕಾಶಗಳನ್ನು ಕಲ್ಪಿಸಿರುವಂತೆ ಕಾರಾವಿ ಯೋಜನೆ ವೈದ್ಯಕೀಯ ಸೇವೆಗಳು ಇಲಾಖೆಯ ಫಾರ್ಮಾಸಿಸ್ಟರಿಗೂ ಬಡ್ತಿ ಅವಕಾಶ ಕಲ್ಪಿಸಲು ವೇತನ ಆಯೋಗವು ಶಿಫಾರಸ್ಸು ಮಡಿರುವ ಹಿನ್ನಲೆಯಲ್ಲಿ ಕಾರಾವಿ ಯೋಜನೆ ವೈದ್ಯಕೀಯ ಸೇವೆಗಳು ಇಲಾಖೆಗೆ ಮಂಜೂರಾಗಿರುವ 302 ಫಾರ್ಮಾಸಿಸ್ಟ್ ಹುದ್ದೆಗಳಲ್ಲಿ 55 ಹುದ್ದೆಗಳನ್ನು ಹಿರಿಯ ಫಾರ್ಮಾಸಿಸ್ಟ್ ಹುದ್ದೆಗಳೆಂದು ಉನ್ನತೀಕರಿಸಲು ಮಂಜೂರಾತಿ ನೀಡಿದೆ.

ಮೇಲೆ (2)ರಲ್ಲಿ ಓದಲಾದ ಪತ್ರದಲ್ಲಿ ಕಾರಾವಿ ಯೋಜನೆ ವೈದ್ಯಕೀಯ ಸೇವೆಗಳು ಇಲಾಖೆಯ ನಿರ್ದೇಶಕರು, ಉನ್ನತೀಕರಿಸಲಾದ 55 ಹಿರಿಯ ಫಾರ್ಮಾಸಿಸ್ಟ್ ಹುದ್ದೆಯನ್ನು 05 ವರ್ಷ ಸೇವೆಯನ್ನು ಪೂರ್ಣಗೊಳಿಸಿದ ಫಾರ್ಮಾಸಿಸ್ಟ್ ವೃಂದದಿಂದ ಜೇಷ್ಠತೆ ಹಾಗೂ ರೋಸ್ಟರ್ ಅನುಸಾರ ಪದೋನ್ನತಿ ಮುಖಾಂತರ ಭರ್ತಿ ಮಾಡಲು ಆದೇಶವನ್ನು ನೀಡುವಂತೆ ಕೋರಿರುತ್ತಾರೆ.

ಮೇಲೆ (3)ರಲ್ಲಿ ಓದಲಾದ ಸರ್ಕಾರದ ಅಧಿಕೃತ ಜ್ಞಾಪನ ಪತ್ರದಲ್ಲಿ ನೇಮಕಾತಿ ವಿಧಾನದ ಬಗ್ಗೆ ನಿಯಮಗಳು ಇಲ್ಲದಿದ್ದ ಪ್ರಕರಣದಲ್ಲಿ ಕೆಲವು ಷರತ್ತುಗಳಿಗೆ ಒಳಪಡಿಸಿ ಕಾರ್ಯಕಾರಿ ಆದೇಶಗಳನ್ನು ಹೊರಡಿಸಬಹುದಾಗಿದೆಯೆಂದು ತಿಳಿಸಿದ್ದು, ಅದರ 2ನೇ ಷರತ್ತಿನ ಪ್ರಕಾರ ಹೊಸದಾಗಿ ಸೃಜಿಸಿರುವ ಹುದ್ದೆಗಳಿಗೆ ಮತ್ತು ನೇಮಕಾತಿ ವಿಧಾನವನ್ನು ರೂಪಿಸದಿರುವ ಹುದ್ದೆಗಳಿಗೆ ನೇಮಕಾತಿ ನಿಯಮಗಳನ್ನು ರೂಪಿಸುವಲ್ಲಿ ವಿಳಂಬವಾಗುವ ಸಾಧ್ಯತೆ ಇರುವ ಪ್ರಕರಣಗಳಲ್ಲಿ ಕಾರ್ಯಕಾರಿ ಆದೇಶವನ್ನು ಹೊರಡಿಸಬಹುದೆಂದು ತಿಳಿಸಲಾಗಿದೆ.

<u>ಸರ್ಕಾರದ ಆದೇಶ ಸಂಖ್ಯೆ.ಕಾಇ 59 ಎಲ್‌ಎಸ್‌ಐ 2009,</u>
<u>ಬೆಂಗಳೂರು, ದಿನಾಂಕ:27-12-2010.</u>

ಮೇಲೆ ವಿವರಿಸಿದ ಹಿನ್ನಲೆಯಲ್ಲಿ ಕಾರ್ಮಿಕ ರಾಜ್ಯ ವಿಮಾ ಯೋಜನೆ (ವೈದ್ಯಕೀಯ) ಸೇವೆಗಳು ಇಲಾಖೆಯಲ್ಲಿ ಉನ್ನತೀಕರಿಸಲಾಗಿರುವ 55 ಹಿರಿಯ ಫಾರ್ಮಾಸಿಸ್ಟ್ ಹುದ್ದೆಗೆ

ಅಭಿವೃದ್ಧಿ 28/12/2010

(ವೇತನ ಶ್ರೇಣಿ ₹.10,000-18150) ಈ ಆದೇಶದ ಅನುಬಂಧ-I ರಲ್ಲಿ ವಿವರಿಸಿದಂತೆ ಕೆಳಗಿನ ನಿಬಂಧನೆಗಳಿಗೆ ಒಳಪಡಿಸಿ ನೇಮಕಾತಿ ವಿಧಾನವನ್ನು ಗೊತ್ತುಪಡಿಸಲಾಗಿದೆ.

1) ಈ ಕಾರ್ಯಕಾರಿ ಆದೇಶದ ಮುಖಾಂತರ ನಿಗದಿಪಡಿಸಿದ ನೇಮಕಾತಿ ವಿಧಾನವು ಸದರಿ ಕಾರ್ಯಕಾರಿ ಆದೇಶವನ್ನು ಹೊರಡಿಸಿದ ದಿನಾಂಕದಿಂದ 06 ತಿಂಗಳ ಕಾಲ ಮಾತ್ರ ಜಾರಿಯಲ್ಲಿರುತ್ತದೆ.

2) 06 ತಿಂಗಳ ಒಳಗಾಗಿ ಈ ನೇಮಕಾತಿ ವಿಧಾನವನ್ನು ಕಾರ್ಮಿಕ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡಿ ಅಳವಡಿಸತಕ್ಕದ್ದು.

3) 06 ತಿಂಗಳ ಅವಧಿಯ ನಂತರ ಈ ಕಾರ್ಯಕಾರಿ ಆದೇಶವು ತನ್ನಿಂದ ತಾನೇ ರದ್ದಾಗುತ್ತದೆ.

ಈ 55 ಹುದ್ದೆಗಳನ್ನು ಉನ್ನತೀಕರಿಸಲಾಗಿರುವ ಚಿಕಿತ್ಸಾಲಯ/ಆಸ್ಪತ್ರೆಗಳ ವಿವರವನ್ನು ಅನುಬಂಧ-II ರಲ್ಲಿ ಲಗತ್ತಿಸಿದೆ.

ಈ ಆದೇಶವನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ಟಿಪ್ಪಣಿ ಸಂಖ್ಯೆ:ಸಿಆಸುಇ 91 ಸೇನಿಡಿ 2010, ದಿನಾಂಕ:06-12-2010ರ ಮೂಲಕ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಗೋವಿಂದಸ್ವಾಮಿ) 27/12
ಪೀಠಾಧಿಕಾರಿ,
ಕಾರ್ಮಿಕ ಇಲಾಖೆ.
(ಕಾರಾವಿ ಯೋ (ವೈ) ಸೇವೆಗಳು)
24/12/2010

ಗೆ,

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವ ಸಲುವಾಗಿ.

ಪ್ರತಿ:-

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ನಿರ್ದೇಶಕರು, ಕಾರ್ಮಿಕ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು, ರಾಜಾಜಿನಗರ, ಬೆಂಗಳೂರು.
3) ಸರ್ಕಾರದ ಅಧೀನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವಾ ನಿಯಮಗಳು-3)
3) ಮಾನ್ಯ ಕಾರ್ಮಿಕ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
4) ಕಾರ್ಯದರ್ಶಿ, ಕರ್ನಾಟಕ ಲೋಕ ಸೇವ ಆಯೋಗ, ಬೆಂಗಳೂರು.
5) ಸರ್ಕಾರದ ಕಾರ್ಯದರ್ಶಿ/ಉಪ ಕಾರ್ಯದರ್ಶಿಯವರ ಆಪ್ತ ಶಾಖೆ. ಕಾರ್ಮಿಕ ಇಲಾಖೆ.
6) ಶಾಖಾ ರಕ್ಷಕ ಕಡತ : ಹೆಚ್ಚುವರಿ ಪ್ರತಿ.

ಸರ್ಕಾರದ ಆದೇಶ ಸಂಖ್ಯೆ.ಕಾಇ 59 ಎಲ್‌ಎಸ್‌ಐ 2009, ಬೆಂಗಳೂರು,
ದಿನಾಂಕ:27-12-2010ಕ್ಕೆ ಅನುಬಂಧ-1.

| ಕ್ರ. ಸಂ. | ಹುದ್ದೆಯ ಹೆಸರು | ಹುದ್ದೆಯ ಸಂಖ್ಯೆ | ನೇಮಕಾತಿ ವಿಧಾನ | ಅರ್ಹತೆ |
|---|---|---|---|---|
| 1. | ಹಿರಿಯ ಫಾರ್ಮಾಸಿಸ್ಟ್ | 55 | ಫಾರ್ಮಾಸಿಸ್ಟ್ ವೃಂದದಿಂದ ಅರ್ಹತೆ ಮತ್ತು ಜೇಷ್ಠತೆಯ ಆಧಾರದ ಮೇರೆಗೆ | ಫಾರ್ಮಾಸಿಸ್ಟ್ ವೃಂದದಲ್ಲಿ ಕನಿಷ್ಠ 05 ವರ್ಷಗಳು ಸೇವೆ ಸಲ್ಲಿಸಬೇಕು. |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಗೋವಿಂದಸ್ವಾಮಿ) 27/12
ಪೀಠಾಧಿಕಾರಿ,
ಕಾರ್ಮಿಕ ಇಲಾಖೆ.
(ಕಾರಾವಿ ಯೋ (ವೈ) ಸೇವೆಗಳು)
27/12/2010

(484)

<u>ಸರ್ಕಾರದ ಆದೇಶ ಸಂಖ್ಯೆ.ಕಾಇ 59 ಎಲ್‌ಎಸ್‌ಐ 2009, ಬೆಂಗಳೂರು,</u>
<u>ದಿನಾಂಕ:27-12-2010ಕ್ಕೆ ಅನುಬಂಧ-2.</u>

| ಕ್ರ. ಸಂ. | ಆಸ್ಪತ್ರೆ/ಚಿಕಿತ್ಸಾಲಯ | 01-04-2010 ರಂತೆ ವಿಮಾ ಕಾರ್ಡ್‌ಗಳ ಸಂಖ್ಯೆ. | 01-04-2010 ರಂತೆ ಹೊರ ರೋಗಿಗಳ ಸರಾಸರಿ ಪ್ರತಿದಿನಕ್ಕೆ | ಮಂಜೂರಾತಿಯಾದ ಹುದ್ದೆಗಳ ಸಂಖ್ಯೆ. | ಉನ್ನತೀಕರಿಸಲಾದ ಹುದ್ದೆಗಳ ಸಂಖ್ಯೆ. |
|---|---|---|---|---|---|
| 1. | ನಿರ್ದೇಶಕರ ಕಛೇರಿ, ರಾಜಾಜಿನಗರ, ಬೆಂಗಳೂರು. | 1555000 | 950 (ಹೊರ ರೋಗಿ ಔಷಧ ಉಗ್ರಾಣ) | 21 | 05 |
| 2. | ಕಾರಾವಿ ಆಸ್ಪತ್ರೆ, ಇಂದಿರಾನಗರ, ಬೆಂಗಳೂರು (300 ಹಾಸಿಗೆಗಳ ಆಸ್ಪತ್ರೆ) | 311636 | 376 | 16 | 04 |
| 3. ✓ | ಕಾರಾವಿ ಆಸ್ಪತ್ರೆ, ಮೈಸೂರು (100 ಹಾಸಿಗೆಗಳ ಆಸ್ಪತ್ರೆ) | 52616 | 88 | 11 | 02 |
| 4. ✓ | ಕಾರಾವಿ ಆಸ್ಪತ್ರೆ, ಮಂಗಳೂರು (100 ಹಾಸಿಗೆಗಳ ಆಸ್ಪತ್ರೆ) | 37434 | 41 | 09 | 02 |
| 5. ✓ | ಕಾರಾವಿ ಆಸ್ಪತ್ರೆ, ದಾವಣಗೆರೆ (50 ಹಾಸಿಗೆಗಳ ಆಸ್ಪತ್ರೆ) | 25634 | 65 | 09 | 02 |
| 6. ✓ | ಕಾರಾವಿ ಆಸ್ಪತ್ರೆ, ಹುಬ್ಬಳ್ಳಿ (50 ಹಾಸಿಗೆಗಳ ಆಸ್ಪತ್ರೆ) | 31704 | 97 | 09 | 02 |
| 7. ✓ | ಕಾರಾವಿ ಆಸ್ಪತ್ರೆ, ಬೆಳಗಾವಿ (50 ಹಾಸಿಗೆಗಳ ಆಸ್ಪತ್ರೆ) | 22701 | 86 | 04 | 02 |
| 8. ✓ | ಕಾರಾವಿ ಆಸ್ಪತ್ರೆ, ದಾಂಡೇಲಿ (25 ಹಾಸಿಗೆಗಳ ಆಸ್ಪತ್ರೆ) | 5627 | 250 | 06 | 01 |
| 9. | ಕಾರಾವಿ ರೋಗ ಪತ್ತೆ ಹಚ್ಚುವ ಕೇಂದ್ರ, ಬಸವನಗುಡಿ. | 78046 | 190 | 04 | 02 |

| | | | | | |
|---|---|---|---|---|---|
| 10. | ಕಾರಾವಿ ಚಿಕಿತ್ಸಾಲಯ, ಹಲಸೂರು, ಬೆಂಗಳೂರು. | 24832 | 72 | 04 | 01 |
| 11. | ಕಾರಾವಿ ಚಿಕಿತ್ಸಾಲಯ, ಬಸವನಗುಡಿ, ಬೆಂಗಳೂರು. | 11618 | 71 | 04 | 01 |
| 12. | ಕಾರಾವಿ ಚಿಕಿತ್ಸಾಲಯ, ಮೈಸೂರು ರಸ್ತೆ, ಬೆಂಗಳೂರು. | 18763 | 121 | 04 | 01 |
| 13. | ಕಾರಾವಿ ಚಿಕಿತ್ಸಾಲಯ, ರಾಜಾಜಿನಗರ-1, ಬೆಂಗಳೂರು. | 18736 | 120 | 04 | 01 |
| 14. | ಕಾರಾವಿ ಚಿಕಿತ್ಸಾಲಯ, ಮಾಗಡಿ ರಸ್ತೆ, ಬೆಂಗಳೂರು. | 20505 | 132 | 04 | 01 |
| 15. | ಕಾರಾವಿ ಚಿಕಿತ್ಸಾಲಯ, ಪೀಣ್ಯ ಬೆಂಗಳೂರು. (12ಘಂಟೆಗಳ ಚಿಕಿತ್ಸಾಲಯ) | 63812 | 235 | 04 | 02 |
| 16. | ಕಾರಾವಿ ಚಿಕಿತ್ಸಾಲಯ, ಯಶವಂತಪುರ, ಬೆಂಗಳೂರು. | 30034 | 141 | 04 | 01 |
| 17. | ಕಾರಾವಿ ಚಿಕಿತ್ಸಾಲಯ, ಯಲಹಂಕ, ಬೆಂಗಳೂರು. | 19319 | 88 | 04 | 01 |
| 18. | ಕಾರಾವಿ ಚಿಕಿತ್ಸಾಲಯ, ದಾಸರಹಳ್ಳಿ, ಬೆಂಗಳೂರು. (12 ಘಂಟೆಗಳ ಚಿಕಿತ್ಸಾಲಯ) | 65735 | 318 | 04 | 02 |
| 19. | ಕಾರಾವಿ ಚಿಕಿತ್ಸಾಲಯ, ಬೊಮ್ಮನಹಳ್ಳಿ, ಬೆಂಗಳೂರು. (12 ಘಂಟೆಗಳ ಚಿಕಿತ್ಸಾಲಯ) | 50391 | 86 | 04 | 02 |

| | | | | | |
|---|---|---|---|---|---|
| 20. | ಕಾರಾವಿ ಚಿಕಿತ್ಸಾಲಯ, ಬೊಮ್ಮಸಂದ್ರ, ಬೆಂಗಳೂರು. (9.00 am to 4.00pm) | 43932 | 107 | 04 | 01 |
| 21. | ಕಾರಾವಿ ಚಿಕಿತ್ಸಾಲಯ, ವಿಲ್ಸನ್‌ಗಾರ್ಡನ್, ಬೆಂಗಳೂರು. | 31596 | 95 | 04 | 01 |
| 22. | ಕಾರಾವಿ ಚಿಕಿತ್ಸಾಲಯ, ಜಯನಗರ, ಬೆಂಗಳೂರು. | 20476 | 53 | 04 | 01 |
| 23. | ಕಾರಾವಿ ಚಿಕಿತ್ಸಾಲಯ, ದ್ಯಾವಸಂದ್ರ. | 10210 | 30 | 03 | 01 |
| 24. | ಕಾರಾವಿ ಚಿಕಿತ್ಸಾಲಯ, ಬೃಂದಾವನ ಮೈಸೂರು. | 6419 | 65 | 03 | 01 |
| 25. | ಕಾರಾವಿ ಚಿಕಿತ್ಸಾಲಯ, ನಂಜನಗೂಡು. | 8982 | 97 | 03 | 01 |
| 26. | ಕಾರಾವಿ ಚಿಕಿತ್ಸಾಲಯ, ಹುಬ್ಬಳ್ಳಿ-1. | 18153 | 275 | 03 | 01 |
| 27. | ಕಾರಾವಿ ಚಿಕಿತ್ಸಾಲಯ, ಫ್ರೇಜರ್‌ಟೌನ್ | 16862 | 64 | 03 | 01 |
| 28. | ಕಾರಾವಿ ಚಿಕಿತ್ಸಾಲಯ, ಶ್ರೀರಾಮಪುರ. | 5806 | 111 | 03 | 01 |
| 29. | ಕಾರಾವಿ ಚಿಕಿತ್ಸಾಲಯ, ರಾಜಾಜಿನಗರ-2. | 6583 | 65 | 03 | 01 |
| 30. | ಕಾರಾವಿ ಚಿಕಿತ್ಸಾಲಯ, ವಿಶ್ವನೀಡಂ. | 14451 | 89 | 03 | 01 |
| 31. | ಕಾರಾವಿ ಚಿಕಿತ್ಸಾಲಯ, ಮಾರತ್‌ಹಳ್ಳಿ. | 14113 | 62 | 02 | 01 |
| 32. | ಕಾರಾವಿ ಚಿಕಿತ್ಸಾಲಯ, ದೊಡ್ಡಬಳ್ಳಾಪುರ (ಗ್ರಾಮಾಂತರ) | 52700 | 60 | 02 | 01 |

| | | | | | |
|---|---|---|---|---|---|
| 33. | ಕಾರಾವಿ ಚಿಕಿತ್ಸಾಲಯ, ಕೊತ್ವಾಲ್‌ಗಲ್ಲಿ (ಕೆ.ಎಸ್.ಆರ್.ಟಿ.ಸಿ) | 4957 | 85 | 02 | 01 |
| 34. | ಕಾರಾವಿ ಚಿಕಿತ್ಸಾಲಯ, ದಾರವಾಡ. | 6931 | 77 | 02 | 01 |
| 35. | ಕಾರಾವಿ ಚಿಕಿತ್ಸಾಲಯ, ಎಂ.ಎಸ್.ಕೆ.ಮಿಲ್ಸ್, ಗುಲ್ಬರ್ಗಾ. | 1711 | 26 | 02 | 01 |
| 36. | ಕಾರಾವಿ ಚಿಕಿತ್ಸಾಲಯ, ರಾಬರ್ಟ್ಸನ್‌ಪೇಟೆ, ಕೋಲಾರ. | 5768 | 70 | 02 | 01 |
| 37. | ಕಾರಾವಿ ಚಿಕಿತ್ಸಾಲಯ, ಪೆಣಂಬೂರು ಮಂಗಳೂರು. | 12743 | 70 | 02 | 01 |
| 38. | ಕಾರಾವಿ ಚಿಕಿತ್ಸಾಲಯ, ಭದ್ರಾವತಿ. | 5206 | 235 | 02 | 01 |
| 39. | ಕಾರಾವಿ ಚಿಕಿತ್ಸಾಲಯ, ತುಮಕೂರು. | 11956 | 79 | 02 | 01 |
| | ಒಟ್ಟು | | | | 55 |

(ಗೋವಿಂದಸ್ವಾಮಿ) 27/12
ಪೀಠಾಧಿಕಾರಿ,
ಕಾರ್ಮಿಕ ಇಲಾಖೆ.
(ಕಾರಾವಿ ಯೋ (ವೈ) ಸೇವೆಗಳು)
27/12/2018

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಇಲಾಖೆಯ ಕೆಲವು ಫಾರ್ಮಾಸಿಸ್ಟ್ ಹುದ್ದೆಯನ್ನು ಹಿರಿಯ ಫಾರ್ಮಾಸಿಸ್ಟ್ ಹುದ್ದೆಗೆ ಉನ್ನತೀಕರಿಸುವ ಕುರಿತು.

**ಓದಲಾಗಿದೆ:-** ನಿರ್ದೇಶಕರು, ಕಾ.ರಾ.ವಿ. ಯೋಜನೆ ವೈದ್ಯಕೀಯ ಸೇವೆಗಳು, ಇವರ ಪತ್ರ ಸಂಖ್ಯೆ-ಅಭಿವೃದ್ಧಿ/112/96-97, ದಿನಾಂಕ:09-03-2009, 22-12-2009 ಮತ್ತು 12-01-2010.

**ಪ್ರಸ್ತಾವನೆ:**

ನಿರ್ದೇಶಕರು, ಕಾ.ರಾ.ವಿ. ಯೋಜನೆ ವೈದ್ಯಕೀಯ ಸೇವೆಗಳು ಇವರು ಮೇಲೆ ಓದಲಾದ ಪತ್ರಗಳಲ್ಲಿ ಕಾರಾವಿ ಆಸ್ಪತ್ರೆ/ಚಿಕಿತ್ಸಾಲಯಗಳ 75 ಫಾರ್ಮಾಸಿಸ್ಟ್ ಹುದ್ದೆಯನ್ನು ಮೇಲ್ದರ್ಜೆಗೇರಿಸಿ ಹಿರಿಯ ಫಾರ್ಮಾಸಿಸ್ಟ್ ಹುದ್ದೆಯಾಗಿ ಉನ್ನತೀಕರಣಗೊಳಿಸುವಂತೆ ಕೋರಿರುತ್ತಾರೆ. ಇಂತಹುದೇ ಪ್ರಕರಣಗಳಲ್ಲಿ ಆ.ಕು.ಕ. ಇಲಾಖೆಯಲ್ಲಿ ಫಾರ್ಮಾಸಿಸ್ಟರಿಗೆ ಬಡ್ತಿಯ ಅವಕಾಶವನ್ನು ಈಗಾಗಲೇ ಕಲ್ಪಿಸಲಾಗಿದ್ದು, ಅದರ ಪ್ರಕಾರವೇ ಬಡ್ತಿ ಅವಕಾಶವನ್ನು ಕಲ್ಪಿಸುವಂತೆ ಪ್ರಸ್ತಾಪಿಸಿರುತ್ತಾರೆ.

ಕಾರಾವಿ ಯೋಜನೆ ವೈದ್ಯಕೀಯ ಸೇವೆಗಳು ಇಲಾಖೆಗೆ ಒಟ್ಟು 302 ಫಾರ್ಮಾಸಿಸ್ಟ್ ಹುದ್ದೆಗಳು ಮಂಜೂರಾಗಿರುತ್ತದೆ. ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಫಾರ್ಮಾಸಿಸ್ಟರಿಗೆ ಯಾವುದೇ ಪದೋನ್ನತಿಯ ಅವಕಾಶವಿರುವುದಿಲ್ಲವಾದ ಕಾರಣ ಇವರು ಫಾರ್ಮಾಸಿಸ್ಟರಾಗಿಯೇ ನಿವೃತ್ತಿ ಹೊಂದಬೇಕಾಗಿರುತ್ತದೆ. ಇದರಿಂದ ದಕ್ಷತೆ ಕುಗ್ಗುವ ಸಂಭವವಿರುತ್ತದೆ. 5ನೇ ವೇತನ ಆಯೋಗದ ವರದಿ ಕಂಡಿಕೆ.3.28.7ರಲ್ಲಿ ಈ ಕೆಳಗಿನಂತೆ ತಿಳಿಸಲಾಗಿದೆ.

> " It is noted that while in the department of Health and Family Welfare Services, there are two cadres of Pharmacist and Sesnior Pharmicist in the pay scale of Rs.3850-7050 and Rs.4150-7800 respectively, there is only one cadre of Pharmacist in the Directorate of ESI (Medical) Services. In the light of this and with a view to maintain uniformity in both the departments, it is up to the administrative department to create the posts of Senior Pharmacist in the Directorate of ESI (Medical) Services keeping in view other relevant factors in to consideration''.
>
> "ಈ ಸಮಿತಿಯ ಅಭಿಪ್ರಾಯ ಆಯೋಗ ಪುರಸ್ಕರಿಸುತ್ತದೆ ಮತ್ತು ಇಲಾಖಾ ಪ್ರಸ್ತಾಪ ಅನುಮೋದಿಸಬಹುದೆಂದು ಅಭಿಪ್ರಾಯಪಡುತ್ತದೆ.''

ವೇತನ ಆಯೋಗದ ಈ ಮೇಲಿನ ಅಭಿಪ್ರಾಯದಂತೆ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ.

ರಾಜ್ಯ ಸರ್ಕಾರವು ಕಾ.ರಾ.ವಿ. ನಿಗಮದೊಂದಿಗೆ ಮಾಡಿಕೊಂಡ ಒಪ್ಪಂದದ ಅನುಸಾರ ಇಲಾಖೆಯು ಮಾಡುವ ಒಟ್ಟು ವೆಚ್ಚದಲ್ಲಿ ಕಾರಾವಿ ನಿಗಮವು 7:8ರ ಅನುಪಾತದಲ್ಲಿ ರಾಜ್ಯ ಸರ್ಕಾರಕ್ಕೆ ಪುನರ್‌ಭರಣ ಮಾಡುತ್ತದೆ. ಆದುದರಿಂದ ರಾಜ್ಯ ಸರ್ಕಾರಕ್ಕೆ ಉಂಟಾಗುವ ವೆಚ್ಚ ಕೇವಲ 1:8ರ ಅನುಪಾತವಾಗಿರುತ್ತದೆ.

ಕಾರಾವಿ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಫಾರ್ಮಾಸಿಸ್ಟರು ಹಿರಿಯ ಫಾರ್ಮಾಸಿಸ್ಟ್ ಹುದ್ದೆಗೆ ನಿಗಧಿಪಡಿಸಬಹುದಾದ ವೇತನದ ಗರಿಷ್ಠ ಮೊತ್ತವನ್ನು ಈಗಾಗಲೇ ತಲುಪಿರುವುದರಿಂದ ಪದೋನ್ನತಿ ನೀಡುವುದರಿಂದ ಯಾವುದೇ ಆರ್ಥಿಕ ಹೊರೆ ಉಂಟಾಗುವುದಿಲ್ಲ. ಆದುದರಿಂದ ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ.ಕಾಇ 59 ಎಲ್ಎಸ್ಐ 2009,**
**ಬೆಂಗಳೂರು, ದಿನಾಂಕ:30-07-2010.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕಾರ್ಮಿಕ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ಇಲಾಖೆಯ ಫಾರ್ಮಾಸಿಸ್ಟ್ ಹುದ್ದೆಯಲ್ಲಿರುವ ನೌಕರರಿಗೆ ಯಾವುದೇ ಮುಂಬಡ್ತಿ ಅವಕಾಶಗಳು ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಇಲ್ಲದಿರುವುದರಿಂದ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿನ ಫಾರ್ಮಾಸಿಸ್ಟರಿಗೆ ಬಡ್ತಿ ಅವಕಾಶಗಳನ್ನು ಕಲ್ಪಿಸಿರುವಂತೆ ಕಾರ್ಮಿಕ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ಇಲಾಖೆಯ ಫಾರ್ಮಾಸಿಸ್ಟರಿಗೂ ಬಡ್ತಿ ಅವಕಾಶ ಕಲ್ಪಿಸಲು ವೇತನ ಆಯೋಗವು ಶಿಫಾರಸ್ಸು ಮಾಡಿರುವ ಹಿನ್ನಲೆಯಲ್ಲಿ ಕಾರ್ಮಿಕ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ಇಲಾಖೆಗೆ ಮಂಜೂರಾಗಿರುವ 302 ಫಾರ್ಮಾಸಿಸ್ಟ್ ಹುದ್ದೆಗಳಲ್ಲಿ 55 ಹುದ್ದೆಗಳನ್ನು **"ಹಿರಿಯ ಫಾರ್ಮಾಸಿಸ್ಟ್"** ಹುದ್ದೆಗಳೆಂದು ಉನ್ನತೀಕರಿಸಲು ಮಂಜೂರಾತಿ ನೀಡಿದೆ. ಈ ಹುದ್ದೆಯ ವೇತನ ಶ್ರೇಣಿ ರೂ.10000-18150 ಆಗಿರುತ್ತದೆ.

ಈ ಉನ್ನತೀಕರಣದಿಂದ ಉಂಟಾಗುವ ವೆಚ್ಚದ 12.5% ಹೆಚ್ಚಳವನ್ನು ಇಲಾಖೆಗೆ ಲಭ್ಯವಿರುವ ಅನುದಾನದಲ್ಲಿ ಹಾಗೂ 87.5% ರಷ್ಟು ಹೆಚ್ಚಳವನ್ನು ಕಾರ್ಮಿಕ ರಾಜ್ಯ ವಿಮಾ ನಿಗಮವು ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ.ಆಇ 280 ವೆಚ್ಚ-09-10, ದಿನಾಂಕ:06-07-2010ರ ಸಹಮತಿಯ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಗೋವಿಂದಸ್ವಾಮಿ)
ಪೀಠಾಧಿಕಾರಿ,
ಕಾರ್ಮಿಕ ಇಲಾಖೆ.
(ಕಾರಾವಿ ಯೋ (ವೈ) ಸೇವೆಗಳು)

O/C 31/07/2010

Issued
Dated:

ಗೆ,

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ನಿರ್ದೇಶಕರು, ಕಾರ್ಮಿಕ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು, ರಾಜಾಜಿನಗರ, ಬೆಂಗಳೂರು.
3) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ 3&9) ವಿಧಾನ ಸೌಧ, ಬೆಂಗಳೂರು.
5) ಸರ್ಕಾರದ ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರು, ಕಾರ್ಮಿಕ ಇಲಾಖೆ.
6) ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಕಾರ್ಮಿಕ ಇಲಾಖೆ.
7) ಶಾಖಾ ರಕ್ಷಕ ಕಡತ : ಹೆಚ್ಚುವರಿ ಪ್ರತಿ.

(7)

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಕಾರಾವಿ ನಿರ್ದೇಶನಾಲಯಕ್ಕೆ ಮಂಜೂರಾಗಿರುವ 02 ಲೆಕ್ಕ ಪರಿಶೋಧನಾಧಿಕಾರಿಗಳ ಹುದ್ದೆಯ ಪೈಕಿ ಒಂದು ಹುದ್ದೆಯನ್ನು ಸಹಾಯಕ ಆಡಳಿತಾಧಿಕಾರಿ ಹುದ್ದೆಯಾಗಿ ಪರಿವರ್ತಿಸುವ ಬಗ್ಗೆ.

ನಿರ್ದೇಶಕರು
130
- 9 MAY 2006

**ಓದಲಾಗಿದೆ:-**
1) ನಿರ್ದೇಶಕರು, ಕಾರಾವಿ ಯೋ (ವೈ) ಸೇವೆಗಳು ಇವರ ಪತ್ರ ಸಂಖ್ಯೆ:ಅಭಿವೃದ್ಧಿ:159:2003-04, ದಿನಾಂಕ:27-01-2004.
2) ನಿರ್ದೇಶಕರು ಕಾರಾವಿ ಯೋ (ವೈ) ಸೇವೆಗಳು ಇವರ ಪತ್ರ ಸಂಖ್ಯೆ:ಅಭಿವೃದ್ಧಿ:207:97-98, ದಿನಾಂಕ:23-02-2004 ಮತ್ತು 23-12-2005.

**ಪ್ರಸ್ತಾವನೆ:-**

ನಿರ್ದೇಶಕರು, ಕಾರಾವಿ ಯೋಜನೆ (ವೈ) ಸೇವೆಗಳು ಇವರು ಮೇಲೆ (2)ರಲ್ಲಿ ಓದಲಾದ ದಿನಾಂಕ:23-12-2005ರ ತಮ್ಮ ಪತ್ರದಲ್ಲಿ ರಾಜ್ಯದಲ್ಲಿ 7,56,150 ವಿಮಾದಾರರಿಗೆ ಹಾಗೂ ಅಂದಾಜು 40.00 ಲಕ್ಷ ಅವರ ಕುಟುಂಬದವರಿಗೆ 7 ಕಾರಾವಿ ಆಸ್ಪತ್ರೆ, 102 ಪೂರ್ಣ ಕಾಲಿಕ ಕಾರಾವಿ ಚಿಕಿತ್ಸಾಲಯ ಹಾಗೂ 1 ರೋಗಪತ್ತೆ ಹಚ್ಚುವ ಕೇಂದ್ರದ ಮೂಲಕ ಪೂರ್ಣ ಪ್ರಮಾಣದ ವೈದ್ಯಕೀಯ ಸೌಲಭ್ಯವನ್ನು ವಿಸ್ತರಿಸಲಾಗುತ್ತಿದ್ದು ಇಲಾಖೆಗೆ ಪ್ರಸ್ತುತ 2563 ಹುದ್ದೆಗಳು ಮಂಜೂರಾಗಿದ್ದು 2092 ಸಿಬ್ಬಂದಿ ಕಾರ್ಯನಿರ್ವಹಿಸುತ್ತಿರುವುದಾಗಿ ತಿಳಿಸಿರುತ್ತಾರೆ. ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಕಾರಾವಿ ಆಸ್ಪತ್ರೆ/ಚಿಕಿತ್ಸಾಲಯಗಳ ಆಡಳಿತ ಕಾರಾವಿ ನಿರ್ದೇಶನಾಲಯದ ಮೂಲಕ ನಿಯಂತ್ರಿಸಲಾಗುತ್ತಿದ್ದು ಹಾಗೂ ಆರ್ಥಿಕ ನಿಯಂತ್ರಣಕ್ಕಾಗಿ ಕಾರಾವಿ ನಿರ್ದೇಶನಾಲಯದ ಪ್ರಾದೇಶಿಕ ಕಛೇರಿ ಹಾಗೂ ವಿಭಾಗ ಕಛೇರಿಗಳು ಕಾರ್ಯನಿರ್ವಹಿಸುತ್ತಿಲ್ಲವೆಂದು ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ 2092 ಸಿಬ್ಬಂದಿ/ಅಧಿಕಾರಿಗಳಿಗೆ ಸಂಬಂಧಿಸಿದಂತೆ ಸೇವಾನಿವೃತ್ತಿ, ವರ್ಗಾವಣೆ, ಬಡ್ತಿ, ಶಿಸ್ತು ಪ್ರಕರಣಗಳು, ರಜೆ ಮಂಜೂರಾತಿ ಇತ್ಯಾದಿ ಆಡಳಿತಾತ್ಮಕ ಕಾರ್ಯಗಳನ್ನು ನಿರ್ದೇಶನಾಲಯದಲ್ಲಿಯೇ ನಿರ್ವಹಿಸಲಾಗುತ್ತಿರುವುದರಿಂದ ಹೆಚ್ಚಿನ ಆಡಳಿತ ಕಾರ್ಯಭಾರ ಇರುವುದಾಗಿಯೂ ತಿಳಿಸಿರುತ್ತಾರೆ. ಇಲಾಖೆಗೆ ಒಂದು ಆಡಳಿತಾಧಿಕಾರಿಯ ಹುದ್ದೆ ಮಂಜೂರಾತಿಯಾಗಿದ್ದು ಆಡಳಿತಾಧಿಕಾರಿಗಳಿಗೆ ಅತಿ ಹೆಚ್ಚಿನ ಕಾರ್ಯಭಾರವಿರುವುದರಿಂದ ಇವರಿಗೆ ಆಡಳಿತಾತ್ಮಕ ವಿಷಯದಲ್ಲಿ ಸಹಾಯಕರಾಗಿ ಕಾರ್ಯನಿರ್ವಹಿಸಲು ನಿರ್ದೇಶನಾಲಯಕ್ಕೆ ಸಹಾಯಕ ಆಡಳಿತಾಧಿಕಾರಿಯ ಹುದ್ದೆ ಅತಿ ಅವಶ್ಯಕವಾಗಿರುವುದಾಗಿ ಆದ್ದರಿಂದ ನಿರ್ದೇಶನಾಲಯಕ್ಕೆ ಮಂಜೂರಾಗಿರುವ 02 ಸಹಾಯಕ ಲೆಕ್ಕ ಪರಿಶೋಧನಾಧಿಕಾರಿ ಹುದ್ದೆಗಳ ಪೈಕಿ ಒಂದು ಹುದ್ದೆಯನ್ನು ಸಹಾಯಕ ಆಡಳಿತಾಧಿಕಾರಿಗಳ ಹುದ್ದೆಯನ್ನಾಗಿ ಪರಿವರ್ತಿಸಿ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಂದಲೇ ಈ ಹುದ್ದೆಯನ್ನು ಭರ್ತಿ ಮಾಡಲು ಸೂಕ್ತ ಆದೇಶವನ್ನು ಹೊರಡಿಸುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಕಾಇ 109 ಎಲ್‌ಎಸ್‌ಎ 2004, ಬೆಂಗಳೂರು, ದಿನಾಂಕ:05-05-2006.**

ಪ್ರಸ್ತಾವನೆಯಲ್ಲಿ ವಿವರಿಸಿದ ಹಿನ್ನೆಲೆಯಲ್ಲಿ ಕಾರ್ಮಿಕ ರಾಜ್ಯ ವಿಮಾ ಯೋಜನೆ (ವೈ) ಸೇವೆಗಳು ನಿರ್ದೇಶನಾಲಯಕ್ಕೆ ಸರ್ಕಾರದ ಆದೇಶ ಸಂಖ್ಯೆ:ಕಾಇ 440 ಎಲ್‌ಎಸ್‌ಎ 98, ದಿನಾಂಕ:01-07-98ರಲ್ಲಿ ಸೃಜಿಸಲಾಗಿರುವ 02 ಸಹಾಯಕ ಲೆಕ್ಕ ಪರಿಶೋಧನಾಧಿಕಾರಿಗಳ

ವೃಂದದ ಸಂಖ್ಯೆ 01 ಹುದ್ದೆಯನ್ನು ಸಮಾಜ ಕಲ್ಯಾಣಾಧಿಕಾರಿ ಹುದ್ದೆಯನ್ನಾಗಿ ಕರ್ತವ್ಯದಿಂದ ಕಾರ್ಯನಿರ್ವಹಿಸುತ್ತಿರುವ ಹಾಗೆ ಬರುವಂತೆ ಪರಿವರ್ತಿಸಲಾಗಿದೆ. ಸದರಿ ಹುದ್ದೆಗೆ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಂದಲೇ ನೇಮಕಾತಿ ಮಾಡುವ ಬಗ್ಗೆ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅಳವಡಿಸಲು ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸಹ ಆದೇಶಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ 169 ವೆಚ್ಚ-9/06, ದಿನಾಂಕ:29-03-2006ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

(ಹೆಚ್.ವಿಶ್ವನಾಥ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾರ್ಮಿಕ ಇಲಾಖೆ.
(ಕಾರಾವಿ ಯೋ. (ವೈ) ಸೇವೆಗಳು)

ಗೆ:
1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ನಿರ್ದೇಶಕರು, ಕಾರಾವಿ ಯೋಜನೆ (ವೈದ್ಯಕೀಯ) ಸೇವೆಗಳು, ರಾಜಾಜಿನಗರ, ಬೆಂಗಳೂರು.
3) ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
4) ಮಾನ್ಯ ಕಾರ್ಮಿಕ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
5) ಪ್ರಾದೇಶಿಕ ನಿರ್ದೇಶಕರು, ಕಾರಾವಿ ನಿಗಮ, ನಂ.10, ಬಿನ್ನಿಫೀಲ್ಡ್, ಬಿನ್ನಿಪೇಟೆ, ಬೆಂಗಳೂರು.
6) ಸಂಬಂಧಿಸಿದ ಎಲ್ಲಾ ಕಾರಾವಿ ಆಸ್ಪತ್ರೆಯ ಅಧೀಕ್ಷಕರುಗಳಿಗೆ
7) ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿ.

---

ಕ್ರ. ಸಂ. ಆಡಳಿತ/207/97-98.

ನಿರ್ದೇಶಕರ ಕಾರ್ಯಾಲಯ,
ಕಾರ್ಮಿಕ ರಾಜ್ಯ ವಿಮಾ ಯೋಜನೆ (ವೈ) ಸೇವೆಗಳು,
ರಾಜಾಜಿನಗರ, ಬೆಂಗಳೂರು-10,
ದಿನಾಂಕ: 20-05-06.

ಈ ಪತ್ರದೊಂದಿಗೆ ಸರ್ಕಾರದಿಂದ ಸ್ವೀಕೃತವಾದ ಆದೇಶದ [illegible] ಈ ಆದೇಶದಂತೆ ಮುಂದಿನ ಕ್ರಮ ಕೈಗೊಳ್ಳಲು [illegible] ಸೂಚಿಸಲಾಗಿದೆ.

ನಿರ್ದೇಶಕರು,
ಕಾರಾವಿ ಯೋಜನೆ (ವೈ) ಸೇವೆಗಳು

ಗೆ
ಈ ನಿರ್ದೇಶನಾಲಯದ ವೈದ್ಯರು / ಸಿಬ್ಬಂದಿ / [illegible] / [illegible] [illegible]

ಪ್ರತಿಯನ್ನು:
1) ಉಪನಿರ್ದೇಶಕರುಗಳು / ಲೆಕ್ಕಾಧಿಕಾರಿಗಳು / ಕಾರ್ಮಿಕ ರಾಜ್ಯ ವಿಮಾ ಯೋಜನೆ (ವೈ) ಸೇವೆಗಳು ಇವರ ಮಾಹಿತಿಗಾಗಿ.

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ಇಲಾಖೆಯ ಫಾರ್ಮಸಿಸ್ಟ್ ವೃಂದದಿಂದ 7 ಪದವೀಧರ ಫಾರ್ಮಸಿಸ್ಟ್ ಹುದ್ದೆಗಳನ್ನು ಉನ್ನತೀಕರಿಸುವುದರ ಮುಖಾಂತರ ಸೃಜಿಸುವ ಬಗ್ಗೆ.

ಓದಲಾಗಿದೆ:- 1) ನಿರ್ದೇಶಕರು, ಕಾರಾವಿ ಯೋಜನೆ ವೈದ್ಯಕೀಯ ಸೇವೆಗಳು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಭಿವೃದ್ಧಿ/142/2005-06, ದಿನಾಂಕ:04-10-2012, 21-03-2013, 17-06-2013 ಮತ್ತು 27-12-2013.

ಸರ್ಕಾರದ ಆದೇಶ ಸಂಖ್ಯೆ:ಕಾಇ 59 ಎಲ್ಎಸ್ಐ 2009, ದಿನಾಂಕ:30-07-2010.

ಪ್ರಸ್ತಾವನೆ:

ನಿರ್ದೇಶಕರು, ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ಇವರು ಮೇಲೆ ಓದಲಾದ (1)ರ ಪತ್ರಗಳಲ್ಲಿ ಇಲಾಖೆಯು ಒಟ್ಟು 7 ಕಾರ್ಮಿಕರ ರಾಜ್ಯ ವಿಮಾ ಆಸ್ಪತ್ರೆಗಳು, 106 ಚಿಕಿತ್ಸಾಲಯಗಳು ಒಂದು ರೋಗ ಪತ್ತೆ ಹಚ್ಚುವ ಕೇಂದ್ರ ಹಾಗೂ 4 ಐ.ಎಂ.ಪಿ. ಚಿಕಿತ್ಸಾಲಯಗಳ ಮುಖಾಂತರ ವಿಮಾದಾರರಿಗೆ ಮತ್ತು ಅವರ ಕುಟುಂಬದವರಿಗೆ ಪೂರ್ಣ ಪ್ರಮಾಣದ ವೈದ್ಯಕೀಯ ಸೌಲಭ್ಯವನ್ನು ವಿಸ್ತರಿಸಲಾಗಿದೆಯೆಂದು ವರದಿ ಮಾಡಿರುತ್ತಾರೆ. ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸೀನಿಯರ್ ಫಾರ್ಮಸಿಸ್ಟ್ ವೃಂದದಿಂದ ಫಾರ್ಮಸಿ ಪದವಿ ಹೊಂದಿರುವ ಅಭ್ಯರ್ಥಿಗಳಿಗೆ ಪದೋನ್ನತಿ ನೀಡುವ ಮುಖಾಂತರ 07 ಪದವೀಧರ ಫಾರ್ಮಸಿಸ್ಟ್ ಹುದ್ದೆಗಳನ್ನು ಭರ್ತಿ ಮಾಡಲಾಗುವುದು. ಅಥವಾ ಅಂತಹ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ; ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಫಾರ್ಮಸಿಸ್ಟ್ ವೃಂದದಿಂದ, ಫಾರ್ಮಸಿ ಪದವಿ ಹೊಂದಿ ಫಾರ್ಮಸಿಸ್ಟ್ ಆಗಿ 10 ವರ್ಷ ಸೇವೆ ಸಲ್ಲಿಸಿರುವ ಅಭ್ಯರ್ಥಿಗೆ ಪದೋನ್ನತಿ ನೀಡುವ ಮುಖಾಂತರ ಭರ್ತಿ ಮಾಡಲಾಗುವುದೆಂದು ಪ್ರಸ್ತಾಪಿಸಿ, ಪ್ರಸ್ತುತ ಇಲಾಖೆಯಲ್ಲಿ 7 ಪ್ರಾದೇಶಿಕ ಔಷಧಿ ಉಗ್ರಾಣಗಳು ಕಾರ್ಯನಿರ್ವಹಿಸುತ್ತಿದ್ದು, ಈ ಪ್ರಾದೇಶಿಕ ಔಷಧಿ ಉಗ್ರಾಣದ ಮುಖಾಂತರ ರಾಜ್ಯದ ಎಲ್ಲಾ ಕಾರ್ಮಿಕರ ರಾಜ್ಯ ವಿಮಾ ಆಸ್ಪತ್ರೆ/ಚಿಕಿತ್ಸಾಲಯಗಳಿಗೆ ಔಷಧಿಗಳನ್ನು ಸರಬರಾಜು ಮಾಡಲಾಗುತ್ತಿದೆಯೆಂದು ಈ ಪ್ರಾದೇಶಿಕ ಔಷಧಿ ಉಗ್ರಾಣಗಳನ್ನು ಕಾರ್ಮಿಕರ ರಾಜ್ಯ ವಿಮಾ ಆಸ್ಪತ್ರೆಗಳಿಗೆ ಅನುಬಂಧಿಸಲಾಗಿದೆಯೆಂದು ತಿಳಿಸಿ, ಔಷಧಿ ಉಗ್ರಾಣಗಳ ನಿರ್ವಹಣೆ ಹಾಗೂ ಉಸ್ತುವಾರಿ ಕಾರ್ಯವನ್ನು ಪದವೀಧರ ಫಾರ್ಮಸಿಸ್ಟ್ ಇವರು ನಿರ್ವಹಿಸುವುದು ಸಮಂಜಸವಾಗಿರುತ್ತದೆಯೆಂದು ವರದಿ ಮಾಡಿರುತ್ತಾರೆ.

...2..

ESIC ದರ ಗುತ್ತಿಗೆ ಮುಖಾಂತರ ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ಇಲಾಖೆಯು ಪ್ರತಿ ವರ್ಷ ₹30.00ಕೋಟಿಗೂ ಹೆಚ್ಚು ಮೌಲ್ಯದ ಔಷಧಿಗಳನ್ನು ಖರೀದಿಸುತ್ತಿದ್ದು, ಈ ಔಷಧಿಗಳ ಗುಣಮಟ್ಟದ ವಿಶ್ಲೇಷಣೆ, ದಾಸ್ತಾನು ನಿರ್ವಹಣೆ ಮುಂತಾದ ಕರ್ತವ್ಯವನ್ನು ಹೆಚ್ಚು ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಲು ಹೆಚ್ಚು ವಿದ್ಯಾರ್ಹತೆ/ತಾಂತ್ರಿಕ ಜ್ಞಾನ ಹೊಂದಿರುವ ಪದವೀಧರ ಫಾರ್ಮಸಿಸ್ಟ್‌ರ ಸೇವೆ ಅಗತ್ಯವಾಗಿರುತ್ತದೆ. ESIC ದರ-ಗುತ್ತಿಗೆಯಲ್ಲಿ ಲಭ್ಯವಿಲ್ಲದ ಔಷಧಿಗಳನ್ನು ಇಲಾಖೆಯು ಟೆಂಡರ್ ಮೂಲಕ ಖರೀದಿಸುತ್ತಿದ್ದು, ಈ ಬಗ್ಗೆ ತಾಂತ್ರಿಕ ಸಲಹೆ ನೀಡಲು ಔಷಧಿ ನಿಯಂತ್ರಣ ಕಾಯ್ದೆ 1940ರ ಪ್ರಕಾರ ಇಲಾಖೆಗೆ ಪದವೀಧರ ಫಾರ್ಮಸಿಸ್ಟ್‌ರ ಸೇವೆ ಅಗತ್ಯವಾಗಿರುತ್ತದೆ.

ESIC ದರ ಗುತ್ತಿಗೆ ಅನುಸಾರ ಇಲಾಖೆಯು ಖರೀದಿಸಿದ ಔಷಧಿಗಳ ಒಟ್ಟು ಪ್ರಮಾಣದಲ್ಲಿ ಶೇ. 10ರಷ್ಟು ಔಷಧಿಗಳನ್ನು ವಿಶ್ಲೇಷಣೆಗೆ ಒಳಪಡಿಸಬೇಕೆಂದು ಮಾರ್ಗಸೂಚಿಯಿರುತ್ತದೆ. ವಿಶ್ಲೇಷಿಸಿದ ನಂತರ ಬರುವ ಔಷಧಿಗಳನ್ನು ಸಮರ್ಥವಾಗಿ ಪರಿಶೀಲಿಸಿ ಅದರಂತೆ ಕಾರ್ಯನಿರ್ವಹಿಸಲು ಔಷಧಿ ವಿಜ್ಞಾನದ ವಿಷಯದಲ್ಲಿ ಪದವಿಯನ್ನು ಹೊಂದಿದವರು ಸಮರ್ಪಕವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ.

ESIC ನಾರಮ್ಸ್ ಪ್ರಕಾರ ಪದವೀಧರ ಫಾರ್ಮಸಿಸ್ಟ್ ಹುದ್ದೆಯನ್ನು ಆಸ್ಪತ್ರೆ/ಚಿಕಿತ್ಸಾಲಯಕ್ಕೆ ಸೃಜಿಸಲು ಅವಕಾಶ ಕಲ್ಪಿಸಿರುವುದಿಲ್ಲ, ಆದರೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಪದವೀಧರ ಫಾರ್ಮಸಿಸ್ಟ್/ಚೀಫ್ ಫಾರ್ಮಸಿಸ್ಟ್ ಹಾಗೂ ಉಪ ನಿರ್ದೇಶಕರು, ಔಷಧ ವಿಭಾಗ ಎಂಬ ಪದನಾಮದೊಂದಿಗೆ ಹುದ್ದೆಗಳನ್ನು ಸೃಜಿಸಿರುತ್ತಾರೆ, ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲಿ ಜಿಲ್ಲಾ ಆಸ್ಪತ್ರೆಯ ಔಷಧಿ ಉಗ್ರಾಣಗಳನ್ನು ಪದವೀಧರ ಫಾರ್ಮಸಿಸ್ಟ್, ಚೀಫ್ ಹಾಗೂ ರಾಜ್ಯ ಸರ್ಕಾರದ ಡ್ರಗ್ಸ್ ಲಾಜಿಸ್ಟಿಕ್ಸ್‌ನಲ್ಲಿ ಉಪ ನಿರ್ದೇಶಕರು, ಔಷಧಿ ವಿಭಾಗದ ಕರ್ತವ್ಯ ಮತ್ತು ಜವಾಬ್ದಾರಿಗಳಾದ ಔಷಧಿಗಳ ಪೂರೈಕೆ, ನಿರ್ವಹಣೆ, ವಿತರಣೆ ಮತ್ತು ಔಷಧಿ ವಿಶ್ಲೇಷಣೆಯನ್ನು ನಿರ್ವಹಿಸುತ್ತಿದ್ದಾರೆಂದು ವರದಿ ಮಾಡಿರುತ್ತಾರೆ.

ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ಇಲಾಖೆಯ ಆಸ್ಪತ್ರೆ/ನಿರ್ದೇಶನಾಲಯದ ಪ್ರಾದೇಶಿಕ ಔಷಧಿ ಉಗ್ರಾಣಗಳಿಗೆ ಮಂಜೂರಾಗಿರುವ

....3..

ಫಾರ್ಮಸಿಸ್ಟ್, ಹಿರಿಯ ಫಾರ್ಮಸಿಸ್ಟ್, ಹುದ್ದೆಗಳ ಹಾಗೂ ಪದವೀಧರ ಫಾರ್ಮಸಿಸ್ಟ್ ಹುದ್ದೆಗಳಾಗಿ ಉನ್ನತೀಕರಿಸಲು ಪ್ರಸ್ತಾಪಿಸಿರುವ ಹುದ್ದೆಗಳ ವಿವರಗಳನ್ನು ಈ ಕೆಳಕಂಡಂತೆ ಸಲ್ಲಿಸಿರುತ್ತಾರೆ:-

| ಕ್ರ ಸಂ. | ಕಾರ್ಮಿಕರ ರಾಜ್ಯ ವಿಮಾ ಆಸ್ಪತ್ರೆ/ಪ್ರಾದೇಶಿಕ ಔಷಧಿ ಉಗ್ರಾಣದ ಹೆಸರು | ಪ್ರಸ್ತುತ ಮಂಜೂರಾದ ಫಾರ್ಮಸಿಸ್ಟ್ ಹುದ್ದೆಗಳ ಸಂಖ್ಯೆ | ಹಿರಿಯ ಫಾರ್ಮಸಿಸ್ಟ್ ಹುದ್ದೆಗಳ ಸಂಖ್ಯೆ | ಪದವೀಧರ ಫಾರ್ಮಸಿಸ್ಟ್ ಹುದ್ದೆಗಳಾಗಿ ಉನ್ನತೀಕರಿಸಲು ಪ್ರಸ್ತಾಪಿಸಿರುವ ಹುದ್ದೆಗಳ ಸಂಖ್ಯೆ |
|---|---|---|---|---|
| 1 | 2 | 3 | 4 | 5 |
| 1. | ಪ್ರಾದೇಶಿಕ ಔಷಧಿ ಉಗ್ರಾಣ, ಕಾರ್ಮಿಕರ ರಾಜ್ಯ ವಿಮಾ ನಿರ್ದೇಶನಾಲಯ, ಬೆಂಗಳೂರು. | 21 | 05 | 01 |
| 2. | ಪ್ರಾದೇಶಿಕ ಔಷಧಿ ಉಗ್ರಾಣ, ಕಾರ್ಮಿಕರ ರಾಜ್ಯ ವಿಮಾ ಆಸ್ಪತ್ರೆ, ಇಂದಿರಾನಗರ, ಬೆಂಗಳೂರು. | 16 | 04 | 01 |
| 3. | ಪ್ರಾದೇಶಿಕ ಔಷಧಿ ಉಗ್ರಾಣ, ಕಾರ್ಮಿಕರ ರಾಜ್ಯ ವಿಮಾ ಆಸ್ಪತ್ರೆ, ಮೈಸೂರು. | 11 | 02 | 01 |
| 4. | ಪ್ರಾದೇಶಿಕ ಔಷಧಿ ಉಗ್ರಾಣ, ಕಾರ್ಮಿಕರ ರಾಜ್ಯ ವಿಮಾ ಆಸ್ಪತ್ರೆ, ಮಂಗಳೂರು. | 09 | 02 | 01 |
| 5. | ಪ್ರಾದೇಶಿಕ ಔಷಧಿ ಉಗ್ರಾಣ, ಕಾರ್ಮಿಕರ ರಾಜ್ಯ ವಿಮಾ ಆಸ್ಪತ್ರೆ, ಹುಬ್ಬಳ್ಳಿ. | 09 | 02 | 01 |
| 6. | ಪ್ರಾದೇಶಿಕ ಔಷಧಿ ಉಗ್ರಾಣ, ಕಾರ್ಮಿಕರ ರಾಜ್ಯ ವಿಮಾ ಆಸ್ಪತ್ರೆ, ದಾವಣಗೆರೆ. | 09 | 02 | 01 |

| 1 | 2 | 3 | 4 | 5 |
|---|---|---|---|---|
| 7. | ಪ್ರಾದೇಶಿಕ ಔಷಧಿ ಉಗ್ರಾಣ, ಕಾರ್ಮಿಕರ ರಾಜ್ಯ ವಿಮಾ ಆಸ್ಪತ್ರೆ, ಬೆಳಗಾವಿ. | 09 | 02 | 01 |
| | ಒಟ್ಟು | 84 | 19 | 07 |

ಮೇಲ್ಕಂಡ ಆಸ್ಪತ್ರೆ/ನಿರ್ದೇಶನಾಲಯಕ್ಕೆ ಮಂಜೂರಾಗಿರುವ ಫಾರ್ಮಸಿಸ್ಟ್‌ಗಳ ಹುದ್ದೆಗಳ ಪೈಕಿ ತಲಾ ಒಂದು ಫಾರ್ಮಸಿಸ್ಟ್ ಹುದ್ದೆಯನ್ನು ಉನ್ನತೀಕರಿಸುವುದರ ಮುಖಾಂತರ ಪದವೀಧರ ಫಾರ್ಮಸಿಸ್ಟ್ ಹುದ್ದೆಯನ್ನಾಗಿ ಸೃಜಿಸಬಹುದಾಗಿದೆ. ಈ ಹುದ್ದೆಯನ್ನು ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹಿರಿಯ ಫಾರ್ಮಸಿಸ್ಟ್/ಫಾರ್ಮಸಿಸ್ಟ್ ವೃಂದದಿಂದ ಪದೋನ್ನತಿ ಮುಖಾಂತರ ಭರ್ತಿ ಮಾಡಲು ಉದ್ದೇಶಿಸಿರುವುದರಿಂದ ಸರ್ಕಾರಕ್ಕೆ ಹೆಚ್ಚಿನ ಆರ್ಥಿಕ ಹೊರೆ ಉಂಟಾಗುವುದಿಲ್ಲವೆಂದು ತಿಳಿಸಿ ವಿವರಗಳನ್ನು ಈ ಕೆಳಕಂಡಂತೆ ನೀಡಿರುತ್ತಾರೆ:-

1) ಫಾರ್ಮಸಿಸ್ಟ್ ವೇತನ ಶ್ರೇಣಿ ₹14,550-26,700

2) ಹಿರಿಯ ಫಾರ್ಮಸಿಸ್ಟ್ ಇವರ ವೇತನ ಶ್ರೇಣಿ ₹20,000-36,300.

3) ಪದವೀಧರ ಫಾರ್ಮಸಿಸ್ಟ್ ಇವರ ವೇತನ ಶ್ರೇಣಿ ₹22,800-43,200.

7 ಪದವೀಧರ ಫಾರ್ಮಸಿಸ್ಟ್‌ಗಳನ್ನು ಉನ್ನತೀಕರಿಸಿದಲ್ಲಿ ವಾರ್ಷಿಕ ₹9,28,620-00 ವೆಚ್ಚವಾಗಲಿದ್ದು, ಈ ಪೈಕಿ ರಾಜ್ಯ ಸರ್ಕಾರದ ಪಾಲು ₹1,06,078-00 ಆಗಿದ್ದು, ಇಎಸ್‌ಐಸಿ ಪಾಲು ₹8,12,542-00 ಆಗಲಿದೆಯೆಂದು ವರದಿ ಮಾಡಿರುತ್ತಾರೆ.

ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ಇಲಾಖೆಗೆ ಒಟ್ಟಾರೆ 289 ಫಾರ್ಮಸಿಸ್ಟ್ ಹುದ್ದೆಗಳು ಮಂಜೂರಾಗಿದ್ದು, ಈ ಪೈಕಿ 7 ಹುದ್ದೆಗಳನ್ನು "ಪದವೀಧರ ಫಾರ್ಮಸಿಸ್ಟ್" ಹುದ್ದೆಗೆ ಉನ್ನತೀಕರಿಸುವುದರ ಮುಖಾಂತರ ಸೃಜಿಸುವ ಬಗ್ಗೆ ಹಾಗೂ ಈ ಹುದ್ದೆಯನ್ನು ಸೃಜಿಸಿದ ನಂತರ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಿಗೆ ಸೇರ್ಪಡೆ ಮಾಡಲು ಪ್ರಸ್ತಾವನೆ ಸಲ್ಲಿಸಲಾಗುವುದೆಂದು, "ಸೀನಿಯರ ಫಾರ್ಮಸಿಸ್ಟ್" ವೃಂದದಿಂದ ಅರ್ಹ ಅಭ್ಯರ್ಥಿಗಳು ದೊರಕದೇ ಇದ್ದ ಪಕ್ಷದಲ್ಲಿ "ಫಾರ್ಮಸಿಸ್ಟ್" ವೃಂದದಿಂದ ಭರ್ತಿ ಮಾಡಲು ತಿಳಿಸಿ ಮಂಜೂರಾತಿ ಆದೇಶ ಕೋರಿರುತ್ತಾರೆ.

....5..

ಓದಲಾದ (3)ರ ಆದೇಶದಲ್ಲಿ ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ಇಲಾಖೆಯ 302 ಫಾರ್ಮಾಸಿಸ್ಟ್ ಹುದ್ದೆಗಳಲ್ಲಿ 55 ಹುದ್ದೆಗಳನ್ನು "ಹಿರಿಯ ಫಾರ್ಮಾಸಿಸ್ಟ್ ಹುದ್ದೆಗಳೆಂದು ಉನ್ನತೀಕರಿಸಲು ಮಂಜೂರಾತಿ ನೀಡಿದೆ. ಈ ಹುದ್ದೆಯ ವೇತನ ಶ್ರೇಣಿ ₹10,000-18150(ಪರಿಷ್ಕೃತ 20,000-36,300) ಆಗಿರುತ್ತದೆ.

ನಿರ್ದೇಶಕರು, ಇಎಸ್ಐ ಇವರ ಪ್ರಸ್ತಾವನೆಯಂತೆ ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ಇಲಾಖೆಗೆ ಮಂಜೂರಾಗಿರುವ 289 ಫಾರ್ಮಸಿಸ್ಟ್ ಹುದ್ದೆಗಳ ಪೈಕಿ 7 ಹುದ್ದೆಗಳನ್ನು ಪದವೀಧರ ಫಾರ್ಮಸಿಸ್ಟ್ ಹುದ್ದೆಗೆ ಉನ್ನತೀಕರಿಸುವ ಪ್ರಸ್ತಾವನೆಯನ್ನು ಪರಿಶೀಲಿಸಿದ್ದು, ಅದರಂತೆ ಈ ಕೆಳಕಂಡ ಆದೇಶ:-

<u>ಸರ್ಕಾರದ ಆದೇಶ ಸಂಖ್ಯೆ.ಕಾಇ 419 ಎಲ್ಎಸ್ಐ 2012,</u>
<u>ಬೆಂಗಳೂರು, ದಿನಾಂಕ:14-08-2014.</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ಇಲಾಖೆಯ ಫಾರ್ಮಸಿಸ್ಟ್ ವೃಂದದಲ್ಲಿನ 237 ಹುದ್ದೆಗಳ ಪೈಕಿ 7 ಹುದ್ದೆಗಳನ್ನು "ಪದವೀಧರ ಫಾರ್ಮಸಿಸ್ಟ್" ಹುದ್ದೆಗಳೆಂದು ಉನ್ನತೀಕರಿಸಲು ಮಂಜೂರಾತಿ ನೀಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 385 ಸೇ-3/14, ದಿನಾಂಕ:25-06-2014ರ ಸಹಮತಿಯ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

Nagesha Rao V.
(ವಿ.ನಾಗೇಶ ರಾವ್)
ಪೀಠಾಧಿಕಾರಿ,
ಕಾರ್ಮಿಕ ಇಲಾಖೆ.
(ಕಾರಾವಿ ಯೋ ವೈ. ಸೇವೆಗಳು)

ಗೆ,

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ನಿರ್ದೇಶಕರು, ಕಾರ್ಮಿಕ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು, ರಾಜಾಜಿನಗರ, ಬೆಂಗಳೂರು,
3) ಸರ್ಕಾರದ ಜಂಟಿ ಕಾರ್ಯದರ್ಶಿ (ಸೇವೆಗಳು) ಆರ್ಥಿಕ ಇಲಾಖೆ, ವಿಧಾನ ಸೌಧ,
4) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಉಪ ಕಾರ್ಯದರ್ಶಿ-2ರವರ ಆಪ್ತ ಕಾರ್ಯದರ್ಶಿ, ಕಾರ್ಮಿಕ ಇಲಾಖೆ.
5) ಶಾಖಾ ರಕ್ಷಕ ಕಡತ : ಹೆಚ್ಚುವರಿ ಪ್ರತಿ.

ಕರ್ನಾಟಕ ಸರ್ಕಾರ

ಸಂ: ಕಾಇ 559 ಎಲ್‌ಎಸ್‌ಐ 2014

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:12.02.2018.

**ಇವರಿಂದ,**
ಸರ್ಕಾರದ ಕಾರ್ಯದರ್ಶಿ,
ಕಾರ್ಮಿಕ ಇಲಾಖೆ,
ವಿಕಾಸ ಸೌಧ.

**ಇವರಿಗೆ,**
ನಿರ್ದೇಶಕರು,
ಕಾರ್ಮಿಕ ರಾಜ್ಯ ವಿಮಾ ಯೋಜನೆ
ವೈದ್ಯಕೀಯ ಸೇವೆಗಳು,
ರಾಜಾಜಿನಗರ,ಬೆಂಗಳೂರು-10.

**ಮಾನ್ಯರೇ,**

**ವಿಷಯ:-** ಕಾರಾವಿ ಯೋ.ವೈ.ಸೇವೆಗಳು ಇಲಾಖೆಯ ಫಾರ್ಮಸಿಸ್ಟ್ ವೃಂದದಿಂದ ಉನ್ನತೀಕರಿಸಿರುವ 7 ಪದವೀಧರ ಫಾರ್ಮಸಿಸ್ಟ್ ಹುದ್ದೆಗಳಿಗೆ ಕಾರ್ಯಕಾರಿ ಆದೇಶದ ಮುಖಾಂತರ ಪದೋನ್ನತಿ ನೀಡುವ ಬಗ್ಗೆ.

**ಉಲ್ಲೇಖ:-** 1) ತಮ್ಮ ಪತ್ರ ಸಂಖ್ಯೆ: ಅಭಿವೃದ್ಧಿ/142/2005-06 ದಿನಾಂಕ:18-10-2017.
2) ಸಮ ಸಂಖ್ಯೆಯ ದಿನಾಂಕ: 25-11-2016, 23-09-2017 ಮತ್ತು 06-12-2017ರ ಪತ್ರ.

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ. ಪದವಿಧರ ಫಾರ್ಮಸಿಸ್ಟ್ ವೃಂದ ಮತ್ತು ಫಾರ್ಮಸಿಸ್ಟ್ ವೃಂದದ ಮಧ್ಯೆಯಿರುವ ಹಿರಿಯ ಫಾರ್ಮಸಿಸ್ಟ್ ವೃಂದವನ್ನು ಬಿಟ್ಟು ನೇರವಾಗಿ ಫಾರ್ಮಸಿಸ್ಟ್ ವೃಂದದಿಂದ ಪದವಿಧರ ಫಾರ್ಮಸಿಸ್ಟ್ ಹುದ್ದೆಗೆ ಪದೋನ್ನತಿ ನೀಡುವುದು ಸಮಂಜಸವಾಗುವುದಿಲ್ಲ. ಅದು ತಾರತಮ್ಯ ಮತ್ತು ಅನಿಯಂತ್ರಿತ ವಿಧಾನವಾಗುತ್ತದೆ ಹಾಗೂ ಫಾರ್ಮಸಿಸ್ಟ್ ವೃಂದಕ್ಕೆ 'ಡಿ' ಫಾರ್ಮ ವಿದ್ಯಾರ್ಹತೆಯನ್ನು ನಿಗಧಿಪಡಿಸಿರುವುದರಿಂದ ಮುಂಬಡ್ತಿ ವೃಂದವಾದ ಹಿರಿಯ ಫಾರ್ಮಸಿಸ್ಟ್ ವೃಂದದಲ್ಲಿ 'ಬಿ' ಫಾರ್ಮ ಮಾಡಿದ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಲಭ್ಯವಾಗದೇ ಇರುವ ಸಾಧ್ಯತೆ ಇರುತ್ತದೆ. ಆದ್ದರಿಂದ ಪದವಿಧರ ಫಾರ್ಮಸಿಸ್ಟ್ ಹುದ್ದೆಗೆ ಈ ಕೆಳಕಂಡಂತೆ ನೇಮಕಾತಿ ವಿಧಾನವನ್ನು ನಿಗಧಿಪಡಿಸುವ ಬಗ್ಗೆ ಪರಿಶೀಲಿಸುವಂತೆ ತಮಗೆ ತಿಳಿಸಲು ನಿರ್ದೇಶಿತಳಾಗಿದ್ದೇನೆ.

**"ಹಿರಿಯ ಫಾರ್ಮಸಿಸ್ಟ್ ವೃಂದದಿಂದ ಮುಂಬಡ್ತಿ ಮೂಲಕ ಭರ್ತಿ ಮಾಡುವುದು, ಒಂದುವೇಳೆ ಅರ್ಹ ಅಭ್ಯರ್ಥಿಗಳು ಲಭ್ಯವಾಗದೇ ಇದ್ದಲ್ಲಿ, ನೇರ ನೇಮಕಾತಿ ಮೂಲಕ ಭರ್ತಿ ಮಾಡುವುದು."**

ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು
ನಿರ್ದೇಶಕರ ಆಪ್ತ ಶಾಖೆ
ಪತ್ರ ಸಂಖ್ಯೆ 1200/2017-2018
15 FEB 2018
ಬೆಂಗಳೂರು-560 010

ತಮ್ಮ ನಂಬುಗೆಯ
Ramani
(ರಮಣಿ)
ಪೀಠಾಧಿಕಾರಿ-5
ಕಾರ್ಮಿಕ ಇಲಾಖೆ
(ಕಾ.ರಾ.ವಿ.ಯೋ.ವೈ.ಸೇವೆಗಳು)

ಕರ್ನಾಟಕ ಸರ್ಕಾರ

ಸಂ:ಕಾಇ 559 ಎಲ್ಎಸ್ಐ 2014

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 25-11-2016

**ಇವರಿಂದ,**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಕಾರ್ಮಿಕ ಇಲಾಖೆ,
ವಿಕಾಸ ಸೌಧ.

ನಿರ್ದೇಶಕರು
ಕಾರ್ಮಿಕರ ರಾಜ್ಯ ವಿಮಾ
(ವೈದ್ಯಕೀಯ) ಸೇವೆಗಳು
29 NOV 2016
922
ಬೆಂಗಳೂರು-560 010

ಇವರಿಗೆ,
ನಿರ್ದೇಶಕರು,
ಕಾರ್ಮಿಕ ರಾಜ್ಯ ವಿಮಾ ಯೋಜನೆ
ವೈದ್ಯಕೀಯ ಸೇವೆಗಳು,
ರಾಜಾಜಿನಗರ,ಬೆಂಗಳೂರು-10.

**ಮಾನ್ಯರೇ,**

ವಿಷಯ:- ಕಾರಾವಿ ಯೋ.ವೈ.ಸೇವೆಗಳು ಇಲಾಖೆಯ ಫಾರ್ಮಸಿಸ್ಟ್ ವೃಂದದಿಂದ ಉನ್ನತೀಕರಿಸಿರುವ 7 ಪದವೀಧರ ಫಾರ್ಮಸಿಸ್ಟ್ ಹುದ್ದೆಗಳಿಗೆ ಕಾರ್ಯಕಾರಿ ಆದೇಶದ ಮುಖಾಂತರ ಪದೋನ್ನತಿ ನೀಡುವ ಬಗ್ಗೆ.

ಉಲ್ಲೇಖ:- 1) ತಮ್ಮ ಪತ್ರ ಸಂಖ್ಯೆ: ಅಭಿವೃದ್ಧಿ 142/2005-06, ದಿನಾಂಕ: 18-10-2016.
2) ಅದ್ಯಕ್ಷರು, ಕರ್ನಾಟಕ ರಾಜ್ಯ ಕಾ.ರಾ.ವಿ.ಯೋ.ವೈ.ಸೇ ಇಲಾಖೆ ಫಾರ್ಮಸಿಸ್ಟ್ ಸಂಘ (ರಿ) ಬೆಂಗಳೂರು ಇವರ ಪತ್ರ ದಿನಾಂಕ: 03-11-2016

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ (1) ಪತ್ರದತ್ತ ಗಮನ ಸೆಳೆಯಲಾಗಿದೆ. ಕಾ.ರಾ.ವಿ.ಯೋ.ವೈ ಸೇವೆಗಳ ಇಲಾಖೆಯ ಫಾರ್ಮಸಿಸ್ಟ್ ವೃಂದದಿಂದ 7 ಪದವೀಧರ ಫಾರ್ಮಸಿಸ್ಟ್ ಹುದ್ದೆಗಳನ್ನು ಉನ್ನತೀಕರಿಸಿ ಸೃಜಿಸಲಾಗಿದೆ. ಈ ಹುದ್ದೆಗಳಿಗೆ ನೇಮಕಾತಿ ವಿಧಾನವನ್ನು ರೂಪಿಸುವ ಬಗ್ಗೆ ಉಲ್ಲೇಖಿತ (2)ರ ಸಲ್ಲಿಸಿರುವ ಮನವಿಯನ್ನು ಕೂಲಂಕುಷವಾಗಿ ಪರಿಶೀಲಿಸಿತು. ಈ ಕೆಳಗಿನ 2 ಅಂಶಗಳ ಬಗ್ಗೆಯೂ ಸಹ ಸರ್ಕಾರಕ್ಕೆ ಮಾಹಿತಿ ನೀಡುವಂತೆ ತಮ್ಮನ್ನು ಕೋರಲು ನಿರ್ದೇಶಿತನಾಗಿದ್ದೇನೆ.

1) ಪ್ರಸ್ತುತ ಕಾರಾವಿ ಇಲಾಖೆಯಲ್ಲಿ ಫಾರ್ಮಸಿಸ್ಟ್/ಹಿರಿಯ ಫಾರ್ಮಸಿಸ್ಟ್ ಹುದ್ದೆಗಳಿಗೆ ಆಕುಕ ಇಲಾಖೆಯಲ್ಲಿರುವಂತೆ ವೃಂದ ಮತ್ತು ನೇಮಕಾತಿ ನಿಯಮಗಳನ್ನೆ ಅಳವಡಿಸಿಕೊಳ್ಳಲಾಗಿದೆಯೇ?
2) ಆಕುಕ ಇಲಾಖೆಯಲ್ಲಿ ಪ್ರಸ್ತುತ ಪದವೀಧರ ಫಾರ್ಮಸಿಸ್ಟ್ ಹುದ್ದೆಗಳಿಗೆ ನಿಗದಿಪಡಿಸಲಾದ ವೃಂದ ಮತ್ತು ನೇಮಕಾತಿ ನಿಯಮಗಳನ್ನೆ ಕಾರಾವಿ ಇಲಾಖೆಯಲ್ಲಿ ಹೊಸದಾಗಿ ಸೃಜಿಸಲಾದ 7 ಪಧವೀಧರ ಫಾರ್ಮಸಿಸ್ಟ್ ಹುದ್ದೆಗಳಿಗೆ ಅಳವಡಿಸುವ ಕುರಿತು ದಿನಾಂಕ: 03-11-2016ರ ಫಾರ್ಮಸಿಸ್ಟ್ ಸಂಘದ ಮನವಿಯನ್ನು ಪರಿಶೀಲಿಸಿ ಮಾಹಿತಿ ನೀಡುವುದು.

ತಮ್ಮ ವಿಶ್ವಾಸಿ,
(ಲಕ್ಷ್ಮೀದೇವಿ)
ಪೀಠಾಧಿಕಾರಿ-5
ಕಾರ್ಮಿಕ ಇಲಾಖೆ
(ಕಾ.ರಾ.ವಿ.ಯೋ.ವೈ.ಸೇವೆಗಳು)

(೮)

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:**-ಕಾರಾವಿ ಇಲಾಖೆಗೆ ಮಂಜೂರಾಗಿರುವ ಕಾನೂನು ಸಹಾಯಕರ ಹುದ್ದೆಯಿಂದ ಒಂದು ಹುದ್ದೆಯನ್ನು ಕಾನೂನು ಅಧಿಕಾರಿ ಹುದ್ದೆಯನ್ನಾಗಿ ಉನ್ನತೀಕರಿಸುವ ಬಗ್ಗೆ.

**ಓದಲಾಗಿದೆ:-**

ನಿರ್ದೇಶಕರು, ಕಾರಾವಿ ಯೋಜನೆ ವೈದ್ಯಕೀಯ ಸೇವೆಗಳು
ಇವರ ಪತ್ರ ಸಂ: ಅಭಿವೃದ್ಧಿ/177/2016-17, ದಿನಾಂಕ: 27-10-2016.

**ಪ್ರಸ್ತಾವನೆ:-**

ಕಾ.ರಾ.ವಿ.ಯೋ.ವೈ.ಸೇ ಅಪಿಕ ನೌಕರರ ಸಂಘದವರು ದಿನಾಂಕ: 5-10-2016ರ ಮನವಿಯಲ್ಲಿ ಕಾರಾವಿ ಇಲಾಖೆಗೆ ಮಂಜೂರಾಗಿರುವ ಕಾನೂನು ಸಹಾಯಕರ ಹುದ್ದೆಯಿಂದ ಒಂದು ಹುದ್ದೆಯನ್ನು ಕಾನೂನು ಅಧಿಕಾರಿ ಹುದ್ದೆಯನ್ನಾಗಿ ಉನ್ನತೀಕರಿಸುವ ಬಗ್ಗೆ ನಿರ್ದೇಶಕರು, ಕಾ.ರಾ.ವಿ.ಯೋ.ವೈ.ಸೇ ಇವರಿಗೆ ಮನವಿ ಸಲ್ಲಿಸಿರುತ್ತಾರೆ. ಆ ಮೇರೆಗೆ ಮೇಲೆ ಓದಲಾದ ಪತ್ರದಲ್ಲಿ ಇಲಾಖಾ ನಿರ್ದೇಶಕರು ಈ ಕೆಳಕಂಡಂತೆ ಪ್ರಸ್ತಾವನೆ ಸಲ್ಲಿಸಿದ್ದಾರೆ.

ಸರ್ಕಾರದ ಆದೇಶ ಸಂಖ್ಯೆ: ಕಾಇ 44 ಎಲ್.ಎಸ್.ಐ 1999, ದಿನಾಂಕ: 27-1-1999ರನ್ವಯ 3 ಕಾನೂನು ಸಹಾಯಕರ ಹುದ್ದೆಗಳನ್ನು ಸೃಜಿಸಲಾಗಿದ್ದು, ಇದರಲ್ಲಿ ಎರಡು ಹುದ್ದೆಗಳು ಖಾಲಿ ಇದ್ದು, ಒಬ್ಬರು ಮಾತ್ರ ಕಾರ್ಯ ನಿರ್ವಹಿಸುತ್ತಿದ್ದಾರೆ. ಪ್ರಸ್ತುತವಿರುವ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಇವರಿಗೆ ಮುಂಬಡ್ತಿಯ ಅವಕಾಶವಿರುವುದಿಲ್ಲ.

ಇಲಾಖೆಯ ವಿಮಾದಾರರ ಸೌಲಭ್ಯಕ್ಕನುಗುಣವಾಗಿ ವೈದ್ಯಕೀಯ ಸವಲತ್ತುಗಳನ್ನು ಸಮರ್ಪಕವಾಗಿ ನೀಡುವಲ್ಲಿ ಅಧಿಕಾರಿ/ಸಿಬ್ಬಂದಿಗಳಲ್ಲಿ ಕಾರ್ಯಕ್ಷಮತೆ, ಶಿಸ್ತನ್ನು ಪರಿಪಾಲಿಸಬೇಕಾಗಿರುತ್ತದೆ. ಸರ್ಕಾರಿ ನಿಯಮಗಳನ್ನು ಉಲ್ಲಂಘಿಸುವ ಪ್ರಕರಣಗಳಲ್ಲಿ ಇಲಾಖಾ ವಿಚಾರಣಾ ಪ್ರಕ್ರಿಯೆಯನ್ನು ಕೈಗೊಳ್ಳಬೇಕಾಗಿರುತ್ತದೆ. ಇಲಾಖೆಯು ಬೆಳದಂತೆ ಇಲಾಖಾ ವಿಚಾರಣಾ ಪ್ರಕ್ರಿಯೆಗಳಲ್ಲದೇ ಕರ್ನಾಟಕ ಆಡಳಿತ ನ್ಯಾಯಮಂಡಳಿ, ಕರ್ನಾಟಕ ಉಚ್ಛ ನ್ಯಾಯಾಲಯ, ಗ್ರಾಹಕ ದೂರುಗಳ ವಿವಾರಣಾ ಮಂಡಳಿ ಹಾಗೂ ಕಾರ್ಮಿಕ ನ್ಯಾಯಮಂಡಳಿಗಳಲ್ಲಿ ಪ್ರಕರಣಗಳು ದಾಖಲಾಗಿರುವುದರಿಂದ ಪ್ರಕರಣಗಳ ನಿರ್ವಹಣೆ ಕಷ್ಟ ಸಾಧ್ಯವಾಗಿದೆ. ಇಲಾಖೆಗೆ ಮಂಜೂರಾಗಿರುವ ಕಾನೂನು ಸಹಾಯಕರ ಹುದ್ದೆಯಿಂದ ಒಂದು ಹುದ್ದೆಯನ್ನು ಕಾನೂನು ಅಧಿಕಾರಿ ಹುದ್ದೆಗೆ ಉನ್ನತೀಕರಿಸುವುದರಿಂದ ಸಂಬಂಧಪಟ್ಟ ವಿಷಯಗಳತ್ತ ಹೆಚ್ಚಿನ ಗಮನವನ್ನು ಹರಿಸಿ ಕಾನೂನು ರೀತಿಯಲ್ಲಿನ ಸಮಸ್ಯೆಗಳನ್ನು ಸಕಾಲದಲ್ಲಿ ಪರಿಹರಿಸುವಲ್ಲಿ ಸಹಾಯಕವಾಗುತ್ತದೆ.

ಕಾರ್ಮಿಕ ರಾಜ್ಯ ವಿಮಾ ಯೋಜನೆ (ವೈದ್ಯಕೀಯ) ಸೇವೆಗಳು 243 03 ಬೆಂಗಳೂರು

ಪ್ರಸ್ತುತ ಇಲಾಖೆಯಲ್ಲಿನ ಗ್ರೂಪ್ ಸಿ ಮತ್ತು ಗ್ರೂಪ್ ಡಿ ನೌಕರರ ಇಲಾಖಾ ವಿಚಾರಣಾ ಪ್ರಕರಣಗಳಲ್ಲಿ ನಿವೃತ್ತ ನ್ಯಾಯಾಂಗ ಅಧಿಕಾರಿಯನ್ನು ವಿಚಾರಣಾ ಅಧಿಕಾರಿಯನ್ನಾಗಿ ನೇಮಕ ಮಾಡುತ್ತಿದ್ದು, ಒಂದು ಪ್ರಕರಣಕ್ಕೆ ರೂ. 18,000/-ರಂತೆ ಸಂಭಾವನೆಯನ್ನು ಸರ್ಕಾರದಿಂದ ಪಾವತಿ ಮಾಡುತ್ತಿರುವುದರಿಂದ ವಾರ್ಷಿಕ ಸರಾಸರಿ ರೂ. 3,00,000/-ವರೆಗೆ ವೆಚ್ಚ ಉಂಟಾಗುತ್ತದೆ. ಕಾನೂನು ಅಧಿಕಾರಿಯು ಇಲಾಖೆಯಲ್ಲಿ ಲಭ್ಯವಿದ್ದಲ್ಲಿ ಸದರಿಯವರಿಂದಲೇ ಇಲಾಖಾ ವಿಚಾರಣೆ ಪ್ರಕ್ರಿಯೆಗಳು ನಡೆಸಬಹುದಾಗಿರುವುದರಿಂದ ಸರ್ಕಾರಕ್ಕೆ ಮೇಲ್ಕಂಡ ವೆಚ್ಚವು ಉಳಿತಾಯವಾಗುತ್ತದೆ.

.....2

ಕಾನೂನು ಸಹಾಯಕರ ವೇತನ ಶ್ರೇಣಿ ರೂ. 20,000-36,300 ಆಗಿದ್ದು, ಒಂದು ಹುದ್ದೆಯನ್ನು ಕಾನೂನು ಅಧಿಕಾರಿಯಾಗಿ ಉನ್ನತೀಕರಿಸಿದಲ್ಲಿ ಈ ಹುದ್ದೆಯ ವೇತನ ಶ್ರೇಣಿ ರೂ. 21,600-40050 ವೇತನ ಶ್ರೇಣಿ ಆಗಿದ್ದು, ಇದು ಇಲಾಖೆಗೆ ಮಂಜೂರಾಗಿರುವ ಸಹಾಯಕ ಆಡಳಿತಾಧಿಕಾರಿ ಹುದ್ದೆಯ ವೇತನ ಶ್ರೇಣಿಗೆ ಸಮಾನಾಂತರವಾಗಿರುತ್ತದೆ. ಕಾನೂನು ಅಧಿಕಾರಿಯವರ ಹುದ್ದೆಗೆ ಜೇಷ್ಠತೆ ಹಾಗೂ ಅರ್ಹತೆ ಆಧಾರದ ಮೇಲೆ ಕಾನೂನು ಸಹಾಯಕರನ್ನು ಮುಂಬಡ್ತಿ ನೀಡುವ ಮೂಲಕ ನೇಮಕಾತಿ ಮಾಡಲು ಪ್ರಸ್ತಾಪಿಸಲಾಗಿದ್ದು, ಇದರಿಂದಾಗಿ ಸರ್ಕಾರಕ್ಕೆ ಹೆಚ್ಚಿನ ಆರ್ಥಿಕ ಹೊರೆ ಉಂಟಾಗುವುದಿಲ್ಲ. ಇಲಾಖೆಯು ಮಾಡುವ ಒಟ್ಟು ವೆಚ್ಚದಲ್ಲಿ ಶೇ 87.50ರಷ್ಟು ಕಾರಾವಿ ನಿಗಮವು ಮತ್ತು ಶೇ 12.50ರಷ್ಟು ರಾಜ್ಯ ಸರ್ಕಾರವು ಭರಿಸುತ್ತದೆ.

ಈ ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಇಲಾಖೆಗೆ ಮಂಜೂರಾಗಿರುವ ಮೂರು ಕಾನೂನು ಸಹಾಯಕರ ಹುದ್ದೆಗಳ ಪೈಕಿ ಒಂದು ಹುದ್ದೆಯನ್ನು ಕಾನೂನು ಅಧಿಕಾರಿಯನ್ನಾಗಿ ಉನ್ನತೀಕರಿಸಿ ಕಾರಾವಿ ನಿರ್ದೇಶನಾಲಯ, ರಾಜಾಜಿನಗರ, ಬೆಂಗಳೂರು ಇಲ್ಲಿ ಸೃಜಿಸಿ ಸರ್ಕಾರದ ವತಿಯಿಂದ ಮಂಜೂರಾತಿ ಆದೇಶ ಹೊರಡಿಸಬೇಕಾಗಿ ನಿರ್ದೇಶಕರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂ: ಕಾಇ 427 ಎಲ್‌ಎಸ್‌ಐ 2016, ಬೆಂಗಳೂರು, ದಿನಾಂಕ: 02-06-2017</u>**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನಲೆಯಲ್ಲಿ ಆಡಳಿತಾತ್ಮಕ ಹಿತದೃಷ್ಟಿಯಿಂದ ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳ ಇಲಾಖೆಗೆ ಮಂಜೂರಾಗಿರುವ 3 ಕಾನೂನು ಸಹಾಯಕರ ಹುದ್ದೆಗಳ ಪೈಕಿ 1 ಕಾನೂನು ಸಹಾಯಕರ (20,000-36,300) ಹುದ್ದೆಯನ್ನು ಕಾನೂನು ಅಧಿಕಾರಿ (ವೇತನ ಶ್ರೇಣಿ ರೂ 21,600-40,050) ಹುದ್ದೆಗೆ ಉನ್ನತೀಕರಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂ: ಆಇ 220 ವೆಚ್ಚ-9/2017, ದಿನಾಂಕ: 18-5-2017 ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
ಎಂ.ಎಂ. Raju 2/6
(ಎಂ.ಎಂ ರಾಜು)
ಪೀಠಾಧಿಕಾರಿ-5
ಕಾರ್ಮಿಕ ಇಲಾಖೆ
(ಕಾ.ರಾವಿ.ಯೋ.ವೈ.ಸೇವೆಗಳು)

ಗೆ.

1) ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ)ರವರ ಕಾರ್ಯದರ್ಶಿ, ಕರ್ನಾಟಕ,ಹೊಸಕಟ್ಟಡ,"ಆಡಿಟ್ ಭವನ"ಅಂಚೆ ಪೆಟ್ಟಿಗೆ ಸಂ:5398,ಬೆಂಗಳೂರು-1.
2) ಪ್ರಧಾನ ಮಹಾಲೇಖಪಾಲರು (ಇ & ಆರ್ ಎಸ್ ಜಿ & ಎಸ್ ಎಸ್ ಎ)ರವರ ಕಾರ್ಯದರ್ಶಿ,ಕರ್ನಾಟಕ,ಹೊಸಕಟ್ಟಡ,"ಆಡಿಟ್ ಭವನ"ಅಂಚೆ ಪೆಟ್ಟಿಗೆ ಸಂ:5398,ಬೆಂಗಳೂರು-1.
3) ಪ್ರಧಾನ ಮಹಾಲೇಖಪಾಲರು (ಎ & ಇ)ರವರ ಕಾರ್ಯದರ್ಶಿ,ಕರ್ನಾಟಕ,ಪಾರ್ಕ್ ಹೌಸ್ ರಸ್ತೆ,ಅಂಚೆ ಪೆಟ್ಟಿಗೆ ಸಂ:5329,ಬೆಂಗಳೂರು-1.
4) ನಿರ್ದೇಶಕರು, ಕಾ.ರಾ.ವಿ.ವೈ.ಸೇವೆಗಳ ನಿರ್ದೇಶನಾಲಯ, ರಾಜಾಜಿನಗರ, ಬೆಂಗಳೂರು.
5) ಆಂತರಿಕ ಆರ್ಥಿಕ ಸಲಹೆಗಾರರು ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಸ.ಕ/ಹಿಂ.ವ.ಕಲ್ಯಾಣ/ಕಾರ್ಮಿಕ /ಮಮಅ ಮತ್ತು ಆ.ಸಂ.ಕಲ್ಯಾಣ ಇಲಾಖೆ,ವಿಕಾಸಸೌಧ.
6) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ 3& 9), ವಿಧಾನ ಸೌಧ, ಬೆಂಗಳೂರು.
7) ಶಾಖಾ ರಕ್ಷ ಕಡತ/ಹೆಚ್ಚುವರಿ ಪ್ರತಿ.

ಕರ್ನಾಟಕ ಸರ್ಕಾರ

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ಅಧಿಕೃತ ಜ್ಞಾಪನ

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ.
ಬೆಂಗಳೂರು. ದಿನಾಂಕ : ೧-೮-೧೯೯೬.

ಸಂಖ್ಯೆ : ಸಿಆಸುಇ ೩೮ ಸೇನಿಇ ೯೬,

ವಿಷಯ : ನೇಮಕಾತಿ ವಿಧಾನದ ಬಗ್ಗೆ ನಿಯಮಗಳು ಇಲ್ಲದಿದ್ದ ಪ್ರಕರಣಗಳಲ್ಲಿ ಕಾರ್ಯಕಾರಿ ಆದೇಶಗಳನ್ನು ಹೊರಡಿಸುವ ಬಗ್ಗೆ.

ಉಲ್ಲೇಖ : (೧) ಅಧಿಕೃತ ಜ್ಞಾಪನ ಸಂಖ್ಯೆ : ಡಿಪಿಎಆರ್ ೨ ಎಸ್‌ಸಿಆರ್ ೮೩.
ದಿನಾಂಕ : ೨೨-೧-೮೩

(೨) ಅಧಿಕೃತ ಜ್ಞಾಪನ ಸಂಖ್ಯೆ : ಡಿಪಿಎಆರ್ ೨೯ ಎಸ್‌ಡಿಇ ೮೪.
ದಿನಾಂಕ : ೧೯-೪-೮೫

(೩) ಅಧಿಕೃತ ಜ್ಞಾಪನ ಸಂಖ್ಯೆ : ಡಿಸಿಎ ೩ ಎಆರ್‌ಬಿ ೮೮
ದಿನಾಂಕ : ೧೬-೫-೮೯

ಮೇಲೆ ಉಲ್ಲೇಖಿಸಿರುವ ಅಧಿಕೃತ ಜ್ಞಾಪನಗಳಲ್ಲಿ ಸರ್ಕಾರಿ ಸೇವೆಯಲ್ಲಿರುವ ಹುದ್ದೆಗಳಿಗೆ ನೇಮಕಾತಿ ವಿಧಾನದ ಬಗ್ಗೆ ನಿಯಮಗಳು ಇಲ್ಲದಿದ್ದ ಪ್ರಕರಣಗಳಲ್ಲಿ ಕಾರ್ಯಕಾರಿ ಆದೇಶವನ್ನು ಹೊರಡಿಸುವ ವಿಷಯದಲ್ಲಿ ಸೂಚನೆಗಳನ್ನು ನೀಡಲಾಗಿದೆ. ಉಲ್ಲೇಖ ೩ರಲ್ಲಿ ಸೂಚಿಸಿರುವ ಅಧಿಕೃತ ಜ್ಞಾಪನದನ್ವಯ ಸಂವಿಧಾನ ಪರಿಚ್ಛೇದ ೩೦೯ರ ಪ್ರಕಾರ ಹೊರಡಿಸ ಬೇಕಾಗಿರುವ ಅಧಿಸೂಚನೆಗಳಿಗೆ ಬದಲಾಗಿ ಕಾರ್ಯಕಾರಿ ಆದೇಶಗಳನ್ನಾಗಲೀ ಅಥವಾ ಇತರ ಸೂಚನೆಗಳನ್ನಾಗಲೀ ರಾಜ್ಯಪಾಲರ ಅನುಮತಿ ಇಲ್ಲದೆ ಹೊರಡಿಸಬಾರದೆಂದು ಆದೇಶಿಸಲಾಗಿದೆ. ಈ ಸೂಚನೆಗಳನ್ನು ನೀಡಿದಾಗ ನೇಮಕಾತಿ ನಿಯಮಗಳನ್ನು ಭಾರತ ಸಂವಿಧಾನದ ಪರಿಚ್ಛೇದ ೩೦೯ರ ಪರಂತುಕದಡಿ ರಾಜ್ಯಪಾಲರ ಅನುಮೋದನೆ ಮೇರೆಗೆ ಹೊರಡಿಸಲಾಗುತ್ತಿತ್ತು.

ಈಗ ಪರಿಸ್ಥಿತಿಯಲ್ಲಿ ಬದಲಾವಣೆ ಉಂಟಾಗಿ ಕರ್ನಾಟಕ ರಾಜ್ಯ ಸಿವಿಲ್ ಸೇವಾ ಅಧಿನಿಯಮ, ೧೯೭೮ ದಿನಾಂಕ ೨-೪-೧೯೯೨ ರಂದು ಜಾರಿಗೆ ಬಂದಿರುತ್ತದೆ. ಇದರಿಂದಾಗಿ ನೇಮಕಾತಿ ನಿಯಮಗಳನ್ನು ಸಂವಿಧಾನದ ಪರಿಚ್ಛೇದ ೩೦೯ರ ಪರಂತುಕದಡಿ ಹೊರಡಿಸಲು ಆಸ್ಪದವಿರುವುದಿಲ್ಲ. ಇವನ್ನು ಮೇಲೆ ಹೇಳಲಾದ ಅಧಿನಿಯಮದಡಿ ಸರ್ಕಾರ ಹೊರಡಿಸಬೇಕಾಗಿರುತ್ತದೆ. ಈ ಅಧಿನಿಯಮದಡಿ ನಿಗದಿಪಡಿಸಿರುವ ಕ್ರಮದನ್ವಯ ನಿಯಮಗಳನ್ನು ಹೊರಡಿಸಲು ಸಾಕಷ್ಟು ಕಾಲಾವಕಾಶದ ಅವಶ್ಯಕತೆ ಇದೆ. ಇದರಿಂದಾಗಿ ಹೊಸದಾಗಿ ಸೃಷ್ಟಿಸಿರುವ ಹುದ್ದೆಗಳಿಗೆ ಮತ್ತು ನೇಮಕಾತಿ ನಿಯಮಗಳನ್ನು ರೂಪಿಸದಿರುವ ಹುದ್ದೆಗಳಿಗೆ ನೇಮಕಾತಿಯನ್ನು ಮಾಡಲು ಸಾಧ್ಯವಾಗದೆ ಆಡಳಿತದ ಹಿತದೃಷ್ಟಿಯಿಂದ ಹುದ್ದೆಗಳನ್ನು ಸೃಷ್ಟಿಸುವ ಉದ್ದೇಶ ಪರಿಪೂರ್ಣಗೊಳ್ಳುತ್ತಿಲ್ಲ.

ಮೇಲಿನ ಅಂಶಗಳನ್ನೆಲ್ಲಾ ಸರ್ಕಾರ ಪರಿಶೀಲಿಸಿ, ಸರ್ಕಾರವೇ ಅಧಿನಿಯಮದಡಿ ನಿಯಮಗಳನ್ನು ರೂಪಿಸಬಹುದಾಗಿರುವುದರಿಂದ ಈ ನಿಯಮಗಳನ್ನು ರೂಪಿಸುವುದನ್ನು ಕಾಯ್ದಿರಿಸಿ ಹೊಸದಾಗಿ ಸೃಷ್ಟಿಸಿರುವ ಹುದ್ದೆಗಳಿಗೆ ಹಾಗೂ ನಿಯಮಗಳನ್ನು ರೂಪಿಸದಿರುವ ಹುದ್ದೆಗಳಿಗೆ ಕಾರ್ಯಕಾರಿ ಆದೇಶಗಳನ್ನು ಹೊರಡಿಸುವುದು ಸೂಕ್ತವೆಂದು ಭಾವಿಸಿದೆ. ಈ ಹಿನ್ನೆಲೆಯಲ್ಲಿ ನೇಮಕಾತಿ ವಿಧಾನದ ಬಗ್ಗೆ ಕಾರ್ಯಕಾರಿ ಆದೇಶವನ್ನು ಕೆಳಕಾಣಿಸಿದ ಷರತ್ತುಗಳಿಗೆ ಒಳಪಡಿಸಿ ಹೊರಡಿಸತಕ್ಕದ್ದೆಂದು ಸರ್ಕಾರ ಈ ಮೂಲಕ ನಿರ್ದೇಶಿಸಿದೆ.

೧) ಆದಷ್ಟು ಮಟ್ಟಿಗೆ ಕಾರ್ಯಕಾರಿ ಆದೇಶವನ್ನು ಹೊರಡಿಸುವುದನ್ನು ತಡೆಗಟ್ಟಿ ಕರ್ನಾಟಕ ರಾಜ್ಯ ಸಿವಿಲ್ ಸೇವಾ ಅಧಿನಿಯಮ ೧೯೭೮ರಡಿ ನೇಮಕಾತಿ ನಿಯಮಗಳನ್ನು ರೂಪಿಸತಕ್ಕದ್ದು ;

೨) ಹೊಸದಾಗಿ ಸೃಷ್ಟಿಸುವ ಹುದ್ದೆಗಳಿಗೆ ಹಾಗೂ ನೇಮಕಾತಿ ವಿಧಾನವನ್ನು ರೂಪಿಸದಿರುವ ಹುದ್ದೆಗಳಿಗೆ, ನೇಮಕಾತಿ ವಿಧಾನವನ್ನು ಕೂಡಲೇ ರೂಪಿಸುವುದು ಅತ್ಯಾವಶ್ಯಕ. ಆದರೆ, ಎಲ್ಲಿ ಈ ರೀತಿ ನೇಮಕಾತಿ ನಿಯಮಗಳನ್ನು ರೂಪಿಸುವುದರಲ್ಲಿ ವಿಳಂಬವಾಗುವ ಸಾಧ್ಯತೆ ಇದೆಯೋ ಅಂತಹಾ ಪ್ರಕರಣಗಳಲ್ಲಿ ಮಾತ್ರ ಕಾರ್ಯಕಾರಿ ಆದೇಶವನ್ನು ಹೊರಡಿಸತಕ್ಕದ್ದು ;

೩) ಈ ರೀತಿ ಕಾರ್ಯಕಾರಿ ಆದೇಶವನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಮುಖೇನ ಮುಖ್ಯಮಂತ್ರಿಗಳ ಅನುಮೋದನೆ ಪಡೆದು ಅಧಿನಿಯಮದಡಿ ನೇಮಕಾತಿ ವಿಧಾನವನ್ನು ರೂಪಿಸುವುದನ್ನು ಕಾಯ್ದಿರಿಸಿ ಹೊರಡಿಸತಕ್ಕದ್ದು ;

೪) ಈ ರೀತಿ ಕಾರ್ಯಕಾರಿ ಆದೇಶವನ್ನು ಹೊರಡಿಸಿದ ಆರು ತಿಂಗಳೊಳಗಾಗಿ ಕರ್ನಾಟಕ ರಾಜ್ಯ ಸಿವಿಲ್ ಸೇವಾ ಅಧಿನಿಯಮ, ೧೯೭೮ರಡಿ ಈ ಹುದ್ದೆಗಳಿಗೆ ನೇಮಕಾತಿ ನಿಯಮಗಳನ್ನು ನಿಗದಿಪಡಿಸತಕ್ಕದ್ದು ;

ಅಬ್ದುಲ್ ಖದೀರ್
ಸರ್ಕಾರದ ಸಹ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು)

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ಇಲಾಖೆಯಲ್ಲಿ ಹೊಸದಾಗಿ ಸೃಜಿಸಿರುವ ಗ್ರೂಪ್-ಬಿ ವೃಂದದ ಕಾನೂನು ಅಧಿಕಾರಿ ಹುದ್ದೆಗೆ ಕಾರ್ಯಕಾರಿ ಆದೇಶದ ಮೂಲಕ ನೇಮಕಾತಿ ವಿಧಾನವನ್ನು ನಿಗದಿಪಡಿಸುವ ಕುರಿತು.

ಓದಲಾಗಿದೆ:-

1. ಸರ್ಕಾರದ ಅಧಿಸೂಚನೆ ಸಂಖ್ಯೆ: ಎಲ್‌ಡಿ 176 ಎಲ್‌ಎಸ್‌ಐ 2006, ದಿನಾಂಕ: 07.12.2007
2. ಸರ್ಕಾರದ ಆದೇಶ ಸಂಖ್ಯೆ; ಕಾಇ 427 ಎಲ್‌ಎಸ್‌ಐ 2016, ದಿನಾಂಕ: 02.06.2017
3. ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 38 ಸೇನಿಇ 96, ದಿನಾಂಕ: 01.08.1996.

*****

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ(1)ರಲ್ಲಿ ಓದಲಾದ ದಿನಾಂಕ:07.12.2007ರ ಅಧಿಸೂಚನೆಯಲ್ಲಿ ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳ ಇಲಾಖೆಗೆ ಸಂಬಂಧಿಸಿದಂತೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಲಾಗಿದ್ದು, ಹೊಸದಾಗಿ ಸೃಜಿಸಲಾದ ಕಾನೂನು ಅಧಿಕಾರಿ ಹುದ್ದೆಯು ಈ ನಿಯಮಗಳಲ್ಲಿ ಸೇರ್ಪಡೆಯಾಗಿರುವುದಿಲ್ಲ.

ಮೇಲೆ ಕ್ರಮ ಸಂಖ್ಯೆ(2) ರಲ್ಲಿ ಓದಲಾದ ದಿನಾಂಕ:02.06.2017ರ ಸರ್ಕಾರದ ಆದೇಶದಲ್ಲಿ ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳ ಇಲಾಖೆಯಲ್ಲಿ ಒಂದು ಕಾನೂನು ಅಧಿಕಾರಿ ಹುದ್ದೆಯನ್ನು ಹೊಸದಾಗಿ ಸೃಜಿಸಿ ಆದೇಶಿಸಲಾಗಿದೆ.

ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳ ಇಲಾಖೆಯಲ್ಲಿ ಹೊಸದಾಗಿ ಸೃಜಿಸಲಾದ ಕಾನೂನು ಅಧಿಕಾರಿ ಹುದ್ದೆಗೆ ನೇಮಕಾತಿ ವಿಧಾನವನ್ನು ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡುವ ಮೂಲಕ ಸೇರ್ಪಡೆಗೊಳಿಸಿ, ಹುದ್ದೆಯನ್ನು ಭರ್ತಿ ಮಾಡಲು ಸಾಕಷ್ಟು ಕಾಲಾವಕಾಶ ಬೇಕಾಗಿರುತ್ತದೆ. ಇಲಾಖೆಯ ವಿಮಾದಾರರ ಸೌಲಭ್ಯಕ್ಕನುಗುಣವಾಗಿ ವೈದ್ಯಕೀಯ ಸವಲತ್ತುಗಳನ್ನು ಸಮರ್ಪಕವಾಗಿ ನೀಡುವಲ್ಲಿ ಅಧಿಕಾರಿ/ಸಿಬ್ಬಂದಿಗಳಲ್ಲಿ ಕಾರ್ಯಕ್ಷಮತೆ, ಶಿಸ್ತನ್ನು ಪರಿಪಾಲಿಸಬೇಕಾಗಿರುತ್ತದೆ. ಸರ್ಕಾರಿ ನಿಯಮಗಳನ್ನು ಉಲ್ಲಂಘಿಸುವ ಪ್ರಕರಣಗಳಲ್ಲಿ ಇಲಾಖಾ ವಿಚಾರಣಾ ಪ್ರಕ್ರಿಯೆಯನ್ನು ಕೈಗೊಳ್ಳಬೇಕಾಗಿರುತ್ತದೆ. ಇಲಾಖೆಯು ಬೆಳದಂತೆ ಇಲಾಖಾ ವಿಚಾರಣಾ ಪ್ರಕ್ರಿಯೆಗಳಲ್ಲದೇ ಕರ್ನಾಟಕ ಆಡಳಿತ ನ್ಯಾಯಮಂಡಳಿ, ಕರ್ನಾಟಕ ಉಚ್ಚ ನ್ಯಾಯಾಲಯ, ಗ್ರಾಹಕ ಹೂಡಿಕೆ ವಿಚಾರಣಾ ಮಂಡಳಿ ಹಾಗೂ ಕಾರ್ಮಿಕ ನ್ಯಾಯಮಂಡಳಿಗಳಲ್ಲಿ ಪ್ರಕರಣಗಳು ದಾಖಲಾಗಿರುವುದರಿಂದ ಪ್ರಕರಣಗಳ ನಿರ್ವಹಣೆ ಕಷ್ಟ ಸಾಧ್ಯವಾಗಿದೆ. ಇಲಾಖೆಗೆ ಕಾನೂನು ಅಧಿಕಾರಿಯನ್ನು ನೇಮಿಸುವುದರಿಂದ ಸಂಬಂಧಪಟ್ಟ ವಿಷಯಗಳತ್ತ ಹೆಚ್ಚಿನ ಗಮನವನ್ನು ಹರಿಸಿ ಕಾನೂನು ರೀತಿಯಲ್ಲಿನ ಸಮಸ್ಯೆಗಳನ್ನು ಸಕಾಲದಲ್ಲಿ ಪರಿಹರಿಸುವಲ್ಲಿ ಸಹಾಯಕವಾಗುತ್ತದೆ.

1391 19-3-2018
23 MAR 2018
ಬೆಂಗಳೂರು

ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳ ಇಲಾಖೆಯಲ್ಲಿ ಇಲಾಖಾ ವಿಚಾರಣೆಗಳು ಹಾಗೂ ಮಾನ್ಯ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳ ಕಡತಗಳನ್ನು ಸೂಕ್ತ ರೀತಿಯಲ್ಲಿ ನಿರ್ವಹಿಸಲು ಅನುವಾಗುವಂತೆ ಹೊಸದಾಗಿ ಸೃಜಿಸಲಾಗಿರುವ ಈ ಹುದ್ದೆಯನ್ನು ಆದ್ಯತೆ ಮೇಲೆ ಭರ್ತಿ ಮಾಡುವುದು ಅವಶ್ಯಕವಾಗಿರುತ್ತದೆ. ಆದುದರಿಂದ, ಕಾರ್ಯಕಾರಿ ಆದೇಶದ ಮೂಲಕ ನೇಮಕಾತಿ ವಿಧಾನವನ್ನು ನಿಗಧಿಪಡಿಸಿ, ಈ ಹುದ್ದೆಯನ್ನು ಭರ್ತಿ ಮಾಡಲು ಉದ್ದೇಶಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳ (ನೇಮಕಾತಿ) ನಿಯಮಗಳು, 2007ಕ್ಕೆ ಸೂಕ್ತ ತಿದ್ದುಪಡಿ ತರುವುದನ್ನು ಕಾಯ್ದಿರಿಸಿ, ಮೇಲೆ (3)ರಲ್ಲಿ ಓದಲಾದ ಅಧಿಕೃತ ಜ್ಞಾಪನದಲ್ಲಿನ ಮಾರ್ಗಸೂಚಿಗಳನ್ನು ಅಳವಡಿಸಿಕೊಂಡು, ಕಾರ್ಯಕಾರಿ ಆದೇಶ ಹೊರಡಿಸುವ ಮೂಲಕ ಈ ಹುದ್ದೆಗೆ ನೇಮಕಾತಿ ವಿಧಾನವನ್ನು ಜಾರಿಗೆ ತರಲು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕಾಇ 427 ಎಲ್ಎಸ್ಐ 2016, ದಿನಾಂಕ:22/03/2018.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರದ ಆದೇಶ ಸಂಖ್ಯೆ: ಕಾಇ 427 ಎಲ್ಎಸ್ಐ 2016, ದಿನಾಂಕ:02.06.2017 ರಲ್ಲಿ ಹೊಸದಾಗಿ ಸೃಜಿಸಲಾದ ಕಾನೂನು ಅಧಿಕಾರಿ (ವೇತನ ಶ್ರೇಣಿ ರೂ.21,600-40,050) ಹುದ್ದೆಗೆ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಈ ಆದೇಶದ ಅನುಬಂಧದಲ್ಲಿ ನಮೂದಿಸಿರುವಂತೆ ನೇಮಕಾತಿ ಕಾರ್ಯವಿಧಾನವನ್ನು ನಿಗಧಿಪಡಿಸಲಾಗಿದೆ.

1) ಈ ಕಾರ್ಯಕಾರಿ ಆದೇಶದ ಮೂಲಕ ನಿಗದಿಪಡಿಸಿದ ನೇಮಕಾತಿ ವಿಧಾನವು ಸದರಿ ಕಾರ್ಯಕಾರಿ ಆದೇಶವನ್ನು ಹೊರಡಿಸಿದ ದಿನಾಂಕದಿಂದ ಆರು ತಿಂಗಳ ಅವಧಿಗೆ ಮಾತ್ರ ಜಾರಿಯಲ್ಲಿರುತ್ತದೆ;
2) ಆರು ತಿಂಗಳ ಒಳಗಾಗಿ ಈ ಹುದ್ದೆಗಳಿಗೆ ನೇಮಕಾತಿ ಕಾರ್ಯವಿಧಾನವನ್ನು ಕರ್ನಾಟಕ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳ(ನೇಮಕಾತಿ) ನಿಯಮಗಳಿಗೆ ತಿದ್ದುಪಡಿ ಮಾಡಿ ಅಳವಡಿಸತಕ್ಕದ್ದು.
3) ಆರು ತಿಂಗಳ ನಂತರ ಈ ಕಾರ್ಯಕಾರಿ ಆದೇಶವು ತನ್ನಿಂದ ತಾನೇ ರದ್ದಾಗುತ್ತದೆ.

ಈ ಆದೇಶವನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು-2) ರ ಟಿಪ್ಪಣಿ ಸಂಖ್ಯೆ: ಸಿಆಸುಇ 14 ಡಿಸೇನಿ 2018, ದಿನಾಂಕ:20-03-2018ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

Ramani
(ರಮಣಿ)
ಪೀಠಾಧಿಕಾರಿ-5,
ಕಾರ್ಮಿಕ ಇಲಾಖೆ.
(ಕಾ.ರಾ.ವಿ.ಯೋ.ವೈ. ಸೇವೆಗಳು)

**ಪ್ರತಿಗಳು:**

1. ಮಹಾಲೇಖಪಾಲರು (ಲೆಕ್ಕಪತ್ರ ಮತ್ತು ಲೆಕ್ಕ ಪರಿಶೋಧನೆ)ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.
2. ನಿರ್ದೇಶಕರು, ಕಾರ್ಮಿಕ ರಾಜ್ಯ ವಿಮಾ ಯೋಜನೆ, ವೈದ್ಯಕೀಯ ಸೇವೆಗಳು, ರಾಜಾಜಿನಗರ, ಬೆಂಗಳೂರು.
3. ಸರ್ಕಾರದ ಅಧೀನ ಕಾರ್ಯದರ್ಶಿ, ಸಿ.ಆ.ಸು(ಸೇವಾನಿಯಮಗಳು-2), ವಿಧಾನ ಸೌಧ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಾರ್ಮಿಕ ಇಲಾಖೆ.
5. ಶಾಖಾ ರಕ್ಷಕ ಕಡತ : ಹೆಚ್ಚುವರಿ ಪ್ರತಿ.

<u>ಅನುಬಂಧ</u>

| ಕ್ರ. ಸಂ. | ಹುದ್ದೆಯ ಪ್ರವರ್ಗ ಮತ್ತು ವೇತನ ಶ್ರೇಣಿ | ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ | ಕನಿಷ್ಠ ವಿದ್ಯಾರ್ಹತೆ |
|---|---|---|---|---|
| 1. | ಕಾನೂನು ಅಧಿಕಾರಿ (ರೂ.21,600 – 40,050) | 01 | (1) ಕಾನೂನು ಸಹಾಯಕರ ಹುದ್ದೆಯಿಂದ ಜೇಷ್ಠತೆ ಮತ್ತು ಅರ್ಹತೆ ಆಧಾರದ ಮೇಲೆ ಮುಂಬಡ್ತಿಯ ಮೂಲಕ<br><br>(2) ಮುಂಬಡ್ತಿಗೆ ಸೂಕ್ತ ಅಭ್ಯರ್ಥಿಯು ಲಭ್ಯವಿಲ್ಲದಿದ್ದಾಗ ನೇರ ನೇಮಕಾತಿಯ ಮೂಲಕ | <u>ಮುಂಬಡ್ತಿಗೆ.–</u><br><br>(1) ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಕಾನೂನು ಪದವಿ ಹೊಂದಿರಬೇಕು.<br><br>2) ಕಾನೂನು ಸಹಾಯಕರ ಹುದ್ದೆಯಲ್ಲಿ ಕನಿಷ್ಟ ಐದು ವರ್ಷಗಳ ಸೇವೆ ಸಲ್ಲಿಸಿರಬೇಕು.<br><br><u>ನೇರನೇಮಕಾತಿಗೆ.–</u><br><br>ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಕಾನೂನು ಪದವಿ ಹೊಂದಿರಬೇಕು. |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

Ramani
(ರಮಣಿ)
ಪೀಠಾಧಿಕಾರಿ–5,
ಕಾರ್ಮಿಕ ಇಲಾಖೆ.
(ಕಾ.ರಾ.ವಿ.ಯೋ.ವೈ. ಸೇವೆಗಳು)
23/03

KA/BG-GPO/2515/WPP-47/2006-2008

ಸುವರ್ಣ ಕರ್ನಾಟಕ - 2006

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ಪತ್ರಿಕೆ

| ಭಾಗ - I | ಬೆಂಗಳೂರು, ಸೋಮವಾರ, ಸೆಪ್ಟೆಂಬರ್ ೪, ೨೦೦೬ (ಭಾದ್ರಪದ ೧೩, ಶಕ ವರ್ಷ ೧೯೨೮) | ನಂ. ೧೧೩೩ |
|---|---|---|

## ಕರ್ನಾಟಕ ಸರ್ಕಾರದ ನಡವಳಿಗಳು

ಕಾರ್ಮಿಕ ಸಚಿವಾಲಯ

**<u>ವಿಷಯ</u>:-** ಕಾರಾವಿ ಯೋಜನೆ (ವೈದ್ಯಕೀಯ) ಸೇವೆಗಳು ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿಮಾ ವೈದ್ಯಾಧಿಕಾರಿಗಳಿಗೆ ಕಾಲಬದ್ಧ ಪದೋನ್ನತಿಯ ಸೌಲಭ್ಯವನ್ನು ವಿಸ್ತರಿಸುವ ಬಗ್ಗೆ.

**ಓದಲಾಗಿದೆ:-** 1. ನಿರ್ದೇಶಕರು, ಕಾರಾವಿ ಯೋಜನೆ (ವೈದ್ಯಕೀಯ) ಸೇವೆಗಳು ಇಲಾಖೆಯ ಪತ್ರ ಸಂ:ಅಭಿವೃದ್ಧಿ/20/95-96, ದಿನಾಂಕ:20-05-06 ಮತ್ತು ದಿನಾಂಕ:20-07-06.

2. ಅಧ್ಯಕ್ಷರು, ಕರ್ನಾಟಕ ಸರ್ಕಾರ ಕಾರ್ಮಿಕ ರಾಜ್ಯ ವಿಮಾ ವೈದ್ಯಾಧಿಕಾರಿಗಳ ಸಂಘ ಇವರ ದಿನಾಂಕ:22-03-06ರ ಮನವಿ

**ಪ್ರಸ್ತಾವನೆ :-**

ನಿರ್ದೇಶಕರು, ಕಾರಾವಿ ಯೋಜನೆ (ವೈ) ಸೇವೆಗಳು ಇವರು ಮೇಲೆ ಓದಲಾದ (1) ರಲ್ಲಿ ಸರ್ಕಾರದ ಆದೇಶ ಸಂ: ಹೆಚ್ ಎಫ್ ಡಬ್ಲ್ಯು 222 ಎಂ.ಎಸ್.ಎನ್ 90, ದಿನಾಂಕ: 19-07-91ರ ಆದೇಶದಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ವೈದ್ಯಾಧಿಕಾರಿಗಳಿಗೆ ಕಾಲಬದ್ಧ ಪದೋನ್ನತಿಯ ಸೌಲಭ್ಯವನ್ನು ವಿಸ್ತರಿಸಿದ್ದು, ಸದರಿ ಸೌಲಭ್ಯವನ್ನು ಕಾರಾವಿ ಯೋಜನೆ (ವೈ) ಸೇವೆ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿಮಾ ವೈದ್ಯಾಧಿಕಾರಿಗಳಿಗೂ ಸಹ ವಿಸ್ತರಿಸುವಂತೆ ಕೋರಿರುತ್ತಾರೆ. ಮುಂದುವರೆದು ತಮ್ಮ ಪತ್ರದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿನ ವೈದ್ಯರಂತೆಯೇ, ಕಾರಾವಿ ಯೋಜನೆ (ವೈ) ಸೇವೆಯ ವಿಮಾ ವೈದ್ಯಾಧಿಕಾರಿಗಳನ್ನು ಸಹ ಆಯ್ಕೆ ಮಾಡಲಾಗುತ್ತಿದ್ದು, ಈ ಎರಡು ಇಲಾಖೆಯ ವೈದ್ಯಾಧಿಕಾರಿಗಳ ವಿದ್ಯಾರ್ಹತೆ, ವೇತನ ಶ್ರೇಣಿ, ಕರ್ತವ್ಯ ಹಾಗೂ ಹೊಣೆಗಾರಿಕೆ ಮತ್ತು ಸೇವಾ ನಿಯಮಾವಳಿ ಒಂದೇ ಆಗಿರುತ್ತದೆ. ಆದ್ದರಿಂದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವೈದ್ಯಾಧಿಕಾರಿಗಳಿಗೆ ಯಾವ ರೀತಿ ಸೌಲಭ್ಯವನ್ನು ವಿಸ್ತರಿಸುವರೋ ಅದೇ ಸೌಲಭ್ಯವನ್ನು ಕಾರಾವಿ ಯೋಜನೆ (ವೈ) ಸೇವೆ ಇಲಾಖೆಯ ವೈದ್ಯಾಧಿಕಾರಿಗಳಿಗೂ ವಿಸ್ತರಿಸುವುದು; ಸ್ವಾಭಾವಿಕವಾಗಿ ನ್ಯಾಯ ಸಮ್ಮತವಾಗಿರುತ್ತದೆ. ಆದ್ದರಿಂದ ವಿಮಾ ವೈದ್ಯಾಧಿಕಾರಿಗಳಿಗೂ ಕಾಲಬದ್ಧ ಪದೋನ್ನತಿ ಸೌಲಭ್ಯವನ್ನು ವಿಸ್ತರಿಸುವುದು ಅಗತ್ಯವೆಂದು ವಿವರಿಸಿರುತ್ತಾರೆ.

ಈ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿಮಾ ವೈದ್ಯಾಧಿಕಾರಿಗಳಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ನೀಡಿರುವ ಪದೋನ್ನತಿಯಂತೆ, ಕನಿಷ್ಟ ಆರು ವರ್ಷ ಸೇವೆಯನ್ನು ಪೂರ್ಣಗೊಳಿಸಿದ ವಿಮಾ ವೈದ್ಯಾಧಿಕಾರಿಗಳಿಗೆ ಒಂದು ಕಾಲಬದ್ಧ ಪದೋನ್ನತಿಯನ್ನು ಮತ್ತು 13 ವರ್ಷ ಸೇವೆಯನ್ನು ಪೂರ್ಣಗೊಳಿಸಿದವರಿಗೆ ನೇರವಾಗಿ 2 ಕಾಲಬದ್ಧ ಪದೋನ್ನತಿಯನ್ನು ನೀಡಲು ಸರ್ಕಾರದ ಮಂಜೂರಾತಿಯನ್ನು

ನೀಡಲು ಕೋರಿರುತ್ತಾರೆ. ಮೇಲೆ ಓದಲಾದ (2)ರಲ್ಲಿ ಅಧ್ಯಕ್ಷರು, ಕರ್ನಾಟಕ ಸರ್ಕಾರ, ಕಾರ್ಮಿಕರ ರಾಜ್ಯ ವಿಮಾ ವೈದ್ಯಾಧಿಕಾರಿಗಳ ಸಂಘ ಇವರು ಸಹ ಕಾಲಬದ್ಧ ಪದೋನ್ನತಿಯನ್ನು ವಿಸ್ತರಿಸುವಂತೆ ಮನವಿ ಮಾಡಿರುತ್ತಾರೆ.

ಸರ್ಕಾರವು ನಿರ್ದೇಶಕರು, ಕಾರಾವಿ ಯೋಜನೆ (ವೈ) ಸೇವೆ ಇಲಾಖೆ ಇವರ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಕಾರಾವಿ ಯೋಜನೆ (ವೈ) ಸೇವೆಗಳು ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ವಿಮಾ ವೈದ್ಯಾಧಿಕಾರಿಗಳಿಗೆ ಸಾಕಷ್ಟುಪದೋನ್ನತಿಯ ಸೌಲಭ್ಯವನ್ನು ಒದಗಿಸಿ ಅವರ ಸೇವಾ ದಕ್ಷತೆಯನ್ನು ಹಾಗೂ ಅವರ ಕಾರ್ಯಕ್ಷಮತೆಯನ್ನು ಹೆಚ್ಚಿಸುವ ದೃಷ್ಟಿಯಿಂದ ಈ ಆದೇಶವನ್ನು ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕಾಇ 356 ಎಲ್ ಎಸ್ ಐ 95, ಬೆಂಗಳೂರು, ದಿನಾಂಕ:04-09-2006**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಯಲ್ಲಿ ಕಾರಾವಿ ಯೋಜನೆ (ವೈ) ಸೇವೆಗಳು ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿಮಾ ವೈದ್ಯಾಧಿಕಾರಿಗಳಿಗೆ ಕಾಲಬದ್ಧ ಪದೋನ್ನತಿಯ ಸೌಲಭ್ಯವನ್ನು ವಿಸ್ತರಿಸಲಾಗಿದೆ.

**ಈ ಸೌಲಭ್ಯದಿಂದ ಈ ಕೆಳಕಂಡ ಪದನಾಮಕ್ಕೆ ಬದಲಾಗಿ ಹೊಸದಾಗಿ ಪದನಾಮವನ್ನು ಮಾಡಲಾಗಿದೆ.**

| ಕ್ರ. ಸಂ. | ಪ್ರಸ್ತುತ ಇರುವ ಪದನಾಮ | ಪುನರ್ ನಾಮಕರಣ ಮಾಡಲಾದ ಪದನಾಮ |
|---|---|---|
| 1 | ವಿಮಾ ವೈದ್ಯಾಧಿಕಾರಿಗಳು | ವಿಮಾ ವೈದ್ಯಾಧಿಕಾರಿಗಳು |
| 2 | ಉಪಶಸ್ತ್ರಚಿಕಿತ್ಸಕರು | ಜೂನಿಯರ್ ಸ್ಪೆಷಲಿಸ್ಟ್ / ಹಿರಿಯ ವಿಮಾ ವೈದ್ಯಾಧಿಕಾರಿಗಳು |
| 3 | ಶಸ್ತ್ರಚಿಕಿತ್ಸಕರು | ಸೀನಿಯರ್ ಸ್ಪೆಷಲಿಸ್ಟ್/ ಮುಖ್ಯ ವಿಮಾ ವೈದ್ಯಾಧಿಕಾರಿಗಳು |

1. **ವಿಮಾ ವೈದ್ಯಾಧಿಕಾರಿಗಳು:** ಈ ಯೋಜನೆಯಲ್ಲಿ ವಿಮಾ ವೈದ್ಯಾಧಿಕಾರಿಗಳಾಗಿ ನೇಮಕಾತಿ ಹೊಂದಿದ್ದು, 06 ವರ್ಷಕ್ಕೂ ಕಡಿಮೆ ಸೇವೆಯನ್ನು ಸಲ್ಲಿಸಿದವರನ್ನು ವಿಮಾ ವೈದ್ಯಾಧಿಕಾರಿಗಳೆಂದೇ ನಾಮಕರಣ ಮಾಡಲಾಗಿದ್ದು, ಅವರು ತಮ್ಮ ಪ್ರಸ್ತುತ ವೇತನ ಶ್ರೇಣಿ ರೂ.7400–200–8800–260–10880–320–13120ರ ವೇತನಶ್ರೇಣಿಯಲ್ಲಿಯೇ ಮುಂದುವರೆಯುತ್ತಾರೆ.

2. **ಹಿರಿಯ ವಿಮಾ ವೈದ್ಯಾಧಿಕಾರಿಗಳು/ಜೂನಿಯರ್ ಸ್ಪೆಷಲಿಸ್ಟ್:** ವಿಮಾ ವೈದ್ಯಾಧಿಕಾರಿಗಳಾಗಿ ಆರು ವರ್ಷ ಸೇವೆಯನ್ನು ಪೂರ್ಣಗೊಳಿಸಿದವರನ್ನು ಹಿರಿಯ ವಿಮಾವೈದ್ಯಾಧಿಕಾರಿಗಳಾಗಿ ಪುನರ್ ನಾಮಕರಣ ಮಾಡಲಾಗಿದೆ. ಹಾಗೂ ವೈದ್ಯಕೀಯ ಸ್ನಾತಕೋತ್ತರ ಪದವಿ ಅಥವಾ ಡಿಪ್ಲೊಮಾ ಹೊಂದಿದವರನ್ನು ಜೂನಿಯರ್ ಸ್ಪೆಷಲಿಸ್ಟ್ ಎಂದು ಪದನಾಮ ನೀಡಲಾಗಿದೆ. ಹಾಗೂ ಈ ಕೆಳಕಂಡ ವೇತನ ಶ್ರೇಣಿಯನ್ನು ನಿಗಧಿಗೊಳಿಸಲಾಗಿರುತ್ತದೆ. ರೂ.8000–200–8800–260–10880–320–13440.

3. **ಮುಖ್ಯ ವಿಮಾ ವೈದ್ಯಾಧಿಕಾರಿಗಳು/ಸೀನಿಯರ್ ಸ್ಪೆಷಲಿಸ್ಟ್:** ವಿಮಾ ವೈದ್ಯಾಧಿಕಾರಿಗಳಾಗಿ 13 ವರ್ಷ ಸೇವೆಯನ್ನು ಪೂರ್ಣಗೊಳಿಸಿದ್ದು, (ಉಪಶಸ್ತ್ರ ಚಿಕಿತ್ಸಕರ ಹುದ್ದೆಯಲ್ಲಿ ಸಲ್ಲಿಸಿದ ಸೇವೆಯನ್ನು ಒಳಗೊಂಡಂತೆ) ವಿಮಾ ವೈದ್ಯಾಧಿಕಾರಿಗಳಿಗೆ ಮುಖ್ಯ ವಿಮಾ ವೈದ್ಯಾಧಿಕಾರಿಗಳೆಂದು ಪುನರ್ ನಾಮಕರಣ ಮಾಡಲಾಗಿದೆ. ಸ್ನಾತಕೋತ್ತರ ವೈದ್ಯಕೀಯ ಪದವಿ ಅಥವಾ ಡಿಪ್ಲೊಮಾ ಹೊಂದಿರುವ ವಿಮಾ ವೈದ್ಯಾಧಿಕಾರಿಗಳಿಗೆ ಸೀನಿಯರ್ ಸ್ಪೆಷಲಿಸ್ಟ್ ಎಂಬ ಪದನಾಮ ನೀಡಲಾಗಿದೆ, ಈ ವೇತನ ಶ್ರೇಣಿಯನ್ನು ನಿಗಧಿಗೊಳಿಸಲಾಗಿದೆ. ರೂ.9580–260–10880–320–13440–380–14200.

4. **ಕರ್ತವ್ಯ ನಿರ್ವಹಿಸಲು ಗುರುತಿಸಲಾದ ಸ್ಥಳ :ವಿಮಾ ವೈದ್ಯಾಧಿಕಾರಿಗಳು,** ಕಾರಾವಿ ಚಿಕಿತ್ಸಾಲಯ, ನಿರ್ದೇಶನಾಲಯ ಹಾಗೂ ರೋಗ ಪತ್ತೆ ಹಚ್ಚುವ ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸತಕ್ಕದ್ದು. ಸ್ನಾತಕೋತ್ತರ ಪದವಿ/ಡಿಪ್ಲೊಮಾ ಹೊಂದಿರುವ ವಿಮಾ ವೈದ್ಯಾಧಿಕಾರಿಗಳು ಆದ್ಯತೆಯ ಮೇಲೆ ಕಾರಾವಿ ಆಸ್ಪತ್ರೆಗಳಲ್ಲಿ ಕರ್ತವ್ಯ ನಿರ್ವಹಿಸತಕ್ಕದ್ದು.

**ಹಿರಿಯ ವಿಮಾವೈದ್ಯಾದಿಕಾರಿಗಳು / ಜೂನಿಯರ್ ಸ್ಪೆಷಲಿಸ್ಟ್:** ಹಿರಿಯ ವಿಮಾವೈದ್ಯಾಧಿಕಾರಿಗಳು ಕಾರಾವಿ ಚಿಕಿತ್ಸಾಲಯ, ರೋಗ ಪತ್ತೆ ಹಚ್ಚುವ ಕೇಂದ್ರ ಮತ್ತು ನಿರ್ದೇಶನಾಲಯದಲ್ಲಿ ಕಾರ್ಯ ನಿರ್ವಹಿಸುವುದು. ಹಾಗೂ ಕಾರಾವಿ ಆಸ್ಪತ್ರೆಗಳಲ್ಲಿ ತಜ್ಞ ವೈದ್ಯರು ಲಭ್ಯವಿಲ್ಲದ ಪಕ್ಷದಲ್ಲಿ ಮಾತ್ರ ಕಾರಾವಿ ಆಸ್ಪತ್ರೆ ಮತ್ತು ರೋಗ ಪತ್ತೆ ಹಚ್ಚುವ ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸುವುದು. ಜೂನಿಯರ್ ಸ್ಪೆಷಲಿಸ್ಟ್ ಇವರು ಆಧ್ಯತೆಯ ಮೇಲೆ ಕಾರಾವಿ ಆಸ್ಪತ್ರೆಗಳಲ್ಲಿಯೇ ಕಾರ್ಯನಿರ್ವಹಿಸುವುದು. ಕಾರಾವಿ ಆಸ್ಪತ್ರೆ ಮತ್ತು ರೋಗ ಪತ್ತೆ ಹಚ್ಚುವ ಕೇಂದ್ರಗಳಲ್ಲಿ ಹುದ್ದೆಗಳು ಖಾಲಿ ಇಲ್ಲದ ಸಂದರ್ಭದಲ್ಲಿ ಮಾತ್ರ ಕಾರಾವಿ ಚಿಕಿತ್ಸಾಲಯಗಳಲ್ಲಿ ಕಾರ್ಯ ನಿರ್ವಹಿಸುವುದು.

**ಮುಖ್ಯ ವಿಮಾ ವೈದ್ಯಾಧಿಕಾರಿಗಳು / ಸೀನಿಯರ್ ಸ್ಪೆಷಲಿಸ್ಟ್:** ಮುಖ್ಯ ವಿಮಾವೈದ್ಯಾಧಿಕಾರಿಗಳು ಕಾರಾವಿ ಚಿಕಿತ್ಸಾಲಯ, ರೋಗ ಪತ್ತೆ ಹಚ್ಚುವ ಕೇಂದ್ರ ಮತ್ತು ನಿರ್ದೇಶನಾಲಯದಲ್ಲಿ ಕಾರ್ಯ ನಿರ್ವಹಿಸುವುದು. ಹಾಗೂ ಕಾರಾವಿ ಆಸ್ಪತ್ರೆಗಳಲ್ಲಿ ತಜ್ಞ ವೈದ್ಯರು ಲಭ್ಯವಿಲ್ಲದ ಪಕ್ಷದಲ್ಲಿ ಮಾತ್ರ ಕಾರಾವಿ ಆಸ್ಪತ್ರೆ ಮತ್ತು ರೋಗ ಪತ್ತೆ ಹಚ್ಚುವ ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸುವುದು. ಸೀನಿಯರ್ ಸ್ಪೆಷಲಿಸ್ಟ್ ಇವರು ಆಧ್ಯತೆಯ ಮೇಲೆ ಕಾರಾವಿ ಆಸ್ಪತ್ರೆಗಳಲ್ಲಿಯೇ ಕಾರ್ಯ ನಿರ್ವಹಿಸುವುದು. ಕಾರಾವಿ ಆಸ್ಪತ್ರೆ ಮತ್ತು ರೋಗ ಪತ್ತೆ ಹಚ್ಚುವ ಕೇಂದ್ರಗಳಲ್ಲಿ ಹುದ್ದೆಗಳು ಖಾಲಿ ಇಲ್ಲದ ಸಂದರ್ಭದಲ್ಲಿ ಮಾತ್ರ ಕಾರಾವಿ ಚಿಕಿತ್ಸಾಲಯಗಳಲ್ಲಿ ಕಾರ್ಯ ನಿರ್ವಹಿಸುವುದು.

5. **ಕಾಲಬದ್ಧ ಪದೋನ್ನತಿಯು ಇಲ್ಲಿಗೆ ಸ್ಥಗಿತಗೊಳ್ಳುತ್ತದೆ:**

6. **ಕಾಲಬದ್ಧ ಪದೋನ್ನತಿಯನ್ನು ಅನುಷ್ಠಾನಗೊಳಿಸುವ ರೀತಿ ಮತ್ತು ಕರಾರುಗಳು:** ಕಾಲಬದ್ಧ ಪದೋನ್ನತಿಯು ಕೆಳಕಂಡ ಕರಾರುಗಳಿಗೆ ಒಳಪಟ್ಟಿರುತ್ತದೆ:

(ಅ) **ಇಲಾಖೆಗೆ ಮಂಜೂರಾದ ವಿಮಾ ವೈದ್ಯಾಧಿಕಾರಿಗಳ : ಉಪಶಸ್ತ್ರಚಿಕಿತ್ಸಕರ : ಶಸ್ತ್ರಚಿಕಿತ್ಸಕರ ಒಟ್ಟು ಹುದ್ದೆಗಳ ವಿವರ ಕೆಳಕಂಡಂತಿದೆ. (ರಾಜಾಜಿನಗರ ಮಾದರಿ ಆಸ್ಪತ್ರೆ ಹೊರತುಪಡಿಸಿ)**

| ಕ್ರ.ಸಂ | ಪದನಾಮ | ಒಟ್ಟು ಹುದ್ದೆಗಳ ಸಂಖ್ಯೆ |
|---|---|---|
| 1. | ವಿಮಾವೈದ್ಯಾಧಿಕಾರಿಗಳು | 422 |
| 2. | ಉಪಶಸ್ತ್ರ ಚಿಕಿತ್ಸಕರು | 88 |
| 3. | ಶಸ್ತ್ರ ಚಿಕಿತ್ಸಕರು | 37 |
| | **ಒಟ್ಟು ಹುದ್ದೆಗಳು** | **547** |

(ಆ) ಪೂರಕ ಬಾಗುವಿಕೆ ಪದ್ಧತಿಯಂತೆ (Flexible Complementing System) ಇಲಾಖೆಗೆ ಮಂಜೂರಾತಿಯಾದ ಒಟ್ಟು ಹುದ್ದೆಗಳಾದ 547ಕ್ಕೆ ಮೀರದಂತೆ ಕಾಲಬದ್ಧ ಪದೋನ್ನತಿ ಸೌಲಭ್ಯವನ್ನು ವಿಸ್ತರಿಸಲಾಗಿರುತ್ತದೆ. ಈ ಹುದ್ದೆಗಳು ಕಾಲಬದ್ಧ ಪದೋನ್ನತಿಯ ಸೌಲಭ್ಯವನ್ನು ಹೊಂದಿದ **ವೈದ್ಯಾಧಿಕಾರಿಗಳ ಸಂಖ್ಯೆಗೆ ಅನುಗುಣವಾಗಿ ಬದಲಾಗುತ್ತಿದ್ದು, ಒಟ್ಟು ಮಂಜೂರಾದ ಸಂಖ್ಯೆಗಿಂತ ಹೆಚ್ಚಾಗಬಾರದು. ಈ ಬಗ್ಗೆ ಈ ಕೆಳಕಂಡಂತೆ ವಿವರಿಸಲಾಗಿದೆ:-**

1) ಆರು ವರ್ಷ ಸೇವೆಯನ್ನು ಪೂರ್ಣಗೊಳಿಸಿದ ವೈದ್ಯಾಧಿಕಾರಿಗಳ ಸಂಖ್ಯೆ: - 173

2) ಹದಿಮೂರು ವರ್ಷ ಸೇವೆ ಸಲ್ಲಿಸಿದ ವೈದ್ಯಾಧಿಕಾರಿಗಳ ಸಂಖ್ಯೆ - 152

ಕ್ರಮಸಂಖ್ಯೆ (1) ಮತ್ತು (2) ರಲ್ಲಿ ವಿವರಿಸಿದಂತೆ ಕಾಲಬದ್ಧ **ಪದೋನ್ನತಿಯನ್ನು ವಿಸ್ತರಿಸಿದ ನಂತರ ಬದಲಾದ ಮಂಜೂರಾತಿಯಾದ ಹುದ್ದೆಯ ಸಂಖ್ಯೆ**

| ಕ್ರ.ಸಂ | ಪದನಾಮ | ನವೀಕರಿಸಲಾದ ಹುದ್ದೆಯ ಮಂಜೂರಾತಿ |
|---|---|---|
| 1. | ವಿಮಾವೈದ್ಯಾಧಿಕಾರಿಗಳು | 222 |
| 2. | ಹಿರಿಯ ವಿಮಾ ವೈದ್ಯಾಧಿಕಾರಿಗಳು / ಜೂನಿಯರ್ ಸ್ಪೆಷಲಿಸ್ಟ್ | 173 |
| 3. | ಸೀನಿಯರ್ ಸ್ಪೆಷಲಿಸ್ಟ್ / ಮುಖ್ಯ ವಿಮಾ ವೈದ್ಯಾಧಿಕಾರಿಗಳು | 152 |
| | **ಒಟ್ಟು ಹುದ್ದೆಗಳು** | **547** |

ಇ) **ಕಾಲಬದ್ಧ ಪದೋನ್ನತಿಯನ್ನು ವಿಸ್ತರಿಸಿರುವುದರಿಂದ ಬದಲಾದ ಹುದ್ದೆಗಳ ವಿವರ:-**

| ಕ್ರ. ಸಂ. | ಪ್ರಸ್ತುತ ಇರುವ ಪದನಾಮ | ಪ್ರಸ್ತುತ ಇರುವ ಮಂಜೂರಾತಿಯಲ್ಲಿನ ಹುದ್ದೆಗಳ ಸಂಖ್ಯೆ | ಬದಲಾದ ಹುದ್ದೆಗಳ ಮಂಜೂರಾತಿ ಸಂಖ್ಯೆ | ಹೊಸದಾಗಿ ನೀಡಲಾದ ಪದನಾಮ |
|---|---|---|---|---|
| 1 | ವಿಮಾ ವೈದ್ಯಾಧಿಕಾರಿಗಳು | 422 | 222 | ವಿಮಾ ವೈದ್ಯಾಧಿಕಾರಿಗಳು |
| 2 | ಉಪ ಶಸ್ತ್ರ ಚಿಕಿತ್ಸಕರು | 88 | 173 | ಜೂನಿಯರ್ ಸ್ಪೆಷಲಿಸ್ಟ್/ ಹಿರಿಯ ವಿಮಾ ವೈದ್ಯಾಧಿಕಾರಿಗಳು |
| 3 | ಶಸ್ತ್ರ ಚಿಕಿತ್ಸಕರು | 37 | 152 | ಸೀನಿಯರ್ ಸ್ಪೆಷಲಿಸ್ಟ್ / ಮುಖ್ಯ ವಿಮಾ ವೈದ್ಯಾಧಿಕಾರಿಗಳು |
| | ಒಟ್ಟು | 547 | 547 | |

ಈ ಮಂಜೂರಾತಿಯಾದ ಒಟ್ಟು ಹುದ್ದೆಗಳು ವಿಮಾ ವೈದ್ಯಾಧಿಕಾರಿಗಳು ಪಡೆಯುವ ಕಾಲಬದ್ಧ ಪದೋನ್ನತಿ ಹಾಗೂ ಪದೋನ್ನತಿಯ ಮೇಲೆ ಅವಲಂಬಿತವಾಗಿದ್ದು, ಯಾವುದೇ ಕಾರಣಕ್ಕೂ ಒಟ್ಟು ಮಂಜೂರಾತಿಯಾದ 547 ಹುದ್ದೆಗಳಿಗೆ ಮೀರಕೂಡದು.

**ಈ**) ಕಾಲಬದ್ಧ ಪದೋನ್ನತಿ ಸೌಲಭ್ಯವು ತೃಪ್ತಿಕರವಾಗಿ ಸೇವೆಯನ್ನು ಪೂರ್ಣಗೊಳಿಸಿದವರಿಗೆ ಮತ್ತು ನಿಗದಿತ ಅವಧಿಯು ಪೂರ್ಣಗೊಳಿಸಿದವರಿಗೆ ಮಾತ್ರ ವಿಸ್ತರಿಸುವುದು.

**ಉ**) ವೇತನವನ್ನು ಕ.ನಾ. ಸೇ. ನಿ. ನಿ. 42 (ಬಿ)ಯ ಪ್ರಕಾರ ನಿಗಧಿಗೊಳಿಸುವುದು.

**ಊ**) ವೈದ್ಯಾಧಿಕಾರಿಗಳು/ಉಪಶಸ್ತ್ರ ಚಿಕಿತ್ಸಕರು 13 ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದ ನಂತರ ನೇರವಾಗಿ ಮುಖ್ಯ ವಿಮಾ ವೈದ್ಯಾಧಿಕಾರಿಗಳಾಗಿ / ಸೀನಿಯರ್ ಸ್ಪೆಷಲಿಸ್ಟ್‌ಗಳಾಗಿ ಕಾಲಬದ್ಧ ಪದೋನ್ನತಿಯನ್ನು ಪಡೆಯುವರು. ಈ ಪದೋನ್ನತಿಯ ಹಿನ್ನೆಲೆಯಲ್ಲಿ ಇದಕ್ಕಾಗಿ ಕರ್ನಾಟಕ ಸೇವಾ ನಿಯಮ (ನೇಮಕಾತಿ ನಿಯಮ 19 (3-ಇ) 1977ಕ್ಕೆ ವಿನಾಯಿತಿ ನೀಡಲಾಗಿದ್ದು, ವೇತನವನ್ನು ನಿಯಮ 42 (ಬಿ)ಯ ಪ್ರಕಾರ ನಿಗಧಿಗೊಳಿಸುವುದು. ಈ ಹಿರಿಯ ವಿಮಾ ವೈದ್ಯಾಧಿಕಾರಿ/ಜೂನಿಯರ್ ಸ್ಪೆಷಲಿಸ್ಟ್‌ಗಳು ಮುಖ್ಯ ವಿಮಾ ವೈದ್ಯಾಧಿಕಾರಿಗಳು/ಸೀನಿಯರ್ ಸ್ಪೆಷಲಿಸ್ಟ್‌ಗಳು ಆಗಿ ಪದೋನ್ನತಿ ಹೊಂದಿದ್ದಾರೆಂದು ಪರಿಗಣಿಸಬಹುದಾಗಿದೆ.

**ಋ**) ಈ ಆದೇಶವನ್ನು ನೇಮಕಾತಿ ಪ್ರಾಧಿಕಾರಿಯು ಅನುಷ್ಠಾನಗೊಳಿಸಿ ಕಾಲಮಿತಿ ಪದೋನ್ನತಿ ಸೌಲಭ್ಯವನ್ನು ವಿಸ್ತರಿಸುವುದು. ನೇಮಕಾತಿ ಪ್ರಾಧಿಕಾರಿ ಬಗ್ಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ 1957 (ಸಿಸಿಎ) ನಿಯಮ 2 ಕಂಡಿಕೆ (ಎ)ನಲ್ಲಿ ವಿವರಿಸಲಾಗಿದೆ.

**ಋ**) ನಿರ್ದೇಶಕರು, ಕಾರಾವಿ ಯೋಜನೆ (ವೈ) ಸೇವೆಗಳು, ಇವರು ಕಾಲಬದ್ದ ಪದೋನ್ನತಿ ಸೌಲಭ್ಯವನ್ನು ವಿಸ್ತರಿಸಿದ ನಂತರವೂ ಯಾವುದೇ ಕಾರಣಕ್ಕೂ ಮಂಜೂರಾತಿಯಾದ ವೈದ್ಯಾಧಿಕಾರಿಗಳ ಒಟ್ಟು ಹುದ್ದೆಗಳಿಗೆ ಮೀರದಂತೆ ಜವಾಬ್ದಾರಿ ವಹಿಸುವುದು.

**ಎ**) ಕಾಲಬದ್ಧ ಪದೋನ್ನತಿ ಸೌಲಭ್ಯ ಯೋಜನೆಯನ್ನು ವಿಸ್ತರಿಸುವ ಬಗ್ಗೆ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಯಲ್ಲಿ ಅವಶ್ಯಕ ನಿಯಮಗಳನ್ನು ರೂಪಿಸಿದ ನಂತರ ಕಾಲಬದ್ದ ಪದೋನ್ನತಿ ಸೌಲಭ್ಯವನ್ನು ಕ್ರಮಬದ್ಧಗೊಳಿಸಲಾಗುವುದು.

**ಏ**) ಈ ಆದೇಶವನ್ನು ಆರ್ಥಿಕ ಇಲಾಖೆಯ ಅ.ಟಿ.ಸಂಖ್ಯೆ: ಎಫ್‌ಡಿ 142 ವೆಚ್ಚ-9/05, ದಿ: 26-11-05ರಲ್ಲಿ ನೀಡಲಾದ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎ.ಎಸ್.ಪಾರ್ವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಕಾರ್ಮಿಕ ಇಲಾಖೆ
(ಕಾರಾವಿ ಯೋ (ವೈ) ಸೇವೆ)

ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು.

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:-** ಕಾರ್ಮಿಕರ ರಾಜ್ಯ ವಿಮಾ ಯೋಜನೆ (ವೈದ್ಯಕೀಯ) ಸೇವೆಗಳು ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರುಗಳಿಗೆ ಕಾಲಮಿತಿ ಮುಂಬಡ್ತಿ ಯೋಜನೆಯಡಿ ಮೂರನೇ ಕಾಲಮಿತಿ ಮಂಜೂರು ಮಾಡುವ ಬಗ್ಗೆ.

**ಓದಲಾಗಿದೆ:-** 1) ಸರ್ಕಾರದ ಆದೇಶ ಸಂಖ್ಯೆ.ಹೆಚ್‌ಎಫ್‌ಡಬ್ಲ್ಯೂ 222 ಎಂಎಸ್‌ಎಸ್ 90, ದಿನಾಂಕ:19-07-1991

2)ಸರ್ಕಾರದ ಆದೇಶ ಸಂಖ್ಯೆ.ಕಾಇ 356 ಎಲ್‌ಎಸ್‌ಐ 95, ದಿನಾಂಕ:04-09-2006.

3)ಸರ್ಕಾರದ ಆದೇಶ ಸಂಖ್ಯೆ.ಆಕುಕ 557 ಹೆಚ್‌ಎಸ್‌ಹೆಚ್ 2011, ದಿನಾಂಕ:03-01-2012.

4)ನಿರ್ದೇಶಕರು, ಕಾ.ರಾ.ವಿ. ಯೋಜನೆ ವೈದ್ಯಕೀಯ ಸೇವೆಗಳು, ಬೆಂಗಳೂರು ಇವರ ಪತ್ರ ಸಂಖ್ಯೆ.ಅಭಿವೃದ್ಧಿ/199/2011-12, ದಿನಾಂಕ:25-01-2012.

5)ಹೆಚ್ಚುವರಿ ಆಯುಕ್ತರು/ಪ್ರಾದೇಶಿಕ ನಿರ್ದೇಶಕರು, ಕಾ.ರಾ.ವಿ. ನಿಗಮ, ಬೆಂಗಳೂರು ಇವರ ಪತ್ರ ಸಂಖ್ಯೆ.KAR. RD. ESIC.18.2010,ದಿನಾಂಕ:24-05-2010.

6)ಅಧ್ಯಕ್ಷರು, ಕರ್ನಾಟಕ ಸರ್ಕಾರ ಕಾರ್ಮಿಕ ರಾಜ್ಯ ವಿಮಾ ವೈದ್ಯಾಧಿಕಾರಿಗಳ ಸಂಘ, ಇಂದಿರಾನಗರ, ಬೆಂಗಳೂರು ಇವರ ಮನವಿ ಪತ್ರ ದಿನಾಂಕ:30-03-2012.

**ಪ್ರಸ್ತಾವನೆ:**

ಮೇಲೆ ಓದಲಾದ (1)ರ ಆದೇಶದಲ್ಲಿ ಸರ್ಕಾರದ ಆದೇಶ ಸಂಖ್ಯೆ.ಹೆಚ್‌ಎಫ್‌ಡಬ್ಲ್ಯೂ 222 ಎಂಎಸ್‌ಎಸ್ 90, ದಿನಾಂಕ:19-07-1991ರ ಆದೇಶದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯಾಧಿಕಾರಿಗಳಿಗೆ ಕಾಲಬದ್ಧ ಪದೋನ್ನತಿಯ ಸೌಲಭ್ಯವನ್ನು ವಿಸ್ತರಿಸಲಾಗಿದ್ದು. ಅದರಂತೆ ಕಾರಾವಿ ಯೋಜನೆ ವೈದ್ಯಕೀಯ ಸೇವೆಗಳು ನಿರ್ದೇಶನಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯಾಧಿಕಾರಿಗಳಿಗೂ ಸಹ ಮೇಲೆ ಓದಲಾದ (2)ರ ಆದೇಶದಲ್ಲಿ ಕಾಲಬದ್ಧ ಪದೋನ್ನತಿ ಸೌಲಭ್ಯವನ್ನು ಈ ಕೆಳಕಂಡಂತೆ ವಿಸ್ತರಿಸಲಾಗಿರುತ್ತದೆ.

1. **ಹಿರಿಯ ವಿಮಾ ವೈದ್ಯಾಧಿಕಾರಿಗಳು/ಜೂನಿಯರ್ ಸ್ಪೆಷಲಿಸ್ಟ್:**

ವಿಮಾ ವೈದ್ಯಾಧಿಕಾರಿಗಳಾಗಿ ಆರು ವರ್ಷ ಸೇವೆಯನ್ನು ಪೂರ್ಣಗೊಳಿಸಿದವರನ್ನು ಹಿರಿಯ ವಿಮಾ ವೈದ್ಯಾಧಿಕಾರಿಗಳಾಗಿ ಪುನರ್ ನಾಮಕರಣ ಮಾಡಲಾಗಿದೆ. ಹಾಗೂ ವೈದ್ಯಕೀಯ ಸ್ನಾತಕೋತ್ತರ ಪದವಿ ಅಥವಾ ಡಿಪ್ಲೋಮಾ ಹೊಂದಿದವರನ್ನು ಜೂನಿಯರ್ ಸ್ಪೆಷಲಿಸ್ಟ್ ಎಂದು

ಪದನಾಮ ನೀಡಲಾಗಿದೆ. ಹಾಗೂ ₹ 8000-200-8800-260-10880-320-13440ಗಳ ವೇತನ ಶ್ರೇಣಿಯನ್ನು ನಿಗಧಿಗೊಳಿಸಲಾಗಿರುತ್ತದೆ.

## 2. ಮುಖ್ಯ ವಿಮಾ ವೈದ್ಯಾಧಿಕಾರಿಗಳು/ಸೀನಿಯರ್ ಸ್ಪೆಷಲಿಸ್ಟ್:

ವಿಮಾ ವೈದ್ಯಾಧಿಕಾರಿಗಳಾಗಿ 13 ವರ್ಷ ಸೇವೆಯನ್ನು ಪೂರ್ಣಗೊಳಿಸಿದ್ದು, (ಉಪಶಸ್ತ್ರ ಚಿಕಿತ್ಸಕರ ಹುದ್ದೆಯಲ್ಲಿ ಸಲ್ಲಿಸಿದ ಸೇವೆಯನ್ನು ಒಳಗೊಂಡಂತೆ) ವಿಮಾ ವೈದ್ಯಾಧಿಕಾರಿಗಳಿಗೆ ಮುಖ್ಯ ವಿಮಾ ವೈದ್ಯಾಧಿಕಾರಿಗಳೆಂದು ಪುನರ್ ನಾಮಕರಣ ಮಾಡಲಾಗಿದೆ. ಸ್ನಾತಕೋತ್ತರ ವೈದ್ಯಕೀಯ ಪದವಿ ಅಥವಾ ಡಿಪ್ಲೋಮಾ ಹೊಂದಿರುವ ವಿಮಾ ವೈದ್ಯಾಧಿಕಾರಿಗಳಿಗೆ ಸೀನಿಯರ್ ಸ್ಪೆಷಲಿಸ್ಟ್ ಎಂಬ ಪದನಾಮ ನೀಡಲಾಗಿದೆ. ಹಾಗೂ ₹9580-260-10880-320-13440-380-14200ಗಳ ವೇತನ ಶ್ರೇಣಿಯನ್ನು ನಿಗಧಿಗೊಳಿಸಲಾಗಿರುತ್ತದೆ.

ಮೇಲೆ ಓದಲಾದ (3)ರ ಆದೇಶದಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ 20 ವರ್ಷಗಳ ಸೇವೆ ಸಲ್ಲಿಸಿ ಪ್ರಸ್ತುತ. ಉಪ ಮುಖ್ಯ ವೈದ್ಯಾಧಿಕಾರಿ/ಹಿರಿಯ ತಜ್ಞರಾಗಿ ಕಾರ್ಯನಿರ್ವಹಿಸುತ್ತಿರುವವರಿಗೆ ವೇತನ ಶ್ರೇಣಿ ₹19050-450-19500-525-22650-600-26250-675-27600ರಲ್ಲಿ ಕ್ರಮವಾಗಿ ಉಪ ಮುಖ್ಯ ವೈದ್ಯಾಧಿಕಾರಿ (ಆಯ್ಕೆ ಶ್ರೇಣಿ) ಹಾಗೂ ಹಿರಿಯ ತಜ್ಞರು (ಆಯ್ಕೆ ಶ್ರೇಣಿ) ಎಂಬುದಾಗಿ ಪದನಾಮವನ್ನು ನೀಡಿ 3ನೇ ಕಾಲಮಿತಿ ಮುಂಬಡ್ತಿಯನ್ನು ನೀಡಲು ಮಂಜೂರಾತಿಯನ್ನು ನೀಡಿರುತ್ತಾರೆ. ಈ ಸೌಲಭ್ಯವು ದಿನಾಂಕ:01-01-2012 ರಿಂದ ಅಥವಾ ಅರ್ಹ ವೈದ್ಯಾಧಿಕಾರಿಗಳು 20 ವರ್ಷಗಳ ಸೇವೆ ಸಲ್ಲಿಸಿದ, ಯಾವುದು ನಂತರವೋ ಆ ದಿನಾಂಕದಿಂದ ಜಾರಿಗೊಳಿಸಿರುತ್ತಾರೆ. ಮುಂದುವರಿದು ಸರ್ಕಾರಿ ಆದೇಶ ಸಂಖ್ಯೆ.ಆಕುಕ 222 ಎಂಪಿಎಸ್‌ಎಸ್ 90, ದಿನಾಂಕ:19-07-91ರಲ್ಲಿ ನಿಗದಿಪಡಿಸಿರುವ ಇತರೇ ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲವೆಂದು ತಿಳಿಸಿರುತ್ತಾರೆ. ಮೇಲ್ಕಂಡ ಕಾಲಮಿತಿ ಮುಂಬಡ್ತಿಯಲ್ಲಿ ತಿಳಿಸಿರುವ ವೃಂದಗಳನ್ನು ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅಳವಡಿಸಲು ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ರವರು ಸರ್ಕಾರಕ್ಕೆ ಪ್ರತ್ಯೇಕವಾಗಿ ಪ್ರಸ್ತಾವನೆಯನ್ನು ಸಲ್ಲಿಸುವುದು ಎಂದು ಆದೇಶಿಸಿರುತ್ತಾರೆ.

ನಿರ್ದೇಶಕರು, ಕಾರಾವಿ ಯೋಜನೆ ವೈದ್ಯಕೀಯ ಸೇವೆಗಳು, ರವರು ಮೇಲೆ ಓದಲಾದ (4)ರ ಪತ್ರದಲ್ಲಿ ಇಲಾಖೆಯ ವೈದ್ಯಾಧಿಕಾರಿಗಳೂ ಸಹ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವೈದ್ಯಾಧಿಕಾರಿಗಳಂತೆ ನೇಮಕಾತಿ ಹೊಂದಿದ್ದು, ಈ ಎರಡೂ ಇಲಾಖೆಯ ವೈದ್ಯಾಧಿಕಾರಿಗಳ ವಿದ್ಯಾರ್ಹತೆ ವೇತನ ಶ್ರೇಣಿ, ಕರ್ತವ್ಯ ಮತ್ತು ಹೊಣೆಗಾರಿಕೆ ಮತ್ತು ಸೇವಾ ನಿಯಮಾವಳಿಯು ಒಂದೇ ಆಗಿರುವುದರಿಂದ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯಾಧಿಕಾರಿಗಳಿಗೂ ಸಹ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮಾದರಿಯಲ್ಲಿಯೇ 3ನೇ ಕಾಲಬದ್ಧ ಪದೋನ್ನತಿ ಸೌಲಭ್ಯವನ್ನು ವಿಸ್ತರಿಸುವಂತೆ ಕೋರಿರುತ್ತಾರೆ.

ಹೆಚ್ಚುವರಿ ಆಯುಕ್ತರು/ಪ್ರಾದೇಶಿಕ ನಿರ್ದೇಶಕರು, ಕಾ.ರಾ.ವಿ. ನಿಗಮ, ಬೆಂಗಳೂರು ಇವರು ಮೇಲೆ ಓದಲಾದ (5)ರ ಪತ್ರದಲ್ಲಿ ಕಾರ್ಮಿಕರ ರಾಜ್ಯ ವಿಮಾ ನಿಗಮವು ಒದಗಿಸುತ್ತಿರುವ ವೈದ್ಯಕೀಯ ಸೌಲಭ್ಯಗಳಲ್ಲಿ 8ನೇ 7 ಭಾಗ ವೆಚ್ಚವನ್ನು ಕಾರಾವಿ ನಿಗಮವು ಭರಿಸುತ್ತದೆ. ಉಳಿದ 8ನೇ 1 ಭಾಗ ವೆಚ್ಚವನ್ನು ರಾಜ್ಯ ಸರ್ಕಾರವು ಭರಿಸುತ್ತದೆಯೆಂದು ತಿಳಿಸಿರುತ್ತಾರೆ.

ಅಧ್ಯಕ್ಷರು, ಕರ್ನಾಟಕ ಸರ್ಕಾರ ಕಾರ್ಮಿಕರ ರಾಜ್ಯ ವಿಮಾ ವೈದ್ಯಾಧಿಕಾರಿಗಳ ಸಂಘ, ಬೆಂಗಳೂರು ಇವರು ಮೇಲೆ ಓದಲಾದ (6)ರ ಪತ್ರದಲ್ಲಿ ಸರ್ಕಾರದ ಆದೇಶ ಸಂಖ್ಯೆ.ಆಕುಕ 222 ಎಂಎಸ್‌ಎಸ್ 90, ದಿನಾಂಕ:19-07-91 ಮತ್ತು ಸರ್ಕಾರದ ಆದೇಶ ಸಂಖ್ಯೆ.ಕಾಇ 356 ಎಲ್‌ಎಸ್‌ಐ 95, ದಿನಾಂಕ:04-09-2006ರಲ್ಲಿ 06 ಮತ್ತು 13 ವರ್ಷಗಳ ಸೇವೆ ಪೂರೈಸಿದ ವೈದ್ಯ ವೃಂದದವರಿಗೆ ಕಾಲಬದ್ಧ ಪದೋನ್ನತಿಯನ್ನು ನೀಡಲಾದಂತೆ ಇದನ್ನು ವಿಸ್ತರಿಸಿ 20 ವರ್ಷಗಳ ಸೇವೆ ಸಲ್ಲಿಸಿದ ವೈದ್ಯರಿಗೆ ವೇತನ ಶ್ರೇಣಿ ₹ 19050-450-19500-525-22650-600-26250-675-27600ಗಳಲ್ಲಿ ಕ್ರಮವಾಗಿ ಉಪ ಮುಖ್ಯ ವೈದ್ಯಾಧಿಕಾರಿ (ಆಯ್ಕೆ ಶ್ರೇಣಿ) ಹಾಗೂ ಹಿರಿಯ ತಜ್ಞರು (ಆಯ್ಕೆ ಶ್ರೇಣಿ) ಎಂಬುದಾಗಿ ಪದನಾಮವನ್ನು ನೀಡಿ 3ನೇ ಕಾಲಮಿತಿ ಮುಂಬಡ್ತಿಯನ್ನು ಸರ್ಕಾರದ ಆದೇಶ ಸಂಖ್ಯೆ.ಆಕುಕ 557 ಹೆಚ್‌ಎಸ್‌ಹೆಚ್ 2011, ದಿನಾಂಕ:03-01-2012ರ ಆದೇಶದಲ್ಲಿ ಈ ಸೌಲಭ್ಯವು ದಿನಾಂಕ:01-01-2012 ರಿಂದ ಜಾರಿಯಾದಂತೆ ಇಲಾಖೆಯ ವೈದ್ಯರಿಗೂ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅಳವಡಿಸುವುದನ್ನು ಕಾಯ್ದಿರಿಸಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ.ಆಇ 80 ವೆಚ್ಚ 9/2012, ದಿನಾಂಕ:26-03-2012ರಲ್ಲಿ ಈ ಕೆಳಕಂಡಂತೆ ಸಹಮತಿ ನೀಡಿರುತ್ತಾರೆ. **"Finance Department agrees to extend the benefit of Third Time Bound Promotion as contemplated in G.O. No.HFW 557 HSH 2011, dated:03-01-2012 with prospective effect to the ESI Doctors who have completed 20 years of service subject to the conditions stipulated hereunder as also subject to further condition that 7/8$^{th}$ of the additional expenditure thereon be should met by the ESI Corporation"** ಅದರನ್ವಯ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ.ಕಾಇ 28 ಎಲ್‌ಎಸ್‌ಐ 2012 ಬೆಂಗಳೂರು, ದಿನಾಂಕ:18-04-2012.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಕಾರ್ಮಿಕರ ರಾಜ್ಯ ವಿಮಾ ಯೋಜನೆ (ವೈದ್ಯಕೀಯ) ಸೇವೆಗಳು ಇಲಾಖೆಯಲ್ಲಿ 20 ವರ್ಷಗಳ ಸತತ ಸೇವೆ ಸಲ್ಲಿಸಿರುವ ವಿಮಾ ವೈದ್ಯಾಧಿಕಾರಿಗಳಿಗೆ ವೇತನ ಶ್ರೇಣಿ ₹19050-27600ರಲ್ಲಿ ಕ್ರಮವಾಗಿ ಮುಖ್ಯ ವಿಮಾ ವೈದ್ಯಾಧಿಕಾರಿ (ಆಯ್ಕೆ ಶ್ರೇಣಿ) ಹಾಗೂ ಹಿರಿಯ ತಜ್ಞರು (ಆಯ್ಕೆ ಶ್ರೇಣಿ) ಎಂಬ ಪದನಾಮದೊಂದಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮಾದರಿಯಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ತಿದ್ದುಪಡಿ ಅಳವಡಿಸುವುದನ್ನು ಕಾಯ್ದಿರಿಸಿ 3ನೇ ಕಾಲಮಿತಿ ಮುಂಬಡ್ತಿಯನ್ನು ಭವಿಷ್ಯವರ್ತಿಯಾಗಿ ವಿಸ್ತರಿಸಿ ಸರ್ಕಾರವು ಮಂಜೂರಾತಿ ನೀಡಿದೆ.

ಕಾಲಮಿತಿ ಮುಂಬಡ್ತಿಯಲ್ಲಿ ತಿಳಿಸಿರುವ ವೃಂದಗಳನ್ನು ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅಳವಡಿಸುವ ಬಗ್ಗೆ ನಿರ್ದೇಶಕರು, ಕಾರ್ಮಿಕ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ರವರು ಸರ್ಕಾರಕ್ಕೆ ಪ್ರತ್ಯೇಕವಾಗಿ ಪ್ರಸ್ತಾವನೆಯನ್ನು ಸಲ್ಲಿಸುವುದು.

ಸರ್ಕಾರದ ಆದೇಶ ಸಂಖ್ಯೆ.ಕಾಇ 356 ಎಲ್‌ಎಸ್‌ಐ 95, ದಿನಾಂಕ:04-09-2006ರಲ್ಲಿ ನಿಗಧಿಪಡಿಸಿರುವ ಕರಾರುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ.ಆಇ 80 ವೆಚ್ಚ 9/2012, ದಿನಾಂಕ:26-03-2012ರಲ್ಲಿ ನೀಡಲಾದ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಗೋವಿಂದಸ್ವಾಮಿ) 18/4
ಪೀಠಾಧಿಕಾರಿ,
ಕಾರ್ಮಿಕ ಇಲಾಖೆ.
(ಕಾರಾವಿ ಯೋ (ವೈ) ಸೇವೆಗಳು)

ಗೆ,

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ ಪ್ರಕಟಣಾ ವಿಭಾಗ, ಬೆಂಗಳೂರು - ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿ 1000 ಪ್ರತಿಗಳನ್ನು ಪೀಠಾಧಿಕಾರಿ-5, ಕಾರ್ಮಿಕ ಇಲಾಖೆ, ಇ.ಎಸ್.ಐ. ಶಾಖೆ, ಕೊಠಡಿ ಸಂಖ್ಯೆ.411, 4ನೇ ಮಹಡಿ ವಿಕಾಸ ಸೌಧ, ಬೆಂಗಳೂರು ಇವರಿಗೆ ಒದಗಿಸುವಂತೆ ಕೋರಲಾಗಿದೆ.

ಪ್ರತಿಯನ್ನು:-

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ನಿರ್ದೇಶಕರು, ಕಾರ್ಮಿಕ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು, ಬೆಂಗಳೂರು.
3) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವೆಚ್ಚ 3 ಮತ್ತು 9, ವಿಧಾನ ಸೌಧ, ಬೆಂಗಳೂರು.
4) ಹೆಚ್ಚುವರಿ ಆಯುಕ್ತರು/ಪ್ರಾದೇಶಿಕ ನಿರ್ದೇಶಕರು, ಕಾರ್ಮಿಕ ರಾಜ್ಯ ವಿಮಾ ನಿಗಮ, ನಂ.10, ಬಿನ್ನಿಪೇಟೆ, ಬಿನ್ನಿ ಮೈದಾನ, ಬಿನ್ನಿಪೇಟೆ, ಬೆಂಗಳೂರು-560 023.
5) ಎಲ್ಲಾ ವೈದ್ಯಕೀಯ ಅಧೀಕ್ಷಕರು, ಕಾರ್ಮಿಕ ರಾಜ್ಯ ವಿಮಾ ಆಸ್ಪತ್ರೆ, ಇಂದಿರಾನಗರ ಮತ್ತು ರೋಗ ಪತ್ತೆ ಹಚ್ಚುವ ಕೇಂದ್ರ, ಬಸವನಗುಡಿ, ಬೆಂಗಳೂರು, ಮೈಸೂರು, ಮಂಗಳೂರು, ದಾವಣಗೆರೆ, ಬೆಳಗಾವಿ, ಹುಬ್ಬಳ್ಳಿ, ದಾಂಡೇಲಿ,
6) ಸರ್ಕಾರದ ಉಪ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, (ಸೇವಾ ನಿಯಮ) ವಿಧಾನ ಸೌಧ, ಬೆಂಗಳೂರು.
7) ಸರ್ಕಾರದ ಅಧೀನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವಾ ನಿಯಮ) ವಿಧಾನ ಸೌಧ, ಬೆಂಗಳೂರು.
8) ಅಧ್ಯಕ್ಷರು, ಕರ್ನಾಟಕ ಸರ್ಕಾರ ಕಾರ್ಮಿಕ ರಾಜ್ಯ ವಿಮಾ ವೈದ್ಯಾಧಿಕಾರಿಗಳ ಸಂಘ, ಇಂದಿರಾನಗರ, ಬೆಂಗಳೂರು-560 008.
9) ಸರ್ಕಾರದ ಕಾರ್ಯದರ್ಶಿ/ಜಂಟಿ ಕಾರ್ಯದರ್ಶಿಯವರ ಆಪ್ತ ಶಾಖೆ, ಕಾರ್ಮಿಕ ಇಲಾಖೆ.
10) ಶಾಖಾ ರಕ್ಷಕ ಕಡತ : ಹೆಚ್ಚುವರಿ ಪ್ರತಿ.

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಕಾ.ರಾ.ವಿ ಯೋಜನೆ ವೈದ್ಯಕೀಯ ಸೇವೆಗಳು ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಹಾಯಕ ದಂತ ಶಸ್ತ್ರ ಚಿಕಿತ್ಸಕರಿಗೆ ಕಾಲಬದ್ಧ ಪದೋನ್ನತಿಯ ಸೌಲಭ್ಯವನ್ನು ವಿಸ್ತರಿಸುವ ಬಗ್ಗೆ.

**ಓದಲಾಗಿದೆ:-** 1) ನಿರ್ದೇಶಕರು, ಕಾ.ರಾ.ವಿ. ಯೋಜನೆ ವೈದ್ಯಕೀಯ ಸೇವೆಗಳು, ಬೆಂಗಳೂರು ಇವರ ಪತ್ರ ಸಂಖ್ಯೆ:ಅಭಿವೃದ್ಧಿ/97/2007-08 ದಿನಾಂಕ:17-06-2008, 18-07-2008, 19-08-2008, 04-06-2009, 02-02-2010, 03-03-2010, 24-04-2010, 23-08-2011.

2) ಅಧ್ಯಕ್ಷರು ಕರ್ನಾಟಕ ಸರ್ಕಾರ ಕಾರ್ಮಿಕ ರಾಜ್ಯ ವಿಮಾ ವೈದ್ಯಾಧಿಕಾರಿಗಳ ಸಂಘ ಇವರ ದಿನಾಂಕ:24-01-2008ರ ಮನವಿ.

**ಪ್ರಸ್ತಾವನೆ:-**

ನಿರ್ದೇಶಕರು, ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ಇವರು ಮೇಲೆ ಓದಲಾದ (1)ರಲ್ಲಿ ಸರ್ಕಾರದ ಆದೇಶ ಸಂಖ್ಯೆ: ಆ.ಕು.ಕ/5 ಎಚ್.ಎಸ್.ಡಿ/92, ದಿನಾಂಕ:12-09-1996ರ ಆದೇಶದಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಹಾಯಕ ದಂತ ಚಿಕಿತ್ಸಕರಿಗೆ ಕಾಲಬದ್ಧ ಪದೋನ್ನತಿ ಸೌಲಭ್ಯವನ್ನು ವಿಸ್ತರಿಸಿರುತ್ತದೆ. ಹಾಗೂ ಸರ್ಕಾರದ ಆದೇಶ ಸಂಖ್ಯೆ:ಕಾಇ 356 ಎಲ್.ಎಸ್.ಐ 95, ದಿನಾಂಕ: 04-09-2006ರ ಪ್ರಕಾರ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿಮಾ ವೈದ್ಯಾಧಿಕಾರಿಗಳಿಗೆ ಕಾಲ ಬದ್ಧ ಪದೋನ್ನತಿ ಸೌಲಭ್ಯವನ್ನು ವಿಸ್ತರಿಸಿರುವುದರಿಂದ ಇದೇ ಮಾದರಿಯಲ್ಲಿ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಹಾಯಕ ದಂತ ಶಸ್ತ್ರ ಚಿಕಿತ್ಸಕರಿಗೂ ಕಾಲ ಬದ್ಧ ಪದೋನ್ನತಿ ಸೌಲಭ್ಯವನ್ನು ವಿಸ್ತರಿಸುವಂತೆ ಕೋರಿರುತ್ತಾರೆ.

ಇಲಾಖೆಗೆ ಒಟ್ಟು ಎಂಟು ಸಹಾಯಕ ದಂತ ಶಸ್ತ್ರ ಚಿಕಿತ್ಸಕರ ಹುದ್ದೆಗಳು ಮಂಜೂರಾತಿಯಾಗಿದ್ದು, ಕೇವಲ ಮೂರು ಹುದ್ದೆಗಳು ಭರ್ತಿಯಾಗಿರುತ್ತದೆ. ಇವರಿಗೆ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಯ ಅನುಸಾರ ಯಾವುದೇ ಪದೋನ್ನತಿ ಇರುವುದಿಲ್ಲ.

ಸದರಿ ವೈದ್ಯಾಧಿಕಾರಿಗಳು ಆರು ವರ್ಷ ಸೇವೆಯನ್ನು ಪೂರ್ಣಗೊಳಿಸಿದವರಿಗೆ ಮೊದಲನೇ ಕಾಲ ಬದ್ಧ ಪದೋನ್ನತಿ ಸೌಲಭ್ಯವನ್ನು ಹಾಗೂ ಹದಿಮೂರು ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದವರಿಗೆ ಎರಡನೇ ಕಾಲಬದ್ಧ ಪದೋನ್ನತಿ ಸೌಲಭ್ಯವನ್ನು ವಿಸ್ತರಿಸಬೇಕಾಗಿರುತ್ತದೆ ಹಾಗೂ ಅವರ ಪದನಾಮವನ್ನು ಈ ಕೆಳಕಂಡಂತೆ ಬದಲಾವಣೆ ಮಾಡಲು ಪ್ರಸ್ತಾಪಿಸಿದ್ದಾರೆ.

27/3/12

24/03/12

22 MAR 1578

| ಕ್ರ. ಸಂ. | ಪ್ರಸ್ತುತ ಇರುವ ಪದನಾಮ | ಪುನರ್ ನಾಮಕರಣ ಮಾಡಲಾದ ಪದನಾಮ | ಪೂರ್ಣಗೊಳಿಸಿದ ಸೇವಾವಧಿಯಲ್ಲಿ ಬದಲಾಗುವ ಪದನಾಮ/ಉನ್ನತ ವ್ಯಾಸಂಗವನ್ನು ಹೊಂದಿದ್ದಲ್ಲಿ ಬದಲಾಗುವ ಪದನಾಮ | ವೇತನ ಶ್ರೇಣಿ |
|---|---|---|---|---|
| 1 | ಸಹಾಯಕ ದಂತ ಚಿಕಿತ್ಸಕರು. | – | – | ₹14050–25050 |
| | | ಹಿರಿಯ ದಂತ ಚಿಕಿತ್ಸಕರು/ ಹಿರಿಯ ದಂತ ಶಸ್ತ್ರ ಚಿಕಿತ್ಸಕರು | ಆರು ವರ್ಷ ಸೇವೆ ಪೂರ್ಣಗೊಳಿಸಿದ ನಂತರ<br>ಸ್ನಾತಕೋತ್ತರ ಪದವಿ ಪೂರ್ಣಗೊಳಿಸಿದವರಿಗೆ | ₹15200–25650 |
| | | ಮುಖ್ಯ ದಂತ ಚಿಕಿತ್ಸಕರು/ ಮುಖ್ಯ ದಂತ ಶಸ್ತ್ರ ಚಿಕಿತ್ಸಕರು. | ಹದಿಮೂರು ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದವರಿಗೆ<br>ಸ್ನಾತಕೋತ್ತರ ಪದವಿ ಪೂರ್ಣಗೊಳಿಸಿದವರಿಗೆ | ₹18150–26925 |

ಕಾಲಬದ್ಧ ಪದೋನ್ನತಿ ಸೌಲಭ್ಯವನ್ನು ವಿಸ್ತರಿಸಿದ ನಂತರ ಇಲಾಖೆಗೆ ಮಂಜೂರಾಗುವ ಹುದ್ದೆಗಳ ಸಂಖ್ಯೆ ಮೀರದಿರುವ ಕಾರಣ ಹುದ್ದೆಗಳ ವಿವರ ಈ ರೀತಿ ಇರುತ್ತದೆಯೆಂದು ತಿಳಿಸಿದ್ದಾರೆ.

| ಕ್ರ. ಸಂ. | ಪದನಾಮ | ಹುದ್ದೆಗಳ ಸಂಖ್ಯೆ |
|---|---|---|
| 1 | ಸಹಾಯಕ ದಂತ ಚಿಕಿತ್ಸಕರು | 05 |
| 2 | ಹಿರಿಯ ದಂತ ಚಿಕಿತ್ಸಕರು/ ಹಿರಿಯ ದಂತ ಶಸ್ತ್ರ ಚಿಕಿತ್ಸಕರು | 03 |
| | ಒಟ್ಟು | 08 |

ಪ್ರಸ್ತಾವನೆಯನ್ನು ಕೂಲಂಕುಶವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶವನ್ನು ಹೊರಡಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಕಾಇ 266 ಎಲ್.ಎಸ್.ಐ 2008,</u>**
**<u>ಬೆಂಗಳೂರು, ದಿನಾಂಕ:21-03-2012.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಹಾಯಕ ದಂತ ಚಿಕಿತ್ಸಕರಿಗೆ ಕಾಲಬದ್ಧ ಪದೋನ್ನತಿಯ ಸೌಲಭ್ಯವನ್ನು ಈ ಕೆಳಕಂಡ ಬದಲಾದ ಪದನಾಮದೊಂದಿಗೆ ವಿಸ್ತರಿಸಲಾಗಿದೆ.

| ಕ್ರ. ಸಂ. | ಪ್ರಸ್ತುತ ಇರುವ ಪದನಾಮ | ಪುನರ್ ನಾಮಕರಣ ಮಾಡಲಾದ ಪದನಾಮ | ಪೂರ್ಣಗೊಳಿಸಿದ ಸೇವಾವಧಿಯಲ್ಲಿ ಬದಲಾಗುವ ಪದನಾಮ/ಉನ್ನತ ವ್ಯಾಸಂಗವನ್ನು ಹೊಂದಿದ್ದಲ್ಲಿ ಬದಲಾಗುವ ಪದನಾಮ | ವೇತನ ಶ್ರೇಣಿ |
|---|---|---|---|---|
| 1 | ಸಹಾಯಕ ದಂತ ಚಿಕಿತ್ಸಕರು. | – | – | ₹14050–25050 |
| | | ಹಿರಿಯ ದಂತ ಚಿಕಿತ್ಸಕರು/<br>ಹಿರಿಯ ದಂತ ಶಸ್ತ್ರ ಚಿಕಿತ್ಸಕರು | ಆರು ವರ್ಷ ಸೇವೆ ಪೂರ್ಣಗೊಳಿಸಿದ ನಂತರ<br>ಸ್ನಾತಕೋತ್ತರ ಪದವಿ ಪೂರ್ಣಗೊಳಿಸಿದವರಿಗೆ | ₹15200–25650 |
| | | ಮುಖ್ಯ ದಂತ ಚಿಕಿತ್ಸಕರು/<br>ಮುಖ್ಯ ದಂತ ಶಸ್ತ್ರ ಚಿಕಿತ್ಸಕರು, | ಹದಿಮೂರು ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದವರಿಗೆ<br>ಸ್ನಾತಕೋತ್ತರ ಪದವಿ ಪೂರ್ಣಗೊಳಿಸಿದವರಿಗೆ | ₹18150–26925 |

ಸದರಿ ಆದೇಶವು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರುತ್ತದೆ.

ಅ) ಮಂಜೂರಾತಿಯಾದ ಒಟ್ಟು ಹುದ್ದೆಗಳು ಸಹಾಯಕ ದಂತ ಚಿಕಿತ್ಸಕರುಗಳು ಪಡೆಯುವ ಪದೋನ್ನತಿ ಹಾಗೂ ಪದೋನ್ನತಿಯ ಮೇಲೆ ಅವಲಂಬಿತವಾಗಿದ್ದು, ಯಾವುದೇ ಕಾರಣಕ್ಕೂ ಒಟ್ಟು ಮಂಜೂರಾತಿಯಾದ 8 ಹುದ್ದೆಗಳಿಗೆ ಮೀರಕೂಡದು

HRMS...

ಆ) ಕಾಲಬದ್ಧ ಪದೋನ್ನತಿ ಸೌಲಭ್ಯವು ತೃಪ್ತಿಕರವಾಗಿ ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಿದವರಿಗೆ ಮಾತ್ರ ವಿಸ್ತರಿಸುವುದು.

ಇ) ವೇತನವನ್ನು ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳ ನಿಯಮ 42(ಬಿ)ಯ ಪ್ರಕಾರ ನಿಗದಿಗೊಳಿಸುವುದು.

ಈ) ಕಾಲಬದ್ಧ ಪದೋನ್ನತಿ ಸೌಲಭ್ಯ ಯೋಜನೆಯನ್ನು ವಿಸ್ತರಿಸುವ ಬಗ್ಗೆ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಯಲ್ಲಿ ಅವಶ್ಯಕ ನಿಯಮಗಳನ್ನು ರೂಪಿಸಿದ ನಂತರ ಕಾಲಬದ್ಧ ಪದೋನ್ನತಿ ಸೌಲಭ್ಯವನ್ನು ಕ್ರಮಬದ್ಧಗೊಳಿಸಲಾಗುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: F.D. 477 Exp.-9/2010, ದಿನಾಂಕ:03-02-2011 ರಲ್ಲಿ ನೀಡಲಾದ ಸಹಮತಿಯ ಅನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಗೋವಿಂದಸ್ವಾಮಿ) 21/3
ಪೀಠಾಧಿಕಾರಿ,
ಕಾರ್ಮಿಕ ಇಲಾಖೆ.
(ಕಾರಾವಿ ಯೋ (ವೈ) ಸೇವೆಗಳು)
21/03/2012

ಗೆ.

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು, ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವ ಸಲುವಾಗಿ ಹಾಗೂ ಪ್ರಕಟಿಸಿದ 100 ಪ್ರತಿಗಳನ್ನು ಪೀಠಾಧಿಕಾರಿ-5, ಕಾರ್ಮಿಕ ಇಲಾಖೆ, ಇ.ಎಸ್.ಐ. ಶಾಖೆಗೆ ಕೊಠಡಿ ಸಂಖ್ಯೆ-411, ವಿಕಾಸ ಸೌಧ, ಬೆಂಗಳೂರು ಇಲ್ಲಿಗೆ ಒದಗಿಸುವಂತೆ ಕೋರಲಾಗಿದೆ.

**ಪ್ರತಿ:-**

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ನಿರ್ದೇಶಕರು, ಕಾರ್ಮಿಕ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು, ಬೆಂಗಳೂರು.
3) ಸರ್ಕಾರದ ಅಧೀನ ಕಾರ್ಯದರ್ಶಿ ಆರ್ಥಿಕ ಇಲಾಖೆ ವೆಚ್ಚ-9 ವಿಧಾನ ಸೌಧ.
4) ಸರ್ಕಾರದ ಅಧೀನ ಕಾರ್ಯದರ್ಶಿ ಸಿ.ಅ.ಸು.ಇ (ಸೇವಾ ನಿಯಮಗಳು 3).
5) ಸರ್ಕಾರದ ಕಾರ್ಯದರ್ಶಿ/ಜಂಟಿ ಕಾರ್ಯದರ್ಶಿಯವರ ಆಪ್ತ ಶಾಖೆ, ಕಾರ್ಮಿಕ ಇಲಾಖೆ.
6) ಶಾಖಾ ರಕ್ಷಕ ಕಡತ ಹೆಚ್ಚುವರಿ ಪ್ರತಿ.

09 APR 2013
ಬೆಂಗಳೂರು-560 010

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ಇಲಾಖೆಯ ನೇತ್ರ ಸಹಾಯಕ ವೃಂದದ ಹುದ್ದೆಗಳನ್ನು ಪುನರ್ ಪದನಾಮೀಕರಿಸುವ ಬಗ್ಗೆ.

**ಓದಲಾಗಿದೆ:-** 1) ನಿರ್ದೇಶಕರು, ಕಾರಾವಿ ಯೋಜನೆ ವೈದ್ಯಕೀಯ ಸೇವೆಗಳು, ಇವರ ಪತ್ರ ಸಂಖ್ಯೆ:ಅಭಿವೃದ್ಧಿ/178/2012-13, ದಿನಾಂಕ:16-01-2013.

2) ಸರ್ಕಾರದ ಆದೇಶ ಸಂಖ್ಯೆ.ಆಕುಂಕ 357 ಸಿಜಿಇ 2012, ದಿನಾಂಕ:27-12-2012.

**ಪ್ರಸ್ತಾವನೆ:**

ನಿರ್ದೇಶಕರು, ಕಾರಾವಿ ಯೋಜನೆ ವೈದ್ಯಕೀಯ ಸೇವೆಗಳು, ರಾಜಾಜಿನಗರ, ಬೆಂಗಳೂರು ಇವರು, ಮೇಲೆ ಓದಲಾದ (1)ರ ಪತ್ರದಲ್ಲಿ ಇಲಾಖೆಯ ನೇತ್ರ ಸಹಾಯಕ (Refractionist)ರಾಗಿ ಶ್ರೀ ಆನಂದಕುಮಾರ್, ಶ್ರೀ ವಿ.ಎಸ್.ರಾಯದುರ್ಗ ಮತ್ತು ಶ್ರೀಮತಿ ಆರ್.ಹರಿಣಿ ಇವರು ಸೇವಾ ನಿರತರಾಗಿದ್ದಾರೆಂದು ಇವರು ಕರ್ತವ್ಯ ನಿರ್ವಹಿಸುತ್ತಿರುವ "ನೇತ್ರ ಸಹಾಯಕರು" ಎಂಬ ಹುದ್ದೆಯನ್ನು "ನೇತ್ರಾಧಿಕಾರಿಗಳು" ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮಾದರಿಯಲ್ಲಿ ಪದನಾಮೀಕರಿಸುವಂತೆ ಕೋರಿರುತ್ತಾರೆ.

ಮೇಲೆ ಓದಲಾದ (2)ರ ಆದೇಶದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ "ನೇತ್ರ ಸಹಾಯಕ"ರ ಹುದ್ದೆಯನ್ನು "ನೇತ್ರಾಧಿಕಾರಿಗಳು" ಎಂದು ಈ ಕೆಳಕಂಡ ಷರತ್ತುಗಳೊಂದಿಗೆ ಹೊರಡಿಸಿದೆ.

ಷರತ್ತು

1) "ನೇತ್ರ ಸಹಾಯಕ" ಎಂಬ ಪದನಾಮವನ್ನು "ನೇತ್ರಾಧಿಕಾರಿಗಳು" ಎಂದು ಪದನಾಮೀಕರಿಸಿರುವುದರಿಂದ ಯಾವುದೇ ವೇತನ ಶ್ರೇಣಿ/ವೇತನ ಹೆಚ್ಚಳ/ಮುಂಬಡ್ತಿಗಾಗಿ ನೌಕರರು ಬೇಡಿಕೆ ಸಲ್ಲಿಸತಕ್ಕದ್ದಲ್ಲ.

2) ಪುನರ್ ಪದನಾಮೀಕರಣ ಮಾಡಿದ ಅನ್ವಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಸೂಕ್ತ ತಿದ್ದುಪಡಿ ಮಾಡುವುದು.

3) ಈ ಹುದ್ದೆಗಳಿಗೆ ನಿಗದಿಪಡಿಸಿದ ಕರ್ತವ್ಯ ಮತ್ತು ಜವಾಬ್ದಾರಿಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

4) ಖಾಲಿ ಇರುವ ಸ್ಥಳಗಳಲ್ಲಿ ಈ ಹುದ್ದೆಗಳು ಅಸ್ತಿತ್ವದಲ್ಲಿರುತ್ತದೆ

HRMS

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ.

<u>ಸರ್ಕಾರದ ಆದೇಶ ಸಂಖ್ಯೆ.ಕಾಇ 33 ಎಲ್ಎಸ್ಐ 2013,</u>
<u>ಬೆಂಗಳೂರು, ದಿನಾಂಕ:05-04-2013.</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ಇಲಾಖೆಯ "ನೇತ್ರ ಸಹಾಯಕರು" (Refractionist) ಎಂಬ ಹುದ್ದೆಯನ್ನು ನೇತ್ರಾಧಿಕಾರಿಗಳು (Opthalmic Officer)ಎಂದು ಈ ಕೆಳಕಂಡ ಷರತ್ತಿಗೊಳಪಟ್ಟು ಪದನಾಮೀಕರಿಸಿದೆ.

1) "ನೇತ್ರ ಸಹಾಯಕ" ಎಂಬ ಪದನಾಮವನ್ನು "ನೇತ್ರಾಧಿಕಾರಿಗಳು" ಎಂದು ಪದನಾಮೀಕರಿಸಿರುವುದರಿಂದ ಯಾವುದೇ ವೇತನ ಶ್ರೇಣಿ/ವೇತನ ಹೆಚ್ಚಳ/ಮುಂಬಡ್ತಿಗಾಗಿ ನೌಕರರು ಬೇಡಿಕೆ ಸಲ್ಲಿಸತಕ್ಕದ್ದಲ್ಲ.

2) ಪುನರ್ ಪದನಾಮೀಕರಣ ಮಾಡಿದ ಅನ್ವಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಸೂಕ್ತ ತಿದ್ದುಪಡಿ ಮಾಡುವುದು.

3) ಈ ಹುದ್ದೆಗಳಿಗೆ ನಿಗದಿಪಡಿಸಿದ ಕರ್ತವ್ಯ ಮತ್ತು ಜವಾಬ್ದಾರಿಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

4) ಹಾಲಿ ಇರುವ ಸ್ಥಳಗಳಲ್ಲೇ ಈ ಹುದ್ದೆಗಳು ಅಸ್ತಿತ್ವದಲ್ಲಿರುತ್ತದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ.ಆಇ 179 ವೆಚ್ಚ-9/ 2013, ದಿನಾಂಕ: 28-03-2013ರ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

5/4
(ಗೋವಿಂದಸ್ವಾಮಿ)
ಪೀಠಾಧಿಕಾರಿ,
ಕಾರ್ಮಿಕ ಇಲಾಖೆ.
(ಕಾರಾವಿ ಯೋ (ವೈ) ಸೇವೆಗಳು)
(ದೂರವಾಣಿ ಸಂ.2203 5022)

ಗೆ,

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ನಿರ್ದೇಶಕರು, ಕಾರ್ಮಿಕ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು, ಬೆಂಗಳೂರು.
3) ಸರ್ಕಾರದ ಉಪ ಕಾರ್ಯದರ್ಶಿ,(ಕಲ್ಯಾಣ) ಆರ್ಥಿಕ ಇಲಾಖೆ, ವಿಧಾನ ಸೌಧ.
4) ಸಂಬಂಧಪಟ್ಟ ನೌಕರರಿಗೆ (ನಿರ್ದೇಶಕರ ಮೂಲಕ)
5) ಸರ್ಕಾರದ ಪ್ರಧಾನ ಕಾರ್ಯದರ್ಶಿ/ಜಂಟಿ ಕಾರ್ಯದರ್ಶಿಯವರ ಆಪ್ತ ಶಾಖೆ, ಕಾರ್ಮಿಕ ಇಲಾಖೆ.

E.S.I.S (M) SERVICES
KARNATAKA

DIRECTORATE OF E. S. I. S. MEDICAL SERVICES
ಎಸ್. ನಿಜಲಿಂಗಪ್ಪ ರಸ್ತೆ, 2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560 010
S.Nijalingappa Road, II Block, RAJAJINAGAR, BANGALORE – 560 010.
Telefax: 2332 4216
2332 8105
http://labour.kar.nic.in/esism/esis-index.htm

ದಿನಾಂಕ: 17-04-2013

ಸಂಖ್ಯೆ:ಅಭಿವೃದ್ಧಿ/178/12-13

ಹಿಂ ಬ ರ ಹ

ಸರ್ಕಾರದಿಂದ ಸ್ವೀಕೃತವಾದ ಆದೇಶ ಸಂಖ್ಯೆ: ಕಾಇ. 33. ಎಲ್.ಎಸ್.ಐ. 2013, ಬೆಂಗಳೂರು ದಿನಾಂಕ: 05-04-2013 ರ ಪ್ರತಿಯನ್ನು ಈ ಪತ್ರದೊಂದಿಗೆ ಅಡಕಗೊಳಿಸಿದೆ. ಸದರಿ ಸರ್ಕಾರಿ ಆದೇಶದಂತೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದೆ.

ನಿರ್ದೇಶಕರು,
ಕಾರಾವಿ. ಯೋಜನೆ ವೈದ್ಯಕೀಯ ಸೇವೆಗಳು.

ಗೆ,
ವೈದ್ಯಕೀಯ ಅಧೀಕ್ಷಕರು,
ಕಾರಾವಿ. ಆಸ್ಪತ್ರೆ, ಇಂದಿರಾನಗರ,
ಬೆಂಗಳೂರು

ಪ್ರತಿಯನ್ನು:

1. ಈ ನಿರ್ದೇಶನಾಲಯದ ಎಲ್ಲಾ ಅಧಿಕಾರಿಗಳ ಮಾಹಿತಿಗಾಗಿ
2. ಈ ನಿರ್ದೇಶನಾಲಯದ ಸಿಬ್ಬಂದಿ / ಅಂಕಿಅಂಶ (ವಾರ್ಷಿಕ ವರದಿ) ಹಾಗೂ ಹೆಚ್.ಆರ್.ಎಂ.ಎಸ್. ಸಂಕಲನ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
3. ಕ.ಪ್ರ.

ಕರ್ನಾಟಕ ಸರ್ಕಾರ
GOVERNMENT OF KARNATAKA
ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಯ ನಿರ್ದೇಶನಾಲಯ
DIRECTORATE OF E. S. I. S. MEDICAL SERVICES
ಎಸ್. ನಿಜಲಿಂಗಪ್ಪ ರಸ್ತೆ, 2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು - 560 010
S.Nijalingappa Road, II Block, RAJAJINAGAR, BANGALORE ґ 560 010.
http://www.karnataka.gov.in/esisms Tel / Fax:080 - 2332 4216

**ಸಂಖ್ಯೆ:ESIS/ಅಭಿವೃದ್ಧಿ/204/19-20** **ದಿನಾಂಕ: 12-07-2022**

# ಹಿಂಬರಹ

ವಿಷಯ: ಕಾರ್ಮಿಕ ರಾಜ್ಯ ವಿಮಾ ಇಲಾಖೆಯಲ್ಲಿನ ಫಾರ್ಮಸಿಸ್ಟ್ ಹುದ್ದೆಯ ಪದನಾಮವನ್ನು **ಫಾರ್ಮಸಿ ಅಧಿಕಾರಿ**ಯೆಂದು ಮರುಪದನಾಮೀಕರಿಸುವ ಬಗ್ಗೆ.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ: LD-LSI/72/2020, ದಿನಾಂಕ: 14-08-2020 ಮತ್ತು ದಿ: 01-07-2022.

*****

ಉಲ್ಲೇಖಿತ ಸರ್ಕಾರದ ಪತ್ರಗಳ ಪ್ರತಿಯನ್ನು ಈ ಪತ್ರದೊಂದಿಗೆ ಅಡಕಗೊಳಿಸುತ್ತಾ, ಸದರಿ ಸರ್ಕಾರದ ಪತ್ರಗಳಲ್ಲಿ ಸೂಚಿಸಿರುವಂತೆ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ.

ನಿರ್ದೇಶಕರು
ಕಾರಾವಿ ಯೋ ವೈ ಸೇವೆ.

ರವರಿಗೆ,

ನೋಡಲ್ ಅಧಿಕಾರಿ – HRMS /.ಉಪನಿರ್ದೇಶಕರು (ಕಾರ್ಯಕ್ರಮ), ಕಾರಾವಿ ಯೋ ವೈ ಸೇವೆ, ರಾಜಾಜಿನಗರ, ಬೆಂ. ಇವರ ಮಾಹಿತಿಗಾಗಿ ಸಲ್ಲಿಸುತ್ತಾ, HRMS ನಲ್ಲಿ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದೆ.

ಪ್ರತಿಯನ್ನು (ಮಾಹಿತಿಗಾಗಿ ಸಲ್ಲಿಸಿದೆ):

1. ಈ ನಿರ್ದೇಶನಾಲಯದ ಫಾರ್ಮಸಿಸ್ಟ್ / ಹೆಚ್ ಆರ್ ಎಂ ಎಸ್/ ಆಯವ್ಯಯ/ಕೆ2 ಸಂಕಲನ.
2. ವೈದ್ಯಕೀಯ ಅಧೀಕ್ಷಕರು, ಎಲ್ಲಾ ಕಾರಾವಿ ಆಸ್ಪತ್ರೆಗಳು/ ರೋಗ ಪತ್ತೆ ಹಚ್ಚುವ ಕೇಂದ್ರ, ಬಸವನಗುಡಿ, ಬೆಂಗಳೂರು.
3. ಆಡಳಿತ ವಿಮಾ ವೈದ್ಯಾಧಿಕಾರಿಗಳು ಎಲ್ಲಾ ಕಾರಾವಿ ಚಿಕಿತ್ಸಾಲಯಗಳು.
4. ಕಛೇರಿ ಪ್ರತಿ.

E:/Himbaraha 2020-21

# ಕರ್ನಾಟಕ ಸರ್ಕಾರ

ಸಂ: LD-LSI/72/2020

ಕರ್ನಾಟಕಸರ್ಕಾರದಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 01 -07-2022.

**ಇಂದ**.
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಕಾರ್ಮಿಕ ಇಲಾಖೆ,
ವಿಕಾಸಸೌಧ.

**ಇವರಿಗೆ**.
ನಿರ್ದೇಶಕರು,
ಕಾರಾವಿ.ಯೋ.ವೈ.ಸೇವೆಗಳು,
ರಾಜಾಜಿನಗರ,
ಬೆಂಗಳೂರು.-10.

ವಿಮಾ ಯೋಜನೆ ವೈದ್ಯಕೀಯ ... ನಿರ್ದೇಶಕರ ಆಪ್ತ ಶಾಖೆ ... ಪತ್ರ ಸಂಖ್ಯೆ 300/20.22-23
04 JUL 2022
ಬೆಂಗಳೂರು-560 010

**ಮಾನ್ಯರೇ**,

**ವಿಷಯ**:- ಕಾರ್ಮಿಕ ರಾಜ್ಯ ವಿಮಾ ಇಲಾಖೆಯಲ್ಲಿನ ಫಾರ್ಮಸಿಸ್ಟ್ ಹುದ್ದೆಯ ಪದನಾಮವನ್ನು ಫಾರ್ಮಸಿ ಅಧಿಕಾರಿಯೆಂದು ಮರುಪದನಾಮೀಕರಿಸುವ ಬಗ್ಗೆ.

**ಉಲ್ಲೇಖ**:- 1. ತಮ್ಮ ಪತ್ರ ಸಂಖ್ಯೆ:ESIS/ಅಭಿವೃದ್ಧಿ/204/19-20 ದಿನಾಂಕ: 06.06.2022.
2. ಸರ್ಕಾರದ ಆದೇಶ ಸಂಖ್ಯೆ: LD-LSI-72-2020 ದಿನಾಂಕ: 14-08-2020

**********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಕಾರ್ಮಿಕ ರಾಜ್ಯ ವಿಮಾ ಇಲಾಖೆಯಲ್ಲಿನ ಫಾರ್ಮಾಸಿಸ್ಟ್ ಹುದ್ದೆಯ ಪದನಾಮವನ್ನು ಕೆಲವು ಷರತ್ತುಗೊಳಪಟ್ಟು ಫಾರ್ಮಾಸಿ ಅಧಿಕಾರಿ ಎಂದು ಮರುಪದನಾಮೀಕರಿಸಿ ಸರ್ಕಾರದ ಉಲ್ಲೇಖ (2) ರ ಆದೇಶವನ್ನು ಹೊರಡಿಸಲಾಗಿರುತ್ತದೆ. ಅದರಂತೆ ಸದರಿ ಆದೇಶವನ್ನು ನಿಯಮಾನುಸಾರ ಪರಿಶೀಲಿಸಿ ಕ್ರಮವಹಿಸುವಂತೆ ತಮಗೆ ತಿಳಿಸಲು ನಿರ್ದೇಶಿಸಲ್ಪಟ್ಟಿರುತ್ತೇನೆ.

ತಮ್ಮ ವಿಶ್ವಾಸಿ
Vijaya.N 1/7/2022
(ವಿಜಯ.ಎನ್)
ಪೀಠಾಧಿಕಾರಿ-5,
ಕಾರ್ಮಿಕಇಲಾಖೆ,
(ಕಾ.ರಾ.ವಿ.ಯೋ.ವೈ.ಸೇವೆಗಳು)

(19)

# ಕರ್ನಾಟಕ ಸರ್ಕಾರದ ನಡವಳಿಗಳು.

**ವಿಷಯ**:- ಕಾರ್ಮಿಕ ರಾಜ್ಯ ವಿಮಾ ಇಲಾಖೆಯಲ್ಲಿನ ಫಾರ್ಮಾಸಿಸ್ಟ್ ಹುದ್ದೆಯ ಪದನಾಮವನ್ನು ಫಾರ್ಮಸಿ ಅಧಿಕಾರಿಯೆಂದು ಬದಲಾಯಿಸುವ ಬಗ್ಗೆ.

**ಓದಲಾಗಿದೆ**:- 1) ಸರ್ಕಾರದ ಆದೇಶ ಸಂ: ಆಕುಕ 113 ಹೆಚ್‌ಎಸ್‌ಎಂ 2019 , ದಿನಾಂಕ: 29-02-2020.
2) ನಿರ್ದೇಶಕರು, ಕಾರಾವಿಯೋವ್ಯಸೇ ಇವರ ಪತ್ರ ಸಂಖ್ಯೆ: ಇ.ಎಸ್.ಐ.ಎಸ್ /ಅಭಿವೃದ್ಧಿ/20419-20, ದಿನಾಂಕ:26-03-2020.

**ಪ್ರಸ್ತಾವನೆ**:-

ಮೇಲೆ ಕ್ರಮ ಸಂ:(1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಫಾರ್ಮಸಿಸ್ಟರಿಗೆ ಭಾರತೀಯ ವಿಜ್ಞಾನ ಪರಿಷತ್ತಿನ ಹಾಗೂ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತಿನ ಪ್ರಸ್ತಾವನೆಯ ಮೇರೆಗೆ ಪಿ.ಯು.ಸಿ + ಔಷಧ ವಿಜ್ಞಾನದ ಡಿಪ್ಲೋಮಾ/ಬಿ.ಫಾರ್ಮ ಕನಿಷ್ಠ ವಿದ್ಯಾರ್ಹತೆಯೊಂದಿಗೆ ಫಾರ್ಮಸಿ ಕೌನ್ಸಿಲ್‌ನಲ್ಲಿ ನೊಂದಾಯಿತರಾಗಿರಬೇಕೆಂದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು, ನಿಗಧಿಗೊಳಿಸಿವೆ. ವಿಶೇಷವಾಗಿ ಆಸ್ಪತ್ರೆಗಳಲ್ಲಿ ಔಷಧಿಗಳು ಮತ್ತು ಅವುಗಳ ಉಪಯೋಗ ಹಾಗೂ ಸೇವನೆಯ ವಿಧಾನಗಳ ಕುರಿತು ಜನ ಸಾಮಾನ್ಯರಿಗೆ ಸಮಾಲೋಚನೆ ಮುಖಾಂತರ ಅರಿವು ಮತ್ತು ಜಾಗೃತಿ ಮೂಡಿಸುವುದರಲ್ಲಿ ಫಾರ್ಮಸಿಸ್ಟರ ಸೇವೆ ಪ್ರಮುಖ ಪಾತ್ರ ವಹಿಸುತ್ತಿದೆ.

ಆದ್ದರಿಂದ ಬೇರೆ ರಾಜ್ಯಗಳಲ್ಲಿ ಈಗಾಗಲೇ ಫಾರ್ಮಸಿಸ್ಟ ಹುದ್ದೆಯನ್ನು ಫಾರ್ಮಸಿ ಅಧಿಕಾರಿ (Pharmacy Officer) ಎಂಬುದಾಗಿ ಪದನಾಮ ಬದಲಾಯಿಸಲಾಗಿದ್ದು, ನೆರೆರಾಜ್ಯ ಮಹಾರಾಷ್ಟ್ರದಲ್ಲಿ ಕಾರ್ಯಗತಗೊಂಡು ಫಲಕಾರಿಯೂ ಆಗಿದೆ. ಆದ್ದರಿಂದ ನಮ್ಮ ರಾಜ್ಯದಲ್ಲೂ ಫಾರ್ಮಸಿಸ್ಟ ಹುದ್ದೆಯ ಪದನಾಮವನ್ನು ಬದಲಾಯಿಸಿ, ಕೆಲವೊಂದು ಷರತ್ತಿಗೊಳಪಟ್ಟು ಫಾರ್ಮಸಿ ಅಧಿಕಾರಿ ಎಂದು ಮರುಪದನಾಮಿಕರಿಸಿ,ಆದೇಶಿಸಲಾಗಿರುತ್ತದೆ.

ಮೇಲೆ ಕ್ರಮ ಸಂ:(2)ರಲ್ಲಿ ಓದಲಾದ ನಿರ್ದೇಶಕರು, ಕಾ.ರಾ.ವಿ.ಯೋ.ವೈ.ಸೇ ಇವರ ಪತ್ರದಲ್ಲಿ ಫಾರ್ಮಸಿಸ್ಟ ಹುದ್ದೆಯನ್ನು ಫಾರ್ಮಸಿ ಅಧಿಕಾರಿ ಎಂದು ಪದನಾಮ ಬದಲಾವಣೆ ಮಾಡುವುದರಿಂದ ಸರ್ಕಾರಕ್ಕೆ ಯಾವುದೇ ಆರ್ಥಿಕ ಹೊರೆ ಉಂಟಾಗುವುದಿಲ್ಲವಾದ್ದರಿಂದ ಪದನಾಮ ಬದಲಾವಣೆ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ನಿರ್ದೇಶಕರು, ಕಾ.ರಾ.ವಿ.ಯೋ.ವೈ.ಸೇ ಇವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂ: LD-LSI/72/2020, ದಿನಾಂಕ: 14-08-2020

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಫಾರ್ಮಸಿಸ್ಟಗಳ ಪದನಾಮವನ್ನು ಈ ಕೆಳಕಂಡ ಷರತ್ತಿಗೊಳಪಟ್ಟು 'ಫಾರ್ಮಸಿ ಅಧಿಕಾರಿ' (Pharmacy Officer) ಎಂದು ಮರುಪದನಾಮಿಕರಿಸಿ, ಆದೇಶಿಸಲಾಗಿದೆ.

1. ಈ ರೀತಿ ಪದನಾಮೀಕರಿಸುವುದರಿಂದ ಯಾವುದೇ ವೇತನ ಶ್ರೇಣಿ/ವೇತನ ಹೆಚ್ಚಳಕ್ಕಾಗಲೀ/ ಮುಂಬಡ್ತಿಗಾಗಲೀ ಬೇಡಿಕೆಯನ್ನು ಸಲ್ಲಿಸತಕ್ಕದಲ್ಲ.
2. ಪುನರ್ ಪದನಾಮೀಕರಣ ಮಾಡಿದ ನಂತರ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಸೂಕ್ತ ತಿದ್ದುಪಡಿ ಮಾಡುವುದು.
3. ಈ ಹುದ್ದೆಗಳಿಗೆ ನಿಗಧಿಪಡಿಸಿದ ಕರ್ತವ್ಯ ಮತ್ತು ಜವಾಬ್ದಾರಿಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.
4. ಹಾಲಿ ಇರುವ ಸ್ಥಳಗಳಲ್ಲಿಯೇ ಈ ಹುದ್ದೆಗಳು ಅಸ್ತಿತ್ವದಲ್ಲಿರುತ್ತದೆ.

ನಿರ್ದೇಶಕರ ಆಪ್ತ ಶಾಖೆ
ಪತ್ರ ಸಂಖ್ಯೆ 364 /2020-21
19 AUG 2020
ಬೆಂಗಳೂರು-560 010

------2

(18)



ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್ ಡಿ 01 ಟಿಎಫ್ ಪಿ 1996, ದಿನಾಂಕ:10.07.1996ರಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂ: # 12, LD-LSI/72/2020, ದಿನಾಂಕ: 18-06-2020ರ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕರಾಜ್ಯಪಾಲರಆದೇಶಾನುಸಾರ
ಮತ್ತುಅವರ ಹೆಸರಿನಲ್ಲಿ.

A. Umadevi 14/8/2020
(ಎ.ಉಮಾದೇವಿ)
ಪೀಠಾಧಿಕಾರಿ-5 (ಪ್ರ)
ಕಾರ್ಮಿಕ ಇಲಾಖೆ
(ಕಾ.ರಾ.ವಿ.ಯೋ.ವೈ.ಸೇವೆಗಳು)

15/2 14/08/20

**ಇವರಿಗೆ,**

1) ಪ್ರಧಾನ ಮಹಾಲೇಖಪಾಲರು (ಲೆಕ್ಕಪತ್ರ ಮತ್ತು ಲೆಕ್ಕಪತ್ರ ತಪಾಸಣೆ), ಕರ್ನಾಟಕ, ಪಾರ್ಕ್ ಹೌಸ್‌ರಸ್ತೆ, ಅಂಚೆ ಪೆಟ್ಟಿಗೆ ಸಂ:5329, ಬೆಂಗಳೂರು-1.
2) ನಿರ್ದೇಶಕರು, ಕಾ.ರಾ.ವಿ.ವೈ.ಸೇವೆಗಳ ನಿರ್ದೇಶನಾಲಯ, ರಾಜಾಜಿನಗರ, ಬೆಂಗಳೂರು.
3) ಶಾಖಾ ರಕ್ಷ ಕಡತ/ಹೆಚ್ಚುವರಿ ಪ್ರತಿ.

**ಪ್ರತಿಯನ್ನು:-**

1) ಆಂತರಿಕ ಆರ್ಥಿಕ ಸಲಹೆಗಾರರು ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಸ.ಕ/ಹಿಂ.ವ.ಕಲ್ಯಾಣ/ಕಾರ್ಮಿಕ/ಮಮಅ ಮತ್ತು ಆ.ಸಂ.ಕಲ್ಯಾಣ ಇಲಾಖೆ, ವಿಕಾಸಸೌಧ.
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಾರ್ಮಿಕ ಇಲಾಖೆ.
3) ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಶಾಖೆ, ಕಾರ್ಮಿಕ ಇಲಾಖೆ.

ಕರ್ನಾಟಕ ಸರ್ಕಾರ
GOVERNMENT OF KARNATAKA
ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಯ ನಿರ್ದೇಶನಾಲಯ
DIRECTORATE OF E. S. I. S. MEDICAL SERVICES
ಎಸ್. ನಿಜಲಿಂಗಪ್ಪ ರಸ್ತೆ, 2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು - 560 010
S.Nijalingappa Road, II Block, RAJAJINAGAR, BANGALORE ಗ 560 010.

https://esisms.karnataka.gov.in/ Tel / Fax:080 - 2332 4216

**ಸಂಖ್ಯೆ:ESIS/ಅಭಿವೃದ್ಧಿ/204/19-20** **ದಿನಾಂಕ: 10-10-2022**

# ಹಿಂಬರಹ

ವಿಷಯ: ಕಾರ್ಮಿಕ ರಾಜ್ಯ ವಿಮಾ ಇಲಾಖೆಯಲ್ಲಿನ ಹಿರಿಯ ಫಾರ್ಮಸಿಸ್ಟ್ ಹುದ್ದೆಯ ಪದನಾಮವನ್ನು **ಹಿರಿಯ ಫಾರ್ಮಸಿ ಅಧಿಕಾರಿ** ಎಂದು ಮರುಪದನಾಮೀಕರಿಸುವ ಬಗ್ಗೆ.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ: LD-LSI/72/2020, ದಿ: 01-10-2022.

*****

ಉಲ್ಲೇಖಿತ ಸರ್ಕಾರದ ಪತ್ರಗಳ ಪ್ರತಿಯನ್ನು ಈ ಪತ್ರದೊಂದಿಗೆ ಅಡಕಗೊಳಿಸುತ್ತಾ, ಸದರಿ ಸರ್ಕಾರದ ಪತ್ರಗಳಲ್ಲಿ ಸೂಚಿಸಿರುವಂತೆ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ.

11/10/2022

ನಿರ್ದೇಶಕರು
ಕಾರಾವಿ ಯೋ ವೈ ಸೇವೆ.

ರವರಿಗೆ,

ನೋಡಲ್ ಅಧಿಕಾರಿ – HRMS / ಉಪನಿರ್ದೇಶಕರು (ಕಾರ್ಯಕ್ರಮ), ಕಾರಾವಿ ಯೋ ವೈ ಸೇವೆ, ರಾಜಾಜಿನಗರ, ಬೆಂ. ಇವರ ಮಾಹಿತಿಗಾಗಿ ಸಲ್ಲಿಸುತ್ತಾ, HRMS ನಲ್ಲಿ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದೆ.

ಪ್ರತಿಯನ್ನು (ಮಾಹಿತಿಗಾಗಿ ಸಲ್ಲಿಸಿದೆ):

1. ಈ ನಿರ್ದೇಶನಾಲಯದ ಫಾರ್ಮಸಿಸ್ಟ್ / ಹೆಚ್ ಆರ್ ಎಂ ಎಸ್/ ಆಯವ್ಯಯ / ಖಜಾನೆ – 2 ಸಂಕಲನ.
2. ವೈದ್ಯಕೀಯ ಅಧೀಕ್ಷಕರು, ಎಲ್ಲಾ ಕಾರಾವಿ ಆಸ್ಪತ್ರೆಗಳು/ ರೋಗ ಪತ್ತೆ ಹಚ್ಚುವ ಕೇಂದ್ರ, ಬಸವನಗುಡಿ, ಬೆಂಗಳೂರು.
3. ಆಡಳಿತ ವಿಮಾ ವೈದ್ಯಾಧಿಕಾರಿಗಳು ಎಲ್ಲಾ ಕಾರಾವಿ ಚಿಕಿತ್ಸಾಲಯಗಳು.
4. ಕಛೇರಿ ಪ್ರತಿ.

E:/Himbaraha 2020-21

ಕಾರ್ಮಿಕ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ನಿರ್ದೇಶಕರ ಆಪ್ತ ಶಾಖೆ
ಪತ್ರ ಸಂಖ್ಯೆ 188 /2022-23
06 OCT 2022
ಬೆಂಗಳೂರು-560 010

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಕಾರ್ಮಿಕ ರಾಜ್ಯ ವಿಮಾ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹಿರಿಯ ಫಾರ್ಮಾಸಿಸ್ಟ ಹುದ್ದೆಯ ಪದನಾಮವನ್ನು **"ಹಿರಿಯ ಫಾರ್ಮಾಸಿ ಅಧಿಕಾರಿ"**ಎಂದು ಪದನಾಮ ಬದಲಾವಣೆ ಮಾಡುವ ಕುರಿತು.

**ಓದಲಾಗಿದೆ:-** 1. ಸರ್ಕಾರದ ಆದೇಶ ಸಂಖ್ಯೆ: ಆಕುಕ 113 ಹೆಚ್ ಎಸ್ ಎಂ 2019 ದಿನಾಂಕ: 29-02-2020 ಮತ್ತು 09-07-2020.
2. ಸರ್ಕಾರದ ಆದೇಶ ಸಂಖ್ಯೆ:ಎಲ್‌ಡಿ ಎಲ್‌ಎಸ್‌ಐ/72/2020, ದಿನಾಂಕ:14-08-2020.
3. ನಿರ್ದೇಶಕರು, ಕಾರಾವಿ ಯೋಜನೆ ವೈದ್ಯಕೀಯ ಸೇವೆಗಳು ಇವರ ಪತ್ರ ಸಂಖ್ಯೆ: ESIS/ ಅಭಿವೃದ್ಧಿ/204/19-20 ದಿನಾಂಕ: 03-08-2022.

**ಪ್ರಸ್ತಾವನೆ:-**

ಮೇಲೆ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಫಾರ್ಮಾಸಿಸ್ಟರ್ ಗೆ ಭಾರತೀಯ ವಿಜ್ಞಾನ ಪರಿಷತ್ತಿನ ಹಾಗೂ ಅಖಿಲಭಾರತ ತಾಂತ್ರಿಕ ಶಿಕ್ಷಣ ಪರಿಷತ್ತಿನ ಪ್ರಸ್ತಾವನೆಯ ಮೇರೆಗೆ ಪಿ.ಯು.ಸಿ+ ಔಷಧ ವಿಜ್ಞಾದ ಡಿಪ್ಲೋಮ/ಬಿ ಫಾರ್ಮ ಕನಿಷ್ಠ ವಿದ್ಯಾರ್ಹತೆಯೊಂದಿಗೆ ಫಾರ್ಮ ಸಿ ಕೌನ್ಸಿಲ್‌ನಲ್ಲಿ ನೊಂದಾಯಿತರಾಗಿರಬೇಕೆಂದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ನಿಗಧಿಗೊಳಿಸಿದೆ. ವಿಶೇಷವಾಗಿ ಆಸ್ಪತ್ರೆಗಳಲ್ಲಿ ಔಷಧಿಗಳು ಮತ್ತು ಅವುಗಳ ಉಪಯೋಗ ಹಾಗೂ ಸೇವನೆಗಳ ವಿಧಾನಗಳ ಕುರಿತು ಜನಸಾಮಾನ್ಯರಿಗೆ ಸಮಾಲೋಚನೆ ಮುಖಾಂತರ ಅರಿವು ಮತ್ತು ಜಾಗೃತಿ ಮುಡಿಸುವುದರಲ್ಲಿ ಫಾರ್ಮಾಸಿಸ್ಟ ರ ಸೇವೆ ಪ್ರಮುಖ ಪಾತ್ರ ವಹಿಸುತ್ತಿದೆ.

ಮೇಲೆ (2) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳ ಇಲಾಖೆಯಲ್ಲಿನ ಫಾರ್ಮಾಸಿಸ್ಟ ಹುದ್ದೆಯನ್ನು "**ಫಾರ್ಮಾಸಿ ಅಧಿಕಾರಿ**" ಎಂದು ಷರತ್ತುಗಳಿಗೊಳಪಟ್ಟು ಮರುಪದನಾಮೀಕರಿಸಿ ಆದೇಶಿಸಲಾಗಿರುತ್ತದೆ.

ಉಲ್ಲೇಖ (3) ರಲ್ಲಿ ಓದಲಾದ ನಿರ್ದೇಶಕರು, ಕಾರಾವಿ ಯೋಜನೆ ವೈದ್ಯಕೀಯ ಸೇವೆಗಳು ಇವರ ಪತ್ರದಲ್ಲಿ ಫಾರ್ಮಾಸಿಸ್ಟ ವೃಂದದ ಹಿರಿಯ ಫಾರ್ಮಾಸಿಸ್ಟ ಹುದ್ದೆಯ ಪದನಾಮವನ್ನು ಸಹ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮಾದರಿಯಲ್ಲಿಯೇ **"ಹಿರಿಯ ಫಾರ್ಮಾಸಿ ಅಧಿಕಾರಿ"**ಎಂದು ಪದನಾಮೀಕರಿಸಿ ಸರ್ಕಾರದ ವತಿಯಿಂದ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಸರ್ಕಾರವು ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: LD-LSI/72/2020, ದಿನಾಂಕ:01-10-2022

(DW)

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕಾರಾವಿ ಯೋಜನೆ ವೈದ್ಯಕೀಯ ಸೇವೆಗಳು ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹಿರಿಯ ಫಾರ್ಮಾಸಿಸ್ಟ ಹುದ್ದೆಯ ಪದನಾಮವನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮಾದರಿಯಲ್ಲಿಯೇ **"ಹಿರಿಯ ಫಾರ್ಮಾಸಿ ಅಧಿಕಾರಿ"**ಎಂದು ಮರು ಪದನಾಮೀಕರಿಸಿ ಆದೇಶಿಸಿದೆ. ಸದರಿ ಬದಲಾವಣೆಯು ಈ ಕೆಳಕಂಡ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಬೇಕಾದ ನಿಬಂಧನೆಗಳಿಗೆ ಒಳಪಟ್ಟಿದೆ.

....2

6/10/2022

**ಷರತ್ತುಗಳು:-**

1) ಈ ರೀತಿ ಪದನಾಮೀಕರಿಸುವುದರಿಂದ ಯಾವುದೇ ವೇತನ ಶ್ರೇಣಿ/ವೇತನ ಹೆಚ್ಚಳಕ್ಕಾಗಲೀ/ ಮುಂಬಡ್ತಿಗಾಗಲೀ ಬೇಡಿಕೆಯನ್ನು ಸಲ್ಲಿಸತಕ್ಕದಲ್ಲ.
2) ಪುನರ್ ಪದನಾಮೀಕರಣ ಮಾಡಿದ ಅನ್ವಯ ವೃಂದ ಮತ್ತು ನಿಯಮಗಳಲ್ಲಿ ಸೂಕ್ತ ತಿದ್ದುಪಡಿ ಮಾಡುವುದು.
3) ಈ ಹುದ್ದೆಗಳಿಗೆ ನಿಗದಿಪಡಿಸಿದ ಕರ್ತವ್ಯ ಮತ್ತು ಜವಾಬ್ದಾರಿಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.
4) ಹಾಲಿ ಇರುವ ಸ್ಥಳಗಳಲ್ಲಿಯೇ ಈ ಹುದ್ದೆಗಳು ಅಸ್ತಿತ್ವದಲ್ಲಿರುತ್ತವೆ.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್ ಡಿ 01 ಟಿಎಫ್ ಪಿ 1996, ದಿನಾಂಕ: 10-07-1996 ರಲ್ಲಿ ಸರ್ಕಾರದ ಕಾರ್ಯದರ್ಶಿಗಳಿಗೆ ನೀಡಿರುವ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಿದೆ

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

Vijaya.N
1/10/2022

(ವಿಜಯ.ಎನ್)
ಪೀಠಾಧಿಕಾರಿ-5
ಕಾರ್ಮಿಕ ಇಲಾಖೆ
(ಕಾ.ರಾ.ವಿ.ಯೋ.ವೈ ಸೇವೆಗಳು)

ಇವರಿಗೆ,

1. ಪ್ರಧಾನ ಮಹಾಲೇಖಪಾಲರು (ಲೆಕ್ಕಪತ್ರ ಮತ್ತು ಲೆಕ್ಕಪತ್ರ ತಪಾಸಣೆ), ಕರ್ನಾಟಕ.
   ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂ: 5329, ಬೆಂಗಳೂರು-1
2. ನಿರ್ದೇಶಕರು, ಕಾರಾವಿ ಯೋಜನೆ ವೈದ್ಯಕೀಯ ಸೇವೆಗಳ ನಿರ್ದೇಶನಾಲಯ, ರಾಜಾಜಿನಗರ, ಬೆಂಗಳೂರು.
3. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿ.

**ಪ್ರತಿಯನ್ನು:-**

1) ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಾರ್ಮಿಕ ಇಲಾಖೆ.
2) ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಶಾಖೆ, ಕಾರ್ಮಿಕ ಇಲಾಖೆ.

ಕರ್ನಾಟಕ ಸರ್ಕಾರ
GOVERNMENT OF KARNATAKA
ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಯ ನಿರ್ದೇಶನಾಲಯ
DIRECTORATE OF E. S. I. S. MEDICAL SERVICES
ಎಸ್. ನಿಜಲಿಂಗಪ್ಪ ರಸ್ತೆ, 2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು - 560 010
S.Nijalingappa Road, II Block, RAJAJINAGAR, BANGALORE ಗ 560 010.

http://www.karnataka.gov.in/esisms Tel / Fax:080 - 2332 4216

ಸಂಖ್ಯೆ:ESIS/ಅಭಿವೃದ್ಧಿ/33/20-21 ದಿನಾಂಕ: 11-05-2023

# ಹಿಂಬರಹ

ವಿಷಯ: ಕಾರ್ಮಿಕ ರಾಜ್ಯ ವಿಮಾ ಇಲಾಖೆಯಲ್ಲಿನ ಶುಶ್ರೂಷಕ ಹುದ್ದೆಯ ಪದನಾಮವನ್ನು **ಶುಶ್ರೂಷಾಧಿಕಾರಿ** ಎಂದು ಮರುಪದನಾಮೀಕರಿಸಿರುವ ಬಗ್ಗೆ.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ: LD-LSI/318/2022, ದಿ: 08-05-2023.

*****

ಉಲ್ಲೇಖಿತ ಸರ್ಕಾರದ ಪತ್ರಗಳ ಪ್ರತಿಯನ್ನು ಈ ಪತ್ರದೊಂದಿಗೆ ಅಡಕಗೊಳಿಸುತ್ತಾ, ಸದರಿ ಸರ್ಕಾರದ ಪತ್ರಗಳಲ್ಲಿ ಸೂಚಿಸಿರುವಂತೆ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ. ಈ ಇಲಾಖೆಯ ಅಧಿಕೃತ ಜಾಲತಾಣ **https://esisms.karnataka.gov.in/** ರಲ್ಲಿ ಅಪಲೋಡ್ ಮಾಡಲಾಗಿದೆ.

11/5/23

ನಿರ್ದೇಶಕರು
ಕಾರಾವಿ ಯೋ ವೈ ಸೇವೆ

ರವರಿಗೆ,

ನೋಡಲ್ ಅಧಿಕಾರಿ – HRMS / ಉಪನಿರ್ದೇಶಕರು (ಕಾರ್ಯಕ್ರಮ), ಕಾರಾವಿ ಯೋ ವೈ ಸೇವೆ, ರಾಜಾಜಿನಗರ, ಬೆಂ. ಇವರ ಮಾಹಿತಿಗಾಗಿ ಸಲ್ಲಿಸುತ್ತಾ, HRMS ನಲ್ಲಿ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದೆ.

ಪ್ರತಿಯನ್ನು:-

1. ಈ ನಿರ್ದೇಶನಾಲಯದ ಎಲ್ಲಾ ಅಧಿಕಾರಿಗಳು/ ಶುಶ್ರೂಷಕ / ಹೆಚ್ ಆರ್ ಎಂ ಎಸ್/ ಆಯವ್ಯಯ / ಖಜಾನೆ – 2 ಸಂಕಲನ.
2. ವೈದ್ಯಕೀಯ ಅಧೀಕ್ಷಕರು, ಎಲ್ಲಾ ಕಾರಾವಿ ಆಸ್ಪತ್ರೆಗಳು/ ರೋಗ ಪತ್ತೆ ಹಚ್ಚುವ ಕೇಂದ್ರ, ಬಸವನಗುಡಿ, ಬೆಂಗಳೂರು.
3. ಆಡಳಿತ ವಿಮಾ ವೈದ್ಯಾಧಿಕಾರಿಗಳು ಎಲ್ಲಾ ಕಾರಾವಿ ಚಿಕಿತ್ಸಾಲಯಗಳು.
4. ಅಧ್ಯಕ್ಷರು, ಕರ್ನಾಟಕ ರಾಜ್ಯ ಇ. ಎಸ್. ಐ. ಎಸ್ ಶುಶ್ರೂಷಕರ ಸಂಘ(ರಿ), ಬೆಂಗಳೂರು.
5. ಕಛೇರಿ ಪ್ರತಿ.

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ**:- ಕಾರ್ಮಿಕ ರಾಜ್ಯ ವಿಮಾ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶುಶ್ರೂಷಕ ವೃಂದದ ಪದನಾಮವನ್ನು **"ಶುಶ್ರೂಷಾಧಿಕಾರಿ"** ಎಂದು ಪದನಾಮ ಬದಲಾವಣೆ ಮಾಡುವ ಕುರಿತು.

**ಓದಲಾಗಿದೆ:-** 1.. ಸರ್ಕಾರದ ಆದೇಶ ಸಂಖ್ಯೆ: ಆಕುಕ 122 ಎಂ ಎಸ್ ಎನ್ 2017 ದಿನಾಂಕ: 11-05-2020.

2. ನಿರ್ದೇಶಕರು, ಕಾರಾವಿ ಯೋಜನೆ ವೈದ್ಯಕೀಯ ಸೇವೆಗಳು ಇವರ ಪತ್ರ ಸಂಖ್ಯೆ: ESIS/ ಅಭಿವೃದ್ಧಿ/33/20-21 ದಿನಾಂಕ: 13-12-2022.

3. ನಿರ್ದೇಶಕರು, ಕಾರಾವಿ ಯೋಜನೆ ವೈದ್ಯಕೀಯ ಸೇವೆಗಳ ಇವರ ಶುಶ್ರೂಷಕರ ಪದನಾಮ ಬದಲಾವಣೆ ಸಮಿತಿಯ ವರದಿ ದಿನಾಂಕ: 25-11-2020.

4. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ (ನರ್ಸಿಂಗ್ ಶಾಖೆ), ಭಾರತ ಸರ್ಕಾರ, ನವದೆಹಲಿ ಇವರ ಆದೇಶ ಸಂಖ್ಯೆ: Z.28015/41/2014-N ದಿನಾಂಕ: 09-09-2016.

5. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ (ಸಿ.ಜಿ.ಹೆಚ್.ಎಸ್-II ಶಾಖೆ), ಭಾರತ ಸರ್ಕಾರ, ನವದೆಹಲಿ ಇವರ ಆದೇಶ ಸಂಖ್ಯೆ: F.NO.A.60011/13/2017-CGHS.II ದಿನಾಂಕ: 08-03-2017.

ನಿರ್ದೇಶಕರ ಆಪ್ತ ಶಾಖೆ ಸಂಖ್ಯೆ 89...23 24 9 MAY 2023 ಬೆಂಗಳೂರು-560 01

**ಪ್ರಸ್ತಾವನೆ:-**

ಮೇಲೆ ಓದಲಾದ (1) ರ ಸರ್ಕಾರದ ಆದೇಶದಲ್ಲಿ ಪ್ರಸ್ತುತ ಶುಶ್ರೂಷಕರುಗಳು ಕೋವಿಡ್-19 ಸೋಂಕಿನ ವಿರುದ್ಧ ತಮ್ಮ ವೈಯಕ್ತಿಕ ಬದುಕನ್ನು ಲೆಕ್ಕಿಸದೇ ಹಗಲಿರುಳು ಸೇವೆ ಸಲ್ಲಿಸಿ ಶ್ರಮಿಸುತ್ತಿರುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ಮಾದರಿಯಲ್ಲಿ ಕರ್ನಾಟಕ ರಾಜ್ಯದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿನ ಶುಶ್ರೂಷಕ ವೃಂದದ ಪದನಾಮವನ್ನು **"ಶುಶ್ರೂಷಾಧಿಕಾರಿ"** ಹಾಗೂ ಹಿರಿಯ ಶುಶ್ರೂಷಕ ವೃಂದದ ಪದನಾಮವನ್ನು **"ಹಿರಿಯ ಶುಶ್ರೂಷಾಧಿಕಾರಿ"**ಎಂಬುದಾಗಿ ಷರತ್ತುಗೊಳಪಟ್ಟು ಮರುಪದನಾಮೀಕರಿಸಿ ಆದೇಶಿಸಲಾಗಿರುತ್ತದೆ.

ಉಲ್ಲೇಖ (2) ರಲ್ಲಿ ಓದಲಾದ ನಿರ್ದೇಶಕರು, ಕಾರಾವಿ ಯೋಜನೆ ವೈದ್ಯಕೀಯ ಸೇವೆಗಳು ಇವರ ಪತ್ರದಲ್ಲಿ ಮೇಲೆ ಓದಲಾದ (1) ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆದೇಶದಂತೆಯೇ ಕಾರಾವಿ ಯೋಜನೆ ವೈದ್ಯಕೀಯ ಸೇವೆಗಳ ಇಲಾಖೆಯ ಶುಶ್ರೂಷಕರ ಹುದ್ದೆಯ ಪದನಾಮವನ್ನು **"ಶುಶ್ರೂಷಕ ಅಧಿಕಾರಿ"** ಎಂದು ಪದನಾಮೀಕರಿಸಿ ಸರ್ಕಾರದ ವತಿಯಿಂದ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಮೇಲೆ ಓದಲಾದ (3) ರ ನಿರ್ದೇಶಕರು, ಕಾರಾವಿ ಯೋಜನೆ ವೈದ್ಯಕೀಯ ಸೇವೆಗಳ ಇವರ ಶುಶ್ರೂಷಕರ ಪದನಾಮ ಬದಲಾವಣೆ ಸಮಿತಿಯ ವರದಿಯಲ್ಲಿ ಉಲ್ಲೇಖ (4) ಹಾಗೂ (5) ರ ಆದೇಶದಲ್ಲಿ "Staff Nurse" ಪದನಾಮವನ್ನು "Nursing Officer" ಎಂದು ಹಾಗೂ "Nursing Sister" ಪದನಾಮವನ್ನು "Senior Nursing Officer" ಎಂದು ಪದನಾಮೀಕರಿಸಲಾಗಿರುವುದಾಗಿ ತಿಳಿಸಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮೇಲೆ ಓದಲಾದ (1) ರ ಆದೇಶದಂತೆಯೇ ಕಾರ್ಮಿಕ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶುಶ್ರೂಷಕ ವೃಂದದ **ಪದನಾಮವನ್ನು "ಶುಶ್ರೂಷಾಧಿಕಾರಿ" ಎಂದು ಪದನಾಮ ಬದಲಾವಣೆ ಮಾಡಬಹುದಾಗಿರುತ್ತದೆ ಎಂಬುದಾಗಿ ಸಮಿತಿಯು ಶಿಫಾರಸ್ಸನ್ನು ಸಲ್ಲಿಸಿರುತ್ತಾರೆ.**

.....2

ಸರ್ಕಾರವು ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಶುಶ್ರೂಷಕ ವೃಂದದ ಪದನಾಮವನ್ನು **"ಶುಶ್ರೂಷಾಧಿಕಾರಿ"** ಎಂಬುದಾಗಿ ಕೆಲವೊಂದು ಷರತ್ತುಗೊಳಪಟ್ಟು ಮರು ಪದನಾಮೀಕರಿಸಲು ಸರ್ಕಾರವು ತೀರ್ಮಾನಿಸಿದ್ದು, ಈ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: LD-LSI/318/2022, ದಿನಾಂಕ:08-05-2023

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕಾರಾವಿ ಯೋಜನೆ ವೈದ್ಯಕೀಯ ಸೇವೆಗಳ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶುಶ್ರೂಷಕ ಹುದ್ದೆಯ ಪದನಾಮವನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮಾದರಿಯಲ್ಲಿಯೇ **"ಶುಶ್ರೂಷಾಧಿಕಾರಿ"** ಎಂದು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಮರು ಪದನಾಮೀಕರಿಸಿ ಆದೇಶಿಸಿದೆ.

**ಷರತ್ತುಗಳು:-**

1) ಪದನಾಮೀಕರಿಸಿದ ಹುದ್ದೆಗಳ ವೇತನ ಶ್ರೇಣಿಯಲ್ಲಿ ಯಾವುದೇ ಬದಲಾವಣೆ ಮಾಡತಕ್ಕದ್ದಲ್ಲ.
2) ಪದನಾಮೀಕರಣದ ನಂತರ ಯಾವುದೇ ವೇತನ ಶ್ರೇಣಿ/ವೇತನ ಹೆಚ್ಚಳಕ್ಕಾಗಲೀ/ ಮುಂಬಡ್ತಿಗಾಗಲೀ ಬೇಡಿಕೆಯನ್ನು ಸಲ್ಲಿಸತಕ್ಕದಲ್ಲ.
3) ಈ ಹುದ್ದೆಗಳಿಗೆ ನಿಗದಿಪಡಿಸಿದ ಕರ್ತವ್ಯ ಮತ್ತು ಜವಾಬ್ದಾರಿಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಹಾಗೂ ಹಾಲಿ ಇರುವ ಸ್ಥಳಗಳಲ್ಲಿಯೇ ಈ ಹುದ್ದೆಗಳು ಅಸ್ತಿತ್ವದಲ್ಲಿರುತ್ತವೆ.
4) ಪುನರ್ ಪದನಾಮೀಕರಣದ ನಂತರ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಸೂಕ್ತ ತಿದ್ದುಪಡಿ ಮಾಡುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ/44/ಸೇ-3/2023, ದಿನಾಂಕ: 19-04-2023 ಹಾಗೂ ಆಇ/127/EXP9/2023 ದಿನಾಂಕ: 24-04-2023 ರಲ್ಲಿನ ಸಹಮತಿಯಂತೆ ಹೊರಡಿಸಿದೆ.

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

Vijaya. N
8/5/2023
(ವಿಜಯ.ಎನ್)
ಪೀಠಾಧಿಕಾರಿ-5
ಕಾರ್ಮಿಕ ಇಲಾಖೆ,
(ಕಾ.ರಾ.ವಿ.ಯೋ.ವೈ ಸೇವೆಗಳು)

ಇವರಿಗೆ,

1. ಪ್ರಧಾನ ಮಹಾಲೇಖಪಾಲರು (ಲೆಕ್ಕಪತ್ರ ಮತ್ತು ಲೆಕ್ಕಪತ್ರ ತಪಾಸಣೆ), ಕರ್ನಾಟಕ. ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂ: 5329, ಬೆಂಗಳೂರು-1
2. ನಿರ್ದೇಶಕರು, ಕಾರಾವಿ ಯೋಜನೆ ವೈದ್ಯಕೀಯ ಸೇವೆಗಳ ನಿರ್ದೇಶನಾಲಯ, ರಾಜಾಜಿನಗರ, ಬೆಂಗಳೂರು.
3. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿ.

**ಪ್ರತಿಯನ್ನು:-**

1) ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಾರ್ಮಿಕ ಇಲಾಖೆ.
2) ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಶಾಖೆ, ಕಾರ್ಮಿಕ ಇಲಾಖೆ.